ಜನಶಕ್ತಿ

ದುಡಿವ ಜನರ ಪ್ರಾಣಮಿತ್ರ

ಕನ್ನಡ ವಾರಪತ್ರಿಕೆ

ಸಂಪುಟ 2 ಸಂಚಿಕೆ 6

ಫೆಬ್ರವರಿ 10 2008


ರೂ. 5/-

ಅತ್ತ ಜಗಮಗ ಇತ್ತ ಧಗಧಗ
ಇದು ನಮ್ಮ ಬೆಂಗಳೂರು





ಭಯೋತ್ಪಾದನೆ : ಯಾಕಿಷ್ಟು 'ಸುದ್ದಿ ಸಂಭ್ರಮ'?



ಭಾರತ ಗುಜರಾತ್ ಅಲ್ಲ



ಮಂಗಳನ ಅಂಗಳದಲ್ಲಿ ಮಹಿಳೆಯಾ?

ಸೂತ್ರವಿಲ್ಲದ ಗಾಳಿಪಟ





ದುಡಿಯುವವರ ದನಿಯಾಗಿದ್ದ ವ್ಯಾಸರಾಯ ಬಲ್ಲಾಳ

ದುಡಿಯುವ ಜನರ ಚಳುವಳಿಯಿಂದ ಮೂಡಿಬಂದ ಮಹತ್ವದ ಸಾಹಿತಿ ವ್ಯಾಸರಾಯ ಬಲ್ಲಾಳ

ಜಿ.ಎನ್.ನಾಗರಾಜ್

ಕನ್ನಡದ ಹಿರಿಯ ಸಾಹಿತಿ ನಮ್ಮನ್ನು ಅಗಲಿದ್ದಾರೆ. ಸಾಹಿತ್ಯ ಲೋಕಕ್ಕೆ, ನಾಡಿಗೆ ಅವರು ನೀಡಿದ ಕೊಡುಗೆ ನಿಜಕ್ಕೂ ಮಹತ್ವದ್ದು.

ಕನ್ನಡ ಸಾಹಿತ್ಯಲೋಕದಲ್ಲಿ ಒಬ್ಬ ಪ್ರಮುಖ ಕಾದಂಬರಿಕಾರರಾಗಿ, ಕಥೆಗಾರರಾಗಿ ಪ್ರಸಿದ್ಧರಾಗಿದ್ದ ವ್ಯಾಸಾರಾಯ ಬಲ್ಲಾಳರನ್ನು ಕರ್ನಾಟಕದ ಸಾಹಿತ್ಯ ಪ್ರಿಯರೆಲ್ಲರೂ ನೆನಸಿಕೊಂಡು ಕಂಬನಿ ಮಿಡಿಯುತ್ತಿದ್ದಾರೆ. ಕರ್ನಾಟಕದ ದುಡಿಯುವ ಜನರಂತೂ ಬಲ್ಲಾಳರು ದುಡಿಯುವ ಜನರ ಚಳುವಳಿಗೆ ನೀಡಿದ ಸಾಹಿತ್ಯಿಕ ಹಾಗೂ ಸಂಘಟನಾತ್ಮಕ ಕಾಣಿಕೆಯನ್ನು ಸದಾ ಸ್ಮರಿಸಬೇಕಾಗಿದೆ.

ಉಡುಪಿಯ ಬಳಿಯ ನಿಡಂಬೂರಿನಲ್ಲಿ 1923 ರ ಡಿಸೆಂಬರ್ 1 ರಂದು ಜನಿಸಿದ ಬಲ್ಲಾಳರು ಮೆಟ್ರಿಕ್ ನಂತರ ವಿದ್ಯಾಬ್ಯಾಸ ಮುಂದುವರೆಸಲಾಗದೆ ಸಣ್ಣ ವಯಸ್ಸಿನಲ್ಲಿಯೇ ಉದ್ಯೋಗವನ್ನರಸಿ ಕರಾವಳಿಯ ಸಾವಿರಾರು ಯುವಕರಂತೆ ಮುಂಬಯಿ ಸೇರಿದರು. ಮುಂಬಯಿಯಲ್ಲಿ ತೈಲ ಕಂಪನಿಯೊಂದರಲ್ಲಿ ಉದ್ಯೋಗಿಯಾಗಿರುವಾಗಲೇ ತನ್ನಂತೆಯೇ ವಿದ್ಯಾಭ್ಯಾಸ ವಂಚಿತರಾದ ಸಾವಿರಾರು ಮಂದಿಯ ಸಲುವಾಗಿ ಕಾರ್ಮಿಕ ಚಳುವಳಿ ಆರಂಭಿಸಿದ್ದ ರಾತ್ರಿಶಾಲೆಗಳಲ್ಲಿ ಭಾಗಿಯಾದರು, ಸಂಘಟಕರಾದರು. ಹೋಟೆಲ್ ಮತ್ತಿತರ ಕಾರ್ಮಿಕರ ಬದುಕಿನ ಬವಣೆಗಳನ್ನು ಅರಿತುಕೊಂಡರು. ಕಾರ್ಮಿಕ ಚಳುವಳಿಗಳಲ್ಲಿಯೂ ಪಾಲುಗೊಂಡರು.


ಕಾರ್ಮಿಕ ಚಳುವಳಿ ಜೊತೆಜೊತೆಯಲ್ಲಿಯೇ 'ನುಡಿ' ಎಂಬ ಕನ್ನಡ ಪತ್ರಿಕೆಯಲ್ಲಿ ಕೆಲಸ ಮಾಡಲಾರಂಭಿಸಿದರು. ಮುಂಬಯಿ ನಗರದ ಒಳಹೂರಣವನ್ನು ಅನ್ವೇಷಿಸಲು ಸಾಧನವಾದಂತೆಯೆ ಅದನ್ನು ನುಡಿ ರೂಪದಲ್ಲಿಡಲು 'ನುಡಿ' ಬಳಗದಲ್ಲಿನ ಕೆಲಸ ನೆರವಾಯಿತು.

1936 ರಲ್ಲಿ ಭಾರತವನ್ನು ಪ್ರಭಾವಿಸಿದ್ದ ಪ್ರಗತಿಶೀಲ ಚಳುವಳಿ ಮುಂಬೈಯಲ್ಲಿ ಸಾಹಿತ್ಯ ರಂಗಭೂಮಿ ಕಲೆ, ಸಿನೆಮಾಗಳಲ್ಲಿ ಸಾಕಷ್ಟು ದೀರ್ಘಕಾಲ ಪ್ರಭಾವಶಾಲಿಯಾಗಿತ್ತು.

ಪ್ರಗತಿಶೀಲ ಸಾಹಿತ್ಯದ ಚಳುವಳಿ ಕೇವಲ ಕರ್ನಾಟಕದ, ಭಾರತದ ಚಳುವಳಿ ಮಾತ್ರವಾಗಿರದೆ ವಿಶ್ವ ಮಟ್ಟದ ಫ್ಯಾಸಿಸ್ಟ್ ವಿರೋಧಿ ವಿಶಾಲ ಸಾಂಸ್ಕೃತಿಕ ಚಳುವಳಿಯ ಭಾಗವಾಗಿತ್ತು. ಸಮಾಜವಾದಿ ಸಾಹಿತ್ಯದ ಗಾಢವಾದ ಪ್ರಭಾವಕ್ಕೊಳಗಾಗಿತ್ತು. ಕಾರ್ಮಿಕ ಚಳುವಳಿಯ ನೋಟ ಹಾಗೂಪ್ರಗತಿಶೀಲ ಸಾಹಿತ್ಯದ ಪ್ರಭಾವ ಬಲ್ಲಾಳರಲ್ಲಿ ಸಮಾಜದ ಬಗ್ಗೆ, ಮಹಿಳೆಯರ ಬಗ್ಗೆ, ದುಡಿಯುವ ಜನರ ಬಗ್ಗೆ ಅನೇಕ ಒಳನೋಟಗಳನ್ನು ನೀಡಿತು. ಬಲ್ಲಾಳರ ಸಾಹಿತ್ಯ ಈ ಮಾನವೀಯ ಮಿಡಿತ ಹಾಗೂ ಪ್ರಗತಿಶೀಲ ಕಂಪಿನಿಂದ ಜನ ಪರ ಕಾಳಜಿಗಳ ನೆಲೆಯಾಯಿತು.

ಅವರ ಕಥಾಸಂಕಲನಗಳಾದ ಬದುಕಿನ ಆದರ್ಶ, ಕಾಡುಮಲ್ಲಿಗೆ, ಸಂಪಿಗೆಯ ಹೂ, ಮಂಜರಿ, ತ್ರಿಕಾಲ, ಕಾದಂಬರಿಗಳಾದ ಅನುರಕ್ತೆ, ಹೇಮಂತಗಾನ, ವಾತ್ಸಲ್ಯಪಥ, ಉತ್ತರಾಯಣ, ಬಂಡಾಯ, ಹೆಜ್ಜೆ, ಹೆಜ್ಜೆಗುರುತು, ಪ್ರಬಂಧಗಳಾದ ಕಟ್ಟುವೆವು ನಾವು, ಸ್ವಾತಂತ್ರ್ಯಕ್ಕೆ 50 ವರ್ಷ, ಇವುಗಳು ತಮ್ಮ ಮಾನವೀಯ, ಸಾಮಾಜಿಕ ಕಾಳಜಿಗಳಿಂದ ಓದುಗರ ಮನಸ್ಸನ್ನು ಮಿಡಿದಿವೆ.

ಅವರಿಗೆ ಕೇಂದ್ರ ಸಾಹಿತ್ಯ ಅಕಾಡೆಮಿ ಪ್ರಶಸ್ತಿಯನ್ನು ತಂದುಕೊಟ್ಟ 'ಬಂಡಾಯ' ಕಾರ್ಮಿಕರ ಬದುಕಿನ ಸಂಕಟಗಳು, ಕಾರ್ಮಿಕ ಚಳುವಳಿಗಳನ್ನು



ದಿಕ್ಕು ತಪ್ಪಿಸುವ ಕೆಡುಕತನದ ಶಕ್ತಿಗಳನ್ನು ಬಿಚ್ಚಿಡುವ ಒಂದು ಅಪರೂಪದ ಕಾದಂಬರಿಯಾಗಿದೆ.

ಬಲ್ಲಾಳರ ಸಾಹಿತ್ಯಿಕ ಕೊಡುಗೆಯ ಮಹತ್ವವನ್ನು ಕನ್ನಡ ಸಾಹಿತ್ಯಲೋಕ ಇನ್ನೂ ಅರಳಬೇಕಾಗಿರುವ ಹೊಸ ಪರಂಪರೆಯ ನಿವಪ್ರಾತ್ಯ ಎಂದು ಗುರುತಿಸಬೇಕಾಗಿದೆ. ಒಂದು ಕಡೆ ಕನ್ನಡದ ಪ್ರಮುಖ ಕಾದಂಬರಿಗಳ ಜೊತೆ ಮತ್ತೊಂದು ಕಡೆ ಮುಂಬಾಯಿ ನಗರ ಜೀವಿಗಳಾಗಿದ್ದ ಯಶವಂತಚಿತ್ತಾಲ, ಶಾಂತಿನಾಥ ದೇಸಾಯಿ, ವಿ.ಎಂ.ಇಮಾಂದಾರ, ಮೊದಲಾದ ಕಾದಂಬರಿಕಾರರ ಜೊತೆ ತುಲಾನಾತ್ಮಕ ಅಧ್ಯಯನದಿಂದ ಹೊರ ಹೊಮ್ಮಬೇಕಾದ ಸತ್ಯ ಇದು.

ಕನ್ನಡದ ಪ್ರಮುಖ ಕಾದಂಬರಿಕಾರರು ಕರ್ನಾಟಕದ ಗ್ರಾಮೀಣ ಜೀವನದ ವಿವಿಧ ಮಗ್ಗಲುಗಳನ್ನು, ಪಾಳೆಗಾರಿಕೆ ಸಮಾಜವನ್ನು ಮತ್ತು ಅಲ್ಲಿನ ಶೋಷಣೆಯ ಕ್ರೌರ್ಯವನ್ನು ಚಿತ್ರಿಸಿದ್ದಾರೆ. ಆದರೆ ಅದೇ ಸಮಯದಲ್ಲಿ ಮುಂದೆ ಅವರು ಬದುಕಿದ ನಗರಗಳ ಶೋಷಣೆಯ ಸ್ವರೂಪವನ್ನು ಅದರ ಸೂಕ್ಷ್ಮತೆಯನ್ನು ಅರ್ಥ ಮಾಡಿಕೊಳ್ಳುವುದರಲ್ಲಿ ವಿಫಲರಾಗಿದ್ದಾರೆ. ಹೀಗಾಗಿ ಅವರ ಸಾಹಿತ್ಯಕ ಪ್ರತಿಭೆ ಕೆಲವೇ ಕಾದಂಬರಿ, ಕಥೆಗಳಿಗೆ ಸೀಮಿತವಾಗುವಂತಾಗಿದೆ. ಅದೇ ಸಮಯದಲ್ಲಿ ಇಂದು ಭಾರತದಲ್ಲಿ ಪ್ರಧಾನವಾಗಿರುವ ಬಂಡವಾಳಶಾಹಿಯ ಸ್ವರೂಪ ಮತ್ತು ಅದರ ಶೋಷಣೆಯ ವಿವಿಧ ಮುಖಗಳ ಜ್ಞಾನ ಕನ್ನಡದ ಓದುಗರಿಗೆ ದಕ್ಕದಂತಾಗಿದೆ. ಅದರಿಂದಾಗಿ ಕನ್ನಡದ ಪ್ರಜ್ಞಾ ವಲಯವನ್ನು ವಿಸ್ತರಿಸುವ ಸಮಕಾಲಿನ ಸವಾಲುಗಳಿಗೆ ಸ್ಪಂದಿಸುವಂತೆ ಮಾಡುವ ಅವಕಾಶಗಳನ್ನು ಸಂಕುಚಿತಗೊಳಿಸಿದೆ. ಹೀಗಾಗಿ ಬಲ್ಲಾಳರನ್ನು ಹೊಸ ಪರಂಪರೆಯೊಂದರ ಪ್ರಾರಂಭದ ಲೇಖಕರಾಗಿ ಕಂಡು ಮುಂದಿನ ಬರಹಗಾರರು ನಗರ ಜೀವನದ ಶೋಷಣೆಯ ವಿಧಾನಗಳನ್ನು, ಅದರಿಂದ ಸಮಾಜದ ಮೇಲಾಗುವ ಪರಿಣಾಮವನ್ನು ಹೃದಯ ತಟ್ಟುವಂತೆ ಬಿಚ್ಚಿಡುವ ಹೊಸ ಪಥವನ್ನು ಕಂಡುಕೊಳ್ಳಬೇಕಾಗಿದೆ.

'ನೈಜ ಪರ್ಯಾಯ ರೂಪಿಸುವುದು ನಮ್ಮ ಮುಂದಿನ ಸವಾಲು'

ಸಿಪಿಐ(ಎಂ) ಅಖಿಲ ಭಾರತ ಮಹಾಧಿವೇಶನದ 'ಅಜೆಂಡಾ' ಕುರಿತು ಕಾಂ. ವರದರಾಜನ್


ಸಿಪಿಐ(ಎಂ) ಪಕ್ಷದ ಪೊಲಿಟ್ ಬ್ಯೂರೋ ಸದಸ್ಯರೂ ಮತ್ತು ಅಖಿಲ ಭಾರತ ಕಿಸಾನ್ ಸಭಾದ ಪ್ರಧಾನ ಕಾರ್ಯದರ್ಶಿಗಳೂ ಆದ ಕಾ: ಕೆ.ವರದರಾಜನ್‌ರವರು ಮಾರ್ಚ್ 2008ರಲ್ಲಿ ಕೊಯಮತ್ತೂರಿನಲ್ಲಿ ನಡೆಯುವ ಸಿಪಿಐ(ಎಂ) ಪಕ್ಷದ ರಾಷ್ಟ್ರೀಯ ಮಹಾಧಿವೇಶನದ ಕುರಿತು ಉತ್ತರಿಸಿರುವ ಕೆಲವು ಮಾತುಗಳು ಇಲ್ಲಿವೆ:

ಜ.ಶ.: ರಾಷ್ಟ್ರೀಯ ಮಹಾಧಿವೇಶನದ ಮುಂದಿರುವ ಪ್ರಮುಖ ವಿಷಯಗಳೇನು?

ಕೆ.ವಿ.: ಕೋಮುವಾದಿ ಪಕ್ಷಗಳು ಬಹುಧರ್ಮೀಯ ಐಕ್ಯ ರಾಷ್ಟ್ರವನ್ನು ದುರ್ಬಲಗೊಳಿಸಲು ಯತ್ನಿಸುತ್ತಿವೆ. ಸಾಮ್ರಾಜ್ಯಶಾಹಿ ನಾಯಕತ್ವದಲ್ಲಿರುವ ಬಂಡವಾಳಶಾಹಿ ವರ್ಗವು ದುಡಿಯುವ ಜನತೆಯ ಮೇಲೆ ಇನ್ನಿಲ್ಲದಂಥ ಧಾಳಿಗಳನ್ನು ಮಾಡುತ್ತಿದೆ. ಕಳೆದ ನಾಲ್ಕು ವರ್ಷಗಳಿಂದ ಕೇಂದ್ರದಲ್ಲಿ ಅಧಿಕಾರದಲ್ಲಿರುವ ಯುಪಿಎ ಸರ್ಕಾರದ ಜನ-ವಿರೋಧಿ ನೀತಿಗಳು ಮತ್ತು ಈ ಸರ್ಕಾರವು ಜನಪರ ನೀತಿಗಳನ್ನು ಜಾರಿಗೊಳಿಸುವಂತೆ ಒತ್ತಾಯ ಮಾಡುವಲ್ಲಿನ ನಮ್ಮ ಅನುಭವಗಳನ್ನು ಕುರಿತು ಚರ್ಚೆ ನಡೆಸಲಾಗುತ್ತದೆ. ದಲಿತರು ಮತ್ತು ಇತರೆ ಶೋಷಿತ ಜನತೆಯ ಮೇಲಾಗುತ್ತಿರುವ ದೌರ್ಜನ್ಯಗಳು ಮತ್ತು ಇದರ ವಿರುದ್ಧ ಐಕ್ಯಹೋರಾಟವನ್ನು ರೂಪಿಸುವ ಕುರಿತು, ಆದಿವಾಸಿ ಜನತೆ ಮತ್ತು ಮಹಿಳೆಯರ ಹಕ್ಕುಗಳು ಹಾಗೂ ಕೇಂದ್ರ-ರಾಜ್ಯ ಸಂಬಂಧಗಳ ಕುರಿತು ಚರ್ಚೆ ನಡೆಸಲಾಗುತ್ತದೆ.

ಜ.ಶ.: ಅಖಿಲ ಭಾರತ ಮಹಾಧಿವೇಶನದ ಸಿದ್ಧತಾ ಕಾರ್ಯ ಹೇಗೆ ಸಾಗಿದೆ?

ಕೆ.ವಿ.: ಈ ಮಹಾಧಿವೇಶನ ನಡೆಸಿಕೊಡುವ ಅವಕಾಶ ದೊರೆತಿರುವುದಕ್ಕೆ ತಮಿಳುನಾಡು ಸಿಪಿಐ(ಎಂ) ರಾಜ್ಯ ಸಮಿತಿಯು ಅತೀವ



ಸಂತೋಷಗೊಂಡಿದೆ. ಸಾರ್ವಜನಿಕ ನಿಧಿ ಸಂಗ್ರಹ ಕಾರ್ಯ ಭರದಿಂದ ಸಾಗಿದ್ದು ಸುಮಾರು ರೂ. 1.50 ಕೋಟಿ ಸಂಗ್ರಹದ ನಿರೀಕ್ಷೆಯಿದೆ. ಪ್ರಚಾರಕಾರ್ಯಗಳು ಆರಂಭವಾಗಿದ್ದು, ಆಡಿಯೋ, ವೀಡಿಯೋ ಕ್ಯಾಸೆಟ್ಟುಗಳನ್ನು ರಾಜ್ಯದಾದ್ಯಂತ ವಿತರಿಸಲಾಗುತ್ತಿದೆ. ಒಂದು ವಾರ ಕಾಲ 15 ಕಲಾವಿದರ ಗುಂಪುಗಳು ಇಡೀ ತಮಿಳುನಾಡು ರಾಜ್ಯದಾದ್ಯಂತ ಸಂಚರಿಸಿ ಪ್ರದರ್ಶನ ನೀಡಲಿವೆ. ಮಹಾಧಿವೇಶನದ ಕೊನೆಯ ದಿನ ನಡೆಯುವ ಬಹಿರಂಗ ರ‍್ಯಾಲಿಯಲ್ಲಿ 2.50 ಲಕ್ಷಕ್ಕೂ ಹೆಚ್ಚು ಜನರು ಸೇರುವ ನಿರೀಕ್ಷೆಯಿದೆ.

ಜ.ಶ.: ಇತರೆ ರಾಜ್ಯ ಸಮ್ಮೇಳನಗಳು ಕುರಿತು......

ಕೆ.ವಿ.: ಮೂರ್‍ನಾಲ್ಕು ರಾಜ್ಯಗಳನ್ನು ಹೊರತುಪಡಿಸಿದರೆ, ಬೇರೆಲ್ಲ ರಾಜ್ಯಗಳ ಸಮ್ಮೇಳನಗಳು ಪೂರ್ಣಗೊಂಡಿವೆ. ಪಕ್ಷದ ಸದಸ್ಯರು ಅತ್ಯುತ್ಸಾಹವನ್ನು ಹೊಂದಿದ್ದಾರೆ. ಎಲ್ಲಕಡೆ, ಶೇ. 50ಕ್ಕೂ ಹೆಚ್ಚಿನ ಸಮ್ಮೇಳನದ ಪ್ರತಿನಿಧಿಗಳು 40ವರ್ಷದೊಳಗಿನ ವಯೋಮಾನದವರಾಗಿದ್ದು, ಚಳುವಳಿಯ ವ್ಯಾಪಕ ಬೆಳವಣಿಗೆಯ ಗುಣವನ್ನು ಹೊಂದಿದೆ. ಮಹಿಳೆಯರು, ದಲಿತರು ಮತ್ತು ಆದಿವಾಸಿಗಳು ಹಿಂದೆಂದಿಗಿಂತಲೂ ಹೆಚ್ಚಿನ ಸಂಖ್ಯೆಯಲ್ಲಿ ಪಾಲ್ಗೊಳ್ಳುತ್ತಿದ್ದಾರೆ.

ಜ.ಶ.: ಪ್ರಸಕ್ತ ಸನ್ನಿವೇಶದಲ್ಲಿ ಪಕ್ಷದ ಮುಂದಿರುವ ಸವಾಲುಗಳೇನು?

ಕೆ.ವಿ. : ಜಾಗತೀಕರಣ- ಉದಾರೀಕರಣ- ಖಾಸಗೀಕರಣ ನೀತಿಗಳ ವಿರುದ್ಧ ನೈಜ ಪರ್ಯಾಯವನ್ನು ರೂಪಿಸುವುದು ನಮ್ಮ ಮುಂದಿರುವ ಸವಾಲಾಗಿದೆ. ಹೆಚ್ಚೆಚ್ಚು ಜನರ ವಿಶ್ವಾಸಗಳಿಸಿ ಸ್ವತಂತ್ರ ಹೋರಾಟಗಳ ಮೂಲಕ ಹೊಸ ಪ್ರದೇಶಗಳಿಗೆ ಚಳುವಳಿಯನ್ನು ಹೆಚ್ಚಿಸಿ ವಿಸ್ತರಿಸುವುದು ಪ್ರಮುಖ ಕರ್ತವ್ಯವಾಗಿದೆ.

ಜ.ಶ.: ಸಿಪಿಐ(ಎಂ) ನ ಕರ್ನಾಟಕ ರಾಜ್ಯ ಸಮ್ಮೇಳನದ ಕುರಿತು.......

ಕೆ.ವಿ.: ಬಹಳ ಮೆಚ್ಚುಗೆಯ ಸಮ್ಮೇಳನ ಇದಾಗಿದೆ. ಪ್ರಮುಖವಾಗಿ ಯುವಜನರು ಭಾಗವಹಿಸಿದ್ದು, ಚರ್ಚೆಯಲ್ಲಿನ ಗಂಭೀರತೆ, ನೈಜ ಸಮಸ್ಯೆಗಳನ್ನು ಕಂಡುಹಿಡಿಯಲೆತ್ನಿಸಿದ್ದು, ಮತ್ತು ಹೋರಾಟ ನಡೆಸಲು ಅವರು ವಿಶ್ವಾಸ ವ್ಯಕ್ತಪಡಿಸಿದ್ದು ಮೆಚ್ಚುಗೆಯ ಅಂಶಗಳಾಗಿವೆ. ಅದರಲ್ಲೂ ಸಮ್ಮೇಳನದಲ್ಲಿ, ರ‍್ಯಾಲಿಯಲ್ಲಿ ಮತ್ತು ಚರ್ಚೆಗಳಲ್ಲಿ ಮಹಿಳಾ ಪ್ರತಿನಿಧಿಗಳು ತೊಡಗಿಸಿಕೊಂಡದ್ದು ಒಳ್ಳೆಯ ಬೆಳವಣಿಗೆಯಾಗಿವೆ.

ಸಂದರ್ಶನ: ಜಯ

ಸಂಪಾದಕೀಯ

ಪ್ರಜಾಸತ್ತಾತ್ಮಕ ಹಕ್ಕುಗಳು ಮೊಟಕಾಗದಿರಲಿ

ಮೆರವಣಿಗೆ, ಮತಪ್ರದರ್ಶನ, ರ್‍ಯಾಲಿ, ಬಹಿರಂಗ ಸಭೆ ಇತ್ಯಾದಿಗಳ ಕುರಿತಂತೆ ಕೆಲವು ಬುದ್ಧಿಜೀವಿಗಳು, ವಕೀಲರು ಸಲ್ಲಿಸಿದ್ದ ಸಾರ್ವಜನಿಕ ಅರ್ಜಿಯ ವಿಚಾರಣೆಯನ್ನು ಹೈಕೋರ್ಟ್ ಕೈಗೆತ್ತಿಕೊಂಡು ವಿಚಾರಣೆಯ ಪ್ರಕ್ರಿಯೆಯನ್ನು ತೀವ್ರಗೊಳಿಸಿರುವುದನ್ನು ಗಂಭೀರವಾಗಿ ಪರಿಗಣಿಸಬೇಕಿದೆ. ಕೋಮುವಾದಿ ಸಂಘಟನೆಗಳು ವಿವಿಧ ನೆಪವೊಡ್ಡಿ ರಾಜ್ಯದಲ್ಲಿ ಸಾರ್ವಜನಿಕ ಆಸ್ತಿ, ಜೀವ ನಾಶಗೊಳಿಸಿಸುತ್ತಿದ್ದು, ಬಾಬಾಬುಡನ್‌ಗಿರಿಯಲ್ಲಿ ದರ್ಗಾ ಪೀಠದ ವಿವಾದವನ್ನು ಬಳಸಿ ಕೋಮುಗಲಭೆಯೆಬ್ಬಿಸುತ್ತಿದ್ದ ಹಿನ್ನೆಲೆಯಲ್ಲಿ ಇಂತಹ ಅರ್ಜಿಯನ್ನು ಹಾಕಿತ್ತಾದರೂ ಇದು ಹಾಗೆ ವ್ಯಾಪ್ತಿ ವಿಸ್ತರಣೆಗೊಂಡು ಜನತೆಯ ಇಡೀ ಪ್ರಜಾಸತ್ತಾತ್ಮಕ ಹಕ್ಕುಗಳನ್ನೇ ಆಳುವವರು ಮೊಟಕುಗೊಳಿಸಲು ಬಳಸುವ ಅಪಾಯವಿದೆ.


ಈ ಬಗ್ಗೆ ಸರ್ಕಾರವು ಅಫಿಡವಿಟ್ ಸಲ್ಲಿಸಬೇಕೆಂದೂ, ಸಕಾಲದಲ್ಲಿ ಸಲ್ಲಿಸಲಿಲ್ಲವೆಂದು ಸರ್ಕಾರಕ್ಕೆ ಹತ್ತು ಸಾವಿರ ರೂಪಾಯಿಗಳ ದಂಡ ವಿಧಿಸಿರುವುದು, ಆ ಬಳಿಕ ಸರ್ಕಾರ ಅಫಿಡವಿಟ್ ಸಲ್ಲಿಸಿರುವುದು ವಿಷಯದ ತೀವ್ರತೆಯನ್ನು ವ್ಯಕ್ತಗೊಳಿಸುತ್ತದೆ.

ಭಾರತ ದೇಶದ ಸಂವಿಧಾನವು ತನ್ನ ಪ್ರಜೆಗಳಿಗೆ ನೀಡಿರುವ ಮೂಲಭೂತ ಹಕ್ಕುಗಳಲ್ಲಿ ಅಭಿವ್ಯಕ್ತಿ ಸ್ವಾತಂತ್ರ್ಯ - ಪ್ರತಿಭಟನೆಯ ಹಕ್ಕು ಮಹತ್ವದ್ದು. ಇಂತಹ ಹಕ್ಕನ್ನು ಮೊಟಕುಗೊಳಿಸಿ, ಜನತೆಯ ಸ್ವಾತಂತ್ರ್ಯವನ್ನು ದಮನಗೊಳಿಸಿದ್ದ ಬ್ರಿಟೀಶರ ಆಡಳಿತದ ವಿರುದ್ಧ ದೇಶದ ಜನತೆ ಅಪಾರ ತ್ಯಾಗ - ಬಲಿದಾನಗೈದು, ಸ್ವಾತಂತ್ರ್ಯವನ್ನು ಪಡೆದಾಗಿದೆ. ಹೀಗಾಗಿ ಇಂತಹ ಹಕ್ಕು ಯಾರೋ ಮಹನೀಯರು, ಆಳುವ ಪ್ರಭುಗಳು ದಯಪಾಲಿಸಿದ ಭಿಕ್ಷೆಯಲ್ಲ. ಹೋರಾಡಿ ಪಡೆದ ಹಕ್ಕಾಗಿದೆ. ಆದ್ದರಿಂದ ಇಂತಹ ಹಕ್ಕನ್ನು ಜನತೆ ಪರಿಣಾಮಕಾರಿಯಾಗಿ ಬಳಸಲು ಮುಕ್ತ ಅವಕಾಶವೂ ದತ್ತವಾಗಿದೆ. ಸ್ವಾತಂತ್ರ್ಯದ ನಂತರದಲ್ಲಿ ಹಲವಾರು ಮಿತಿಗಳ ನಡುವೆಯೂ ಅಂತಹ ಅಭಿವ್ಯಕ್ತಿಗೆ ಒಂದಿಷ್ಟು ಅವಕಾಶ ದೊರೆತಿದೆ. ಅದನ್ನು ಉಳಿಸಿಕೊಳ್ಳಲು ತೀವ್ರ ಸೆಣಸಾಟವೂ ಇದೆ.

ಇಂತಹ ಮಿತಿಯಲ್ಲಿರುವ ಜನತೆಯ ಹಕ್ಕಿನ ಬಳಕೆಯು ಆಳುವ ವರ್ಗಗಳಿಗೆ ತೀವ್ರ ಕಿರಿಕಿರಿ, ತಲೆ ನೋವು ಎಂದೇ ಭಾವಿಸಿ ಅದನ್ನು ಮೊಟಕುಗೊಳಿಸಬಯಸುತ್ತಿದ್ದಾರೆ. ವಿಶೇಷವಾಗಿ ಜಾಗತೀಕರಣ - ಉದಾರೀಕರಣದ ಜನದ್ರೋಹಿ ಆರ್ಥಿಕ ನೀತಿಗಳು, ತೀವ್ರ ಅತೃಪ್ತಿ ಹುಟ್ಟುಹಾಕಿದ್ದು ಹೆಚ್ಚು ಹೆಚ್ಚಾಗಿ ಜನತೆ ಬೀದಿಗಿಳಿದು ಆಳುವವರೊಂದಿಗೆ, ಆಡಳಿತದೊಂದಿಗೆ ಸಂಘರ್ಷಕ್ಕೂ ಇಳಿಯುತ್ತಿದ್ದಾರೆ. ಅನೇಕ ಬಾರಿ ಅಂತಹ ಪ್ರತಿಭಟನೆಗಳು ಶಾಂತಿಯುತವಾಗಿ ಇರುತ್ತವೆ. ರಾಜ್ಯದಲ್ಲಿಯೂ ಅಂತಹ ಪ್ರತಿಭಟನೆಗಳ ಹೆಚ್ಚಳವು ಇದನ್ನೇ ಧ್ವನಿಸುತ್ತದೆ. ಆದರೆ ಸಾರ್ವಜನಿಕ ಸಾರಿಗೆಗೆ ತೊಂದರೆಯಾಗುವುದೆಂದು ಇಂತಹ ಪ್ರತಿಭಟನೆಯನ್ನು ನಗರದಿಂದಲೇ ಹೊರದೂಡಲು ಯತ್ನಿಸಲಾಗುತ್ತಿದೆ. ಹೀಗಾಗಿ ವಿಧಾನಸೌಧದೆದುರಿನ ಪ್ರತಿಭಟನೆಯ ಸ್ಥಳ ಈಗ ಬೆಂಗಳೂರಿನ ಮೂಲೆಗಳಿಗೆ ತಳ್ಳಲಾಗುತ್ತಿದೆ. ಹಳೆಯ ಕೇಂದ್ರ ಕಾರಾಗೃಹದ ಜಾಗ ನೀಡುವ ಸರ್ಕಾರದ ಮಾತು ಕೃತಿಗೆ ಇಳಿಯಲೇ ಇಲ್ಲ.

ಅವಘಡಗಳು ಸಂಭವಿಸಿದರೆ ಈಗ ಮೆರವಣಿಗೆ - ಪ್ರದರ್ಶನಗಳ ಸಂಘಟಕರಿಂದಲೇ ಹಣ ವಸೂಲು ಮಾಡಬೇಕೆಂಬುದಾಗಲೀ, ಹಣ ಠೇವಣಿ ಇಡಬೇಕೆಂಬ ಸರ್ಕಾರದ ಅಫಿಡವಿಟ್, ಪ್ರಜಾಸತ್ತಾತ್ಮಕ ಹಕ್ಕು ದಮನಿಸುವ ಆಳುವವರ್ಗಗಳ ಮನೋಭಾವವನ್ನು ತೋರಿಸುತ್ತದೆ. ಈಗಾಗಲೇ ಬಂದ್‌ನಂತಹ ಪ್ರತಿಭಟನೆಗಳನ್ನು ನಿಷೇಧಿಸಿರುವ ನ್ಯಾಯಾಲಯದ ಕೆಲವು ಕ್ರಮಗಳ ತೀರ್ಪನ್ನು ದೇಶದ ಇತರೆಡೆ ನೋಡಿದಾಗ ನ್ಯಾಯಾಲಯಗಳು ಇಂತಹ ಪ್ರಭಾವದಿಂದ ಹೊರಗಿರಲು ಸಾಧ್ಯವೇ ಎಂಬ ಪ್ರಶ್ನೆ ಉದ್ಭವಿಸುತ್ತದೆ. ಅಪಾರ ತ್ಯಾಗದಿಂದ ಗಳಿಸಿದ ಹಕ್ಕನ್ನು ಉಳಿಸಿಕೊಳ್ಳಲು ಎಲ್ಲಾ ಪ್ರಜಾಸತ್ತಾತ್ಮಕ ಶಕ್ತಿಗಳು ಎಚ್ಚರ ವಹಿಸಬೇಕಿದೆ. ○

ಭಯೋತ್ಪಾದನಾ ಶಂಕೆ : 'ಸುದ್ದಿಸಂಭ್ರಮ'ವೇಕೆ?



ಉಗ್ರಗಾಮಿಗಳ ಜಾಲ ಹಾಗೂ ಸಂಚುಗಳ ಬಗ್ಗೆ ಕರ್ನಾಟಕದಲ್ಲೀಗ ಮತ್ತೆ ದೊಡ್ಡ ಸುದ್ದಿಗಳು ಚಾಲ್ತಿಯಲ್ಲಿವೆ. ಬೈಕ್ ಕಳ್ಳನೆಂದು ಬಂಧಿಸಿದಾಗ ವಿಚಾರಣೆಗೊಳಪಡಿಸಿದಾಗ ಆತನಿಗೆ ಉಗ್ರಗಾಮಿ ಸಂಬಂಧ ಇರಬಹುದು ಎಂಬಲ್ಲಿಂದ ಆರಂಭಗೊಂಡ ಈ ಸುದ್ದಿಗಳು ಇನ್ನೂ ಕೆಲವು ಸೇರಿ ಕಲಘಟಗಿ ಗ್ರಾಮದಿಂದ 20 ಕಿ.ಮಿ. ದೂರದಲ್ಲಿರುವ ಗಣಶೆಟ್ಟಿ ಕೊಪ್ಪಕೆರೆಯ ದಟ್ಟ ಕಾಡುಗಳಲ್ಲಿ ಸಶಸ್ತ್ರ ತರಬೇತಿ ಪಡೆದಿದ್ದಾರೆ, ಹುಬ್ಬಳ್ಳಿ ಹಾಸ್ಟೆಲ್‌ಗಳಲ್ಲಿ 'ಜೆಹಾದಿ' ಬೋಧಿಸಲಾಗುತ್ತಿತ್ತು ಇತ್ಯಾದಿ ಮುಂದುವರೆದೇ ಇವೆ. ಆಂಧ್ರ ಪೋಲೀಸರೂ ಸಹ ವಿಚಾರಣೆಗಾಗಿ ಬಂದಿದ್ದರಿಂದ ಹೈದ್ರಾಬಾದ್‌ನ ಸ್ಫೋಟಕ್ಕೆ ಇವರ ಸಂಬಂಧ ಇರಬಹುದೆಂದೂ ಊಹಿಸಲಾಗಿದೆ. ಆದರೆ ಪೊಲೀಸರು ಇವರು ಉಗ್ರಗಾಮಿಗಳು ಅಥವಾ ಅವರೊಂದಿಗೆ ನಂಟು ಇರುವ ಬಗ್ಗೆ ಖಚಿತವಾದ ಯಾವ ಮಾಹಿತಿಯೂ ಇಲ್ಲವೆಂದು ಹೇಳುತ್ತಿದ್ದಾರೆ. ಆದರೆ ಟಿ.ವಿ., ಪತ್ರಿಕಾ ಮಾಧ್ಯಮಗಳು ಈಗಾಗಲೇ ವಿಚಾರಣೆಗೆ ಒಳಗಾಗಿರುವ ಅಸದುಲ್ಲಾ, ಮಹ್ಮದ್ ಆಸೀಫ್‌ರು ಭಯೋತ್ಪಾದಕರೆಂದೂ, ಲಷ್ಕರ್ - ಎ - ತೊಯ್ಬಾ ಜೊತೆಗೆ ಸಂಬಂಧವಿದ್ದು, ಇಲ್ಲಿಯ ಕಮಾಂಡರ್ ಎಂದು ತೀರ್ಪು ನೀಡುತ್ತಿವೆ. ಟಿ.ವಿ.-9 ನಂತಹ ಚಾನಲ್‌ಗಳ 'ಸುದ್ದಿ ಸಂಭ್ರಮ'ವು ವಿವೇಚನೆಯನ್ನು ಮಂಕುಗೊಳಿಸುವಂತಿದೆ.



ತಾಳ್ಮೆ - ವಿಶ್ಲೇಷಣೆ ಅಗತ್ಯ

ವಿಚಾರಣೆಗೆ ಒಳಪಟ್ಟಿರುವವರು ಉಗ್ರಗಾಮಿಗಳಾಗಿರಬಹುದು ಅಥವಾ ನಂಟಿರಬಹುದು. ಇಲ್ಲವೇ ಇಲ್ಲದೆಯೂ ಇರಬಹುದು. ಇವೆಲ್ಲಾ ಖಚಿತಗೊಳ್ಳುವುದು ವಿಚಾರಣೆ - ತನಿಖೆ ಪೂರ್ಣಗೊಂಡ ನಂತರವೇ. ಇಂತಹ ಸೂಕ್ಷ್ಮ ಮತ್ತು ಮಹತ್ವದ ವಿಷಯಗಳಲ್ಲಿ ಯಾವುದೇ ಒಂದು ತೀರ್ಮಾನಕ್ಕೆ ಬರಬೇಕೆಂದರೆ ಎಲ್ಲಾ ಮಗ್ಗಲುಗಳನ್ನು ಪರಿಶೀಲಿಸಬೇಕಾಗುತ್ತದೆ. ಅಪಾರ ಮಾಹಿತಿ ಮಾತ್ರವಲ್ಲ ಆಳವಾದ ತನಿಖೆ - ವಿಶ್ಲೇಷಣೆ ಬೇಕಾಗುತ್ತದೆ. ಅಲ್ಲಿಯವರೆಗೂ ಎಚ್ಚರಿಕೆ ಇರುವಾಗಲೇ ತಾಳ್ಮೆಯೂ ಬೇಕಾಗುತ್ತದೆ. ಆದರೆ ಇಂದು ಹಬ್ಬುತ್ತಿರುವ ಸುದ್ದಿಗಳು - ವ್ಯಾಖ್ಯಾನಗಳಲ್ಲಿ ಇದರ ಕೊರತೆಯಿದೆ.

ನಿಜ, ಇಂದು ದೇಶದ ಜನತೆಯನ್ನು ಒಡೆದು ಅನೈಕ್ಯತೆಯ ಬೀಜ ಬಿತ್ತುವ, ಜೀವ ಹಾಗೂ ಸಂಪತ್ತನ್ನು ನಾಶಗೊಳಿಸುವ ಭಯೋತ್ಪಾದನೆ ನೆಲೆಗೊಳ್ಳುತ್ತಿರುವುದು ಆತಂಕದ ಸಂಗತಿಯಾಗಿದೆ. ಇಂತಹ ಭಯೋತ್ಪಾದನೆಯ ಬೇರುಗಳನ್ನು ವಿವರವಾಗಿ ಹುಡುಕಿ ತೆಗೆಯಬೇಕಾದ್ದು ಅತೀ ಮುಖ್ಯವಾದ ಕರ್ತವ್ಯವಾಗಿದೆ. ದೇಶದ, ರಾಜ್ಯದ ಕಾನೂನು - ಆಡಳಿತಕ್ಕೆ ಸಂಬಂಧಿಸಿದ ಸಂಸ್ಥೆಗಳು ಕ್ರಮವಹಿಸಬೇಕಾದ್ದು ಆದ್ಯ ಕರ್ತವ್ಯ. ಇದನ್ನು ಆ ಸಂಸ್ಥೆಗಳು ಹೆಚ್ಚು ಅಬ್ಬರವಿಲ್ಲದೇ ಮಾಡಬೇಕಾದ್ದು ಕೂಡಾ ಅಷ್ಟೇ ಪ್ರಮುಖವಾಗಿದೆ.

ದ್ವೇಷದ ಕಿಡಿ ದಾವಾನಲವಾಗಬೇಕೆ?

ಈಗ ನಡೆದಿರುವ ಅಬ್ಬರದ ಪ್ರಚಾರಗಳು ಏನನ್ನು ತರಲಿವೆ. ಈಗಾಗಲೇ ನಮ್ಮ ಸಮಾಜದಲ್ಲಿ ಕೋಮುವಾದದ ಸರ್ಪ ಹೆಡೆ ಎತ್ತಿ ಕಡಿಯುತ್ತಿದೆ. ಹಿಂದೂ - ಮುಸ್ಲಿಂ ಎಂಬ ವಿಭಜನೆಯ ದಳ್ಳುರಿಯನ್ನು ಹಬ್ಬಿಸಲಾಗುತ್ತಿದೆ. ಅಲ್ಪಸಂಖ್ಯಾತರಲ್ಲಿನ ಆತಂಕ ಸ್ಥಿತಿಯನ್ನು ಮೂಲಭೂತವಾದಿಗಳು ಬಳಸಲು ಯತ್ನಿಸುತ್ತಿವೆ. ಹಾಗಾಗಿ ಯಾವುದೇ ವಿಷಯದ ಬಗ್ಗೆ ಒಂದು ಅಭಿಪ್ರಾಯ ರೂಪಿಸುವಾಗ ಜವಾಬ್ದಾರಿಯುತವಾಗಿ ಎಲ್ಲವನ್ನು ಗಮನದಲ್ಲಿರಿಸಬೇಕಾಗುತ್ತದೆ.

ಆಸೀಫ್ ಮತ್ತು ಅಸಾದುಲ್ಲಾರವರನ್ನು ವಿಚಾರಣೆಗೊಳಪಡಿಸಿರುವಾಗಲೇ ಸಂಘ ಪರಿವಾರವು ಶ್ರೀರಾಮಸೇನೆ, ಅಖಿಲ ಭಾರತೀಯ ವಿದ್ಯಾರ್ಥಿ ಪರಿಷತ್‌ಗಳು ದಾಂಧಲೆ ಎಬ್ಬಿಸಿವೆ.

ಭಯೋತ್ಪಾದನೆಯನ್ನು ಮುಸ್ಲಿಂ ಅಲ್ಪಸಂಖ್ಯಾತರ ತಲೆಗೆ ಕಟ್ಟಲು ಹೊರಟಿವೆ. ಅಮೆರಿಕಾದ ಅಧ್ಯಕ್ಷರ ವಾದ ವೈಖರಿಯೇ ಅವರ ನಾಲಿಗೆಯಲ್ಲಿ ಪುನರುಚ್ಚಾರಗೊಳ್ಳುತ್ತಿದೆ.

ಭಯೋತ್ಪಾದನೆಯ ಕರಿನೆರಳು ಬೀಳುತ್ತಿರುವ ಬೆಂಗಳೂರಿನಲ್ಲಿ ಈ ಹಿಂದೆ ಆಸ್ಟ್ರೇಲಿಯಾದ ವೈದ್ಯ ಡಾ. ಹನೀಫ್ ರ ಬಗೆಗಿನ ಪ್ರಚಾರವು ಸಾಕಷ್ಟು ಆತಂಕ ಹುಟ್ಟಿಸಿತ್ತು. ಈಗಲೂ ದೇಶ ಇತರೆಡೆ, ಹೊರದೇಶಗಳಲ್ಲಿ ಸಂಭವಿಸುವ ಘಟನೆಗಳು ನಿಜಕ್ಕೂ ತಲ್ಲಣ ಹುಟ್ಟಿಸುತ್ತಿವೆ.

ಆದ್ದರಿಂದ ಯಾವುದೇ ವಿಷಯದ ಬಗ್ಗೆ ನಿರ್ಣಯಕ್ಕೆ ಅಥವಾ ಸಾರ್ವಜನಿಕರ ನಡುವೆ ಪ್ರಚಾರಿಸುವಾಗ ಎಚ್ಚರ ಅಗತ್ಯ. ಈಗ ನಡೆದಿರುವ ಪ್ರಚಾರವು ಸಮಾಜದಲ್ಲಿ ಒಡಕನ್ನು ತೀವ್ರಗೊಳಿಸುವುದು. ಇಂತಹ ಪ್ರಚಾರವು ಭಯೋತ್ಪಾದಕರು, ಭಯೋತ್ಪಾದನೆಯನ್ನು ಹೆಚ್ಚಿಸುತ್ತದೆ. ಈ ಅಂಶಗಳನ್ನು ಗಮನದಲ್ಲಿರಿಸಿ ತನಿಖಾ ವ್ಯವಸ್ಥೆ ಮತ್ತು ಸರ್ಕಾರ ಹಾಗೂ ಮಾಧ್ಯಮಗಳು ಎಚ್ಚರದಿಂದ ಇರಬೇಕು. ಜನರೂ ಸುಲಭವಾಗಿ ಸ್ಥಾಪಿತ ಹಿತಾಸಕ್ತಿಗಳು ಊದುವ ತುತ್ತೂರಿಗೆ ಮರುಳಾಗಬಾರದು.

ಯಾರು ಭಯೋತ್ಪಾದಕರು?

ಗುಜರಾತ್ ಹತ್ಯಾಕಾಂಡ ಮಾಡಿದ್ದು ಯಾರು
ಹಿಂದು ಭಯೋತ್ಪಾದಕರೆ ಇದು ನನ್ನ ದೂರು
ಅಂದಾಗ ಆ ಸಂಘ ಪರಿವಾರ ಕೂಡ
ಹೊರತಲ್ಲ ಈ ಇದಕೆ ಸಂದೇಹಬೇಡ.

- ವಿಡಂಬಾರಿ

ಕಷ್ಟಕರ ಜೀವನ ನಿರ್ವಹಣೆ : ಪರಿಹಾರಕ್ಕೆ ಆಗ್ರಹಿಸಿ 'ರಾಜಭವನ ಚಲೋ'

ಅಗತ್ಯ ವಸ್ತುಗಳ ಬೆಲೆ ಏರಿಕೆಗೆ ಕಡಿವಾಣ ಹಾಕಬೇಕು, ಮನೆ ಬಾಡಿಗೆ ನಿಯಂತ್ರಿಸಲು ಬಾಡಿಗೆ ನಿಯಂತ್ರಣ ಕಾಯ್ದೆ ಜಾರಿಗೆ ತರಬೇಕು ಮತ್ತು ಅಸಂಘಟಿತ ಕಾರ್ಮಿಕರಿಗೆ ರಾಜ್ಯವ್ಯಾಪಿ ಸಮಾನ ಕನಿಷ್ಠ ಕೂಲಿ ನಿಗದಿಗೊಳಿಸಬೇಕು ಎಂದು ಘೋಷಣೆಗಳೊಂದಿಗೆ ಬೆಂಗಳೂರು ಜಿಲ್ಲೆಯ ವಿವಿಧ ಪ್ರದೇಶಗಳಿಂದ ಬಂದ ಸಾವಿರಾರು ಜನ ಕಾರ್ಮಿಕರು ಜಿಲ್ಲಾ ಸಿಐಟಿಯು ಮುಖಂಡತ್ವದಲ್ಲಿ ನಗರದ ಎಂ.ಜಿ.ರಸ್ತೆಯ ಗಾಂಧಿ ಪ್ರತಿಮೆ ಬಳಿಯಿಂದ 29-01-2008ರ ಮಂಗಳವಾರ ಬೆಳಿಗ್ಗೆ 11.00 ಗಂಟೆಗೆ ಮೆರವಣಿಗೆ ಹೊರಟು ಬೃಹತ್ ರಾಜಭವನ ಚಲೋ ನಡೆಸಿ ರಾಜ್ಯಪಾಲರಿಗೆ ಮನವಿ ಸಲ್ಲಿಸಿದರು. ಸಾಮಾನ್ಯ ಜನತೆ ಬಳಸುವ ದಿನದ ಅಗತ್ಯ ವಸ್ತುಗಳ ಬೆಲೆಗಳು ವರ್ಷಂಪ್ರತಿ ಮಿತಿಮೀರಿ ಏರಿಕೆಯಾಗುತ್ತಿದ್ದು ನಗರದಲ್ಲಿ ಸಾಮಾನ್ಯ ಜನತೆಯ ಜೀವನ ನಿರ್ವಹಣೆ ತೀರಾ ಕಷ್ಟಕರವಾಗುತ್ತಿದೆ.

ಕಳೆದ ನಾಲ್ಕು ವರ್ಷಗಳಲ್ಲಿ ಜೀವನಾವಶ್ಯಕ ಅಗತ್ಯ ವಸ್ತುಗಳ ಬೆಲೆಗಳು ಶೇಕಡ 50 ರಿಂದ ಶೇಕಡ 85ರಷ್ಟು ಹೆಚ್ಚಳವಾಗಿವೆ. ಅಕ್ಕಿ, ರಾಗಿ, ಜೋಳ, ಬೇಳೆ, ಹಾಲು, ಮೊಸರು, ಮಾಂಸ, ಮೊಟ್ಟೆ, ಶೇಂಗಾ ಎಣ್ಣೆ, ತರಕಾರಿ, ಬಿಎಂಟಿಸಿ ಬಸ್‌ದರಗಳು, ಸಾರಿಗೆ ದರ ಹೀಗೆ ಎಲ್ಲಾ ದರಗಳು ಗಗನಕ್ಕೇರಿವೆ. ಅದಕ್ಕೆ ಅನುಸಾರವಾಗಿ ಸಂಬಳಗಳು ಹೆಚ್ಚಳವಾಗಿಲ್ಲ ಎಂದು ಸಿಐಟಿಯು ಮುಖಂಡರು ಆಕ್ರೋಶ ವ್ಯಕ್ತಪಡಿಸಿದರು. ಬಾಡಿಗೆ ನಿಯಂತ್ರಣ ಕಾಯ್ದೆ ತೆಗೆದಿರುವುದರಿಂದ, ಅಕ್ರಮ-ಸಕ್ರಮ ಮುಂತಾದ ಸಲ್ಲದ ತೆರಿಗೆ ಶುಲ್ಕಗಳನ್ನು ಹೇರುತ್ತಿರುವುದರಿಂದ ಮನೆ ಬಾಡಿಗೆ ದರಗಳು ವಿಪರೀತ ಏರಿಕೆಯಾಗುತ್ತಿದ್ದು, ದುಡಿಯುವ ಜನತೆ ತಮ್ಮ ದುಡಿಮೆಯ ಅರ್ಧದಷ್ಟನ್ನು ಬಾಡಿಗೆಗೆ ತೆರಬೇಕಾಗಿದೆ. ಆದುದರಿಂದ ರಾಜ್ಯಪಾಲರು ಕೂಡಲೇ ಬಾಡಿಗೆ ನಿಯಂತ್ರಣ ಕಾಯ್ದೆಯನ್ನು ಮರು ಜಾರಿಗೊಳಿಸಬೇಕೆಂದು ಆಗ್ರಹಿಸಿದರು.



ಅಸಂಘಟಿತ ಕಾರ್ಮಿಕರಿಗೆ ರಾಜ್ಯವ್ಯಾಪಿ ಸಮಾನ ಕನಿಷ್ಠ ಕೂಲಿ ನಿಗದಿಗೊಳಿಸಬೇಕು. ಕುಶಲರಲ್ಲದವರಿಗೆ ರೂ.4,080/-, ಅರೆಕುಶಲರಿಗೆ ರೂ.4,652/-, ಕುಶಲರಿಗೆ ರೂ.5,204/-, ಅತಿ ಕುಶಲರಿಗೆ ರೂ.6,120/- ಸಮಾನ ಕನಿಷ್ಠ ಕೂಲಿ ನಿಗದಿಗೊಳಿಸಬೇಕು ಹಾಗೂ 2,967 ಅಂಶಗಳ ಗ್ರಾಹಕ ಬೆಲೆ ಸೂಚ್ಯಂಕದ ಮೇಲಿನ ಪ್ರತಿ ಅಂಶಕ್ಕೆ ರೂ.1.50 ತುಟ್ಟಿಭತ್ಯೆ ನಿಗದಿಗೊಳಿಸಬೇಕು. ಕಾರ್ಮಿಕರ ಭವಿಷ್ಯ ನಿಧಿ (EPF) ವ್ಯಾಪ್ತಿಗೆ ಒಳಪಡದ ಎಲ್ಲರಿಗೂ ಸಾಮಾನ್ಯ ಭವಿಷ್ಯ ನಿಧಿ (GPF) ವ್ಯಾಪ್ತಿಗೆ ತಂದು ಸಾಮಾಜಿಕ ಭದ್ರತೆ ನೀಡಬೇಕು. ಎಲ್ಲಾ ಜೀವನಾವಶ್ಯಕ ಅಗತ್ಯ ವಸ್ತುಗಳ ವಿತರಣೆ ಬಿಪಿಎಲ್ ಕಾರ್ಡುಗಳಲ್ಲಿ ಆಗಬೇಕು ಮತ್ತು ಎಲ್ಲಾ ಅರ್ಹರಿಗೂ ಪಡಿತರ ಬಿಪಿಎಲ್ ಕಾರ್ಡುಗಳು ಸಿಗಬೇಕೆಂದು ಆಗ್ರಹಿಸಿದರು.

ಇಂದಿನ ರಾಜಭವನ ಚಲೋ ಮುಖಂಡತ್ವವನ್ನು ಜಿಲ್ಲಾ ಸಿಐಟಿಯು ಅಧ್ಯಕ್ಷರಾದ ಕಾಂ.ಇ.ಕೆ.ಎನ್. ರಾಜನ್‌ರವರು ವಹಿಸಿದ್ದರು. ಜಿಲ್ಲಾ ಮುಖಂಡರುಗಳಾದ ಕಾಂ.ಕೆ.ಎನ್.ಉಮೇಶ್, ಕಾಂ.ಮೀನಾಕ್ಷಿ ಸುಂದರಂ, ಕಾಂ.ಹೆಚ್.ಎನ್. ಗೋಪಾಲ ಗೌಡ, ಕಾಂ.ಆರ್.ಡಿ. ಮೆಲ್ಕಿಯೋರ್, ಕಾಂ.ಟಿ.ಲೀಲಾವತಿ, ಕಾಂ.ಹೆಚ್.ಜಿ.ಶ್ರೀನಿವಾಸ ಮೂರ್ತಿ, ಕಾಂ.ಎನ್.ವೀರಾಸ್ವಾಮಿ, ಕಾಂ.ಮುನಿರಾಜು, ಕಾಂ.ನಂಜುಂಡಪ್ಪ, ಮುಂತಾದವರು ಭಾಗವಹಿಸಿದ್ದರು. ಹಾಗೂ ಕರ್ನಾಟಕ ವರ್ಕರ್ಸ್ ಯೂನಿಯನ್, ಬೆಂಗಳೂರು ಸೌತ್ ಇಂಡಸ್ಟ್ರಿಯಲ್ ವರ್ಕರ್ಸ್ ಯೂನಿಯನ್, ನಾರ್ಥ್ ಇಂಡಸ್ಟ್ರಿಯಲ್, ಈಸ್ಟ್ ಇಂಡಸ್ಟ್ರಿಯಲ್, ಬಿಇಎಲ್, ಎಸ್ಕಾರ್ಟ್ಸ್, ಮೈಕೊ, ಸುದರ್ಶನ್ ಎಕ್ಸ್‌ಟ್ರಕ್ಷನ್, ಗೋಲ್ಡನ್ ಕಾರ್ಸ್ ಎಕ್ಸ್‌ಟ್ರಕ್ಷನ್, ಮೆಡ್ರಿಚ್ ಲಿಮಿಟೆಡ್ ಬೊಮ್ಮಸಂದ್ರ, ಕಟ್ಟಡ ಮತ್ತು ಇತರೆ ನಿರ್ಮಾಣ ಕಾರ್ಮಿಕರ ಫೆಡರೇಷನ್, ಬೆಂಗಳೂರು ಸಿಲ್ಕ್ ಆನೇಕಲ್, ಶೋಭಾ ಡೆವಲಪರ್ಸ್, ಡಿವಿಜನ್ ಯೂನಿವರ್ಸಲ್, ವಿಎಕ್ಸ್‌ಎಲ್ ಇನ್‌ಸ್ಟುಮೆಂಟ್ಸ್ ಮುಂತಾದ ಅನೇಕ ಕೈಗಾರಿಕೆಗಳ ಕಾರ್ಮಿಕರು ಹಾಗೂ ಆಟೋ ರಿಕ್ಷಾ ಚಾಲಕರು ರಾಜಭವನ ಚಲೋದಲ್ಲಿ ಭಾಗವಹಿಸಿ ಯಶಸ್ವಿಗೊಳಿಸಿದರು.

ವರದಿ: ನರಸಿಂಹಮೂರ್ತಿ.ಸಿ

ಜನ ಶಕ್ತಿ

ಜನಶಕ್ತಿ ಜನಶಕ್ತಿ ನೀ ನಿಜದ ಶಕ್ತಿ
ನಿನ್ನಲ್ಲಿ ನನಗುಂಟು ಗೌರವವು ಭಕ್ತಿ
ಒಂದೊಮ್ಮೆ ಗುಡುಗಿದರೆ ನೀ ಸಿಡಿದು ಎದ್ದು
ಅಡಗುವುವು ಖಂಡಿತವು ವಂಚಕರ ಸದ್ದು

- ವಿಡಂಬಾರಿ

ಅಜ್ಜಿಗೆ ಅರಿವೆ ಚಿಂತೆ.........

ಕಥೆ

ಶ್ರೀ

"ಅಲ್ಲ ಕಣಲಾ ನಾಣಿ, ಕ್ರಿಕೆಟ್ ಟೀಂಗಳನ್ನ ಅರಾಜು ಆಕ್‌ಬುಟ್ರಂತೆ?"

"ಅಕ್ಕಿ ಬುಡ್ಲಾ ಯಂಕ, ಇನ್ನೇನು ಉಳುಸವರೆ ಈ ದೇಸದಲ್ಲಿ? ದೇಸದ ಭೂಮಿ, ನದಿ, ಗಿದಿ ಮಾನಮರ್‍ವಾದೆ ಎಲ್ಲ ಅರಾಜಾಕವ್ರೆ ಇನ್ನು ಇದ್ಯಾವ ಲೆಕ್ಕ?'

"ಏ ಅವ್ರೆಲ್ಲ ಆಗ್ಲೆ ಪೆಪ್ಸುಸಿ, ಕೋಲ ಸುಡುಗಾಡು ಸುಂಟಿಗಲ್ಲ ಅವ್ರುನ್ನ ಅವ್ರೇ ಮಾರಕಂಡವರೆ ಮತ್ತಿನ್ನೇನು?"

"ಅದ್ರೂ ನಮ್ಮ ದೇಸವಲ್ಲಿ ಕ್ರಿಕೆಟ್ ಟೀಮು ಇಷ್ಟೊಂದು ಲಕ್ಷ ಕೋಟಿ ಬೆಲೆ ಬಾಳ್ತದೆ ಅಂತ ಗೊತ್ತಿರ್ಲಿಲ್ಲ ಬುಡು"

"ಈ ಕೆಲವು ಪೇಪರ್‌ನವುಕ್ಕೂ ಟೀವಿಯವುಕ್ಕೂ ಮಾಡಕ್ಕೆ ಕೆಲ್ಸ ಇಲ್ಲ"

"ಏನ್ಲಾ ಅದು ಕರೆಟ್ಟಾಗಿ ಏಳ್ಲಾ"

"ಈಗ ನೋಡು ಆಡೋದು ಕ್ರಿಕೆಟ್ ಟೀಮು. ಗೆದ್ರೆ, ಸೋತ್ರೆ ದೇಸದ ಕ್ರಿಕೆಟ್ ಟೀಮಿಗೆ ಜಯ ಅಂತ್ಲೋ ಕ್ರಿಕೆಟ್ ಟೀಮಿಗೆ ಸೋಲು ಅಂತ್ಲೋ ಆಕ್ಬೇಕು ತಾನೆ?"

"ಅದು ಬುಟ್ಟು ಇವ್ರು 'ಭಾರತದ ದಿಗ್ವಿಜಯ', 'ಭಾರತಕ್ಕೆ ಈನಾಯ ಸೋಲು'"

'ಭಾರತ, ಪಾಕ್ ಅಣಾ ಅಣಿ ಓರಾಟ. ಭಾರತ, ಪಾಕ್ ಸಮರ, ಯುದ್ಧ ಅಂತೆಲ್ಲ ಆಕ್ತವೆ. ಇವುಕ್ಕೇನು ಬುದ್ದಿ ಇದೆ ಅನ್ನೋದೋ... ಇಲ್ಲ... ವಟ್ಟೆಗೇನು ತಿಂತವ್ರೋ..."

"ಕ್ರಿಕೆಟ್ ಆಟ ಅಂದ್ರೆ ಅದಕ್ಕೆ ಲಕ್ಷ, ಕೋಟಿ ಬೆಲೆ ಐತೆ. ಅದಕ್ಕೆ ಅದೇ ದೇಸ ಅಂತ ತಿಳ್ಕೊಂಡವೇನೋಪ್ಪ?"

"ಬಡವ್ರು ರೈತ್ರು ಜೀವಕ್ಕೆ ಬೆಲೆಯಿಲ್ದಿದ್ರೂ, ಇವುಕ್ಕೆತ್ಲಲ!"

"ತಿನ್ನಕೆ ಅನ್ನ ಇಲ್ದಿದ್ರೆ ಕ್ರಿಕೆಟ್ ನೋಡ್ಕಂಡು ವಟ್ಟೆ ತುಂಬುಸ್ಕೊತಿಯೇನ್ಲಾ?"

"ಯಾವ್ವುಕ್ಕೂ ಚೆನ್ನಾಗಿ ದುಡ್ಡು ಮಾಡಬೇಕು ಕಣ್ಲಾ"

"ಯಾಕ್ಲ ಅಂಗಂತಿ?"

"ಊ ಮತೆ, ನೋಡುದ್ಯಾ ಈ ಸರಿ ಚೆನ್ನಾಗಿ ದುಡ್ಡು ಮಾಡಿ ಪರಪಂಚದಲ್ಲೇ ಸ್ರೀಮಂತ್ರು ಅನ್ನುಸ್ಕೊಂಡೋರಿಗೆ ಪದ್ಮ ಭೂಸಣ, ಪದ್ಮ ಇಭೂಸಣ ಅಂತ ಏನೇನೋ ಪ್ರಸಸ್ತಿ ಎಲ್ಲ ಕೊಟ್ಟವರೆ."

"ತಪ್ಪೇನಿಲ್ಲ ಬುಡು ಕಾಲನೇ ಅಂಗೈತೆ. ಆ ಪ್ರಸಸ್ತಿಗಳನ್ನು ಅತ್ವಾಗೆ ಅರಾಜು ಆಕಿದ್ರೆ ಅದ್ಮೂ ಕೋಟ್ ಕೋಟಿ ರೂಪಾಯಿಗೆ ತ'ಗ'ೊ'ಳ'ೋ'ರ'ೋ ಏನೋ?"

"ಸರ್ಕಾರಕ್ಕೆ ವಸಿ ದುಡ್ಡಾದ್ರೂ ಆಗದು".

"ಥೂ! ಆಳಾಗಿ ಓಗ್ಲಿ ಬುಡ್ಲಾ ನಮಗ್ಯಾಕೆ ಈ ಕೆಲ್ಸಕ್ಕೆ ಬಾರದ ಇಚಾರ. ಎಲೆಕ್ಷನ್ ಯಾವಾಗಂತೆ?"

"ಥೂ ಸುಮ್ಕಿರ್ಲ ಆ ಎಲೆಕ್ಷನ್ ಇಚಾರ ಮಾತ್ರ ಕೇಳ್ಬೇಡ ತಲೆ ಚಿಟ್ಟು ಇಡ್ಸ್‌ತ್ತೈತೆ"

"ಯಾಕ್ಲ"?

"ಊ ಮತೆ, ಕಿಸ್ಸ ಬತ್ತನೋ, ಓಯ್ತನೋ ಅನ್ನೋದೆ ಕಾಂಗ್ರೆಸೋರ ಚಿಂತೆ. ಎಲೆಕ್ಷನ್ ನಡೀತವೋ, ಮುಂದ್ಕೋಯ್ತವೋ ಅಂತ ಬಿಜೆಪಿಯೋರ ಚಿಂತೆ. ದ್ಯಾವೇಗೌಡ್ರಿಗೆ ಉಟ್ಟಿದ್ದೇ ಚಿಂತೆ. ಪ್ರಕಾಸುಗೆ ಬಿಜೆಪಿನೋ, ಕಾಂಗ್ರೆಸೋ ಅಂತ ಚಿಂತೆ, ಸಿದ್ದುಗೆ ಯಾವ ಉದ್ದೆ ಅಂತ ಚಿಂತೆ, ಇಸ್ವನಾತಂಗೆ ಯಾರ್ಯಾರನ್ನೋ ಕಾಂಗ್ರೆಸ್‌ಗೆ ಕರ್ಕೊಂಬರೋ ಚಿಂತೆ ಅಲ್ಲದೆ, ಯಾರ್ಯಾರಿಗೋ ಮಧುರ ಬಾಂಧವ್ಯ ಇತ್ತು (ತನಗಿರಲಿಲ್ಲ) ಅಂತ ಚಿಂತೆ".

"ಏ ಬುಡ್ಲ. ಆಸೆ ಪಾಸೆ ಎಲ್ಲ ಬುಟ್ಟು ಸರ್ವಸಂಗ ಪರಿತ್ಯಾಗಿಗಳು ಅಂತ ಕಾವಿ ಆಕ್ಕೊಂಡಿರೋ ಸನ್ಯಾಸಿಗಳೇ ದುಡ್ಡು ಕಾಸು, ಆಸ್ತಿಪಾಸ್ತಿ, ಅಧಿಕಾರ ಅಂತ ಕಿತ್ತಾಡ ಕಾಲದಲ್ಲಿ, ಸ್ರೀಮಂತ್ರು ಏನಾರ ಆಸೆ ಪಡದು ರಾಜಕಾರಣಿಗಳು ಅಧಿಕಾರದ ಚಿಂತೆ ಮಾಡದ್ರಲ್ಲಿ ತಪ್ಪೇನೈತೆ?

"ಇವ್ರಿಗೆಲ್ಲಾ ಇಷ್ಟೊಂದು ಚಿಂತೆ ಆದ್ರೆ, ಜನಗಳ ವಟ್ಟೆಪಾಡಿನ ಚಿಂತೆ ಯಾರ್ಲ ಕೇಳೋರು"?

"ಅದೇನೋ ಅಂತಾರಲ್ಲ, ಅಜ್ಜಿಗೆ ಅರಿವೆ ಚಿಂತೆ, ಮೊಮ್ಮಗಳಿಗೆ ......ಚಿಂತೆ ಅಂತ ಅಂದಂಗಾತು ನಡೀಲಾ ವಟ್ಟೆ ಚುರುಗುಟ್ತೈತೆ.

ಸೌಹಾರ್ದತೆ ಸಾರುವ ಮೊಹರಂ

ಮೊಹರಂ ಅನ್ನುವುದು ಕೇವಲ ಒಂದು ಧಾರ್ಮಿಕ ಆಚರಣೆ ಮಾತ್ರವಲ್ಲ, ಜಾತಿ, ಮತಗಳ ಗಡಿಗಳನ್ನು ಮೀರಿ ವಿವಿಧ ಸಮುದಾಯಗಳು ಕಲೆತು ಸಂಭ್ರಮಿಸುವ ಒಂದು ವಿಶಿಷ್ಟ ಹಬ್ಬ. ಇದು ಜನ ಸಂಸ್ಕೃತಿಯ ಪ್ರತೀಕದಂತಿದೆ.

ಪರಶುರಾಮ ಬೋನೇರ ಗಜೇಂದ್ರಗಡ

ಸರ್ವ ಜನಾಂಗದ ಶಾಂತಿ ತೋಟ ಎಂಬುದು ಕೇವಲ ಕವಿಯೊಬ್ಬರ ತಲೆಯೊಳಗೆ ಮೂಡಿದ ಬರಿಯ ಕಲ್ಪನಾ ವಿಲಾಸವಲ್ಲ. ಕರ್ನಾಟಕದ, ಭಾರತದ ಜನ ಸಂಸ್ಕೃತಿಯ ವಾಸ್ತದ ಅರಿವಿನ ಆಧಾರದಲ್ಲಿ ರೂಪುಗೊಂಡಿದ್ದು, ಈ ಕವನಗಳ ಸಾಲು. ಮೊಹರಂ ಎಂದರೆ ಕೆಲವರು ಮುಸ್ಲಿಂರ ಹಬ್ಬ ಎಂದು ಭಾವಿಸುವುದಿದೆ. ಉತ್ತರ ಕರ್ನಾಟಕದ ಮಧ್ಯ ಕರ್ನಾಟಕದ ಹಳ್ಳಿ ಹಳ್ಳಿಗಳಲ್ಲಿ ಹಿಂದೂ ಮುಸ್ಲಿಂ ಎಂಬ ಬೇಧ ಭಾವವಿಲ್ಲದೇ ಮೊಹರಂ ಹಬ್ಬವನ್ನು ಆಚರಿಸುವ ಪರಿಯನ್ನು, ಇಡೀ ಇಡೀ ಹಳ್ಳಿಯ ಜನರು, ಅದರಲ್ಲೂ ವಿಶೇಷ ತಳ ಸಮುದಾಯದ ಜನರು ಈ ಹಬ್ಬದಲ್ಲಿ ಪಾಲ್ಗೊಂಡು ಸಂಭ್ರಮಿಸುವ ಪರಿಯನ್ನು ನೋಡಿದರೆ ಜನ ಕಟ್ಟಿಕೊಂಡಿರುವ ಸೌಹಾರ್ದ ಪರಂಪರೆಯು ಮನಸ್ಸಿಗೆ ನಾಟುತ್ತದೆ. ಪಟ್ಟಭದ್ರ ಹಿತಾಸಕ್ತಿಯ ಕೋಮುವಾದಿಗಳು ಮತ ಧರ್ಮದ ಆಧಾರದಲ್ಲಿ ಜನಗಳನ್ನು ಒಡೆಯದೇ ಹೋದರೆ ರೂಪುಗೊಳ್ಳುವ ಜನ ಸಂಸ್ಕೃತಿಯ ಮಾದರಿಯು ನಮಗಿಲ್ಲಿ ದೊರೆಯುತ್ತದೆ.


ದೇಶದ ವಿವಿಧ ಭಾಗಗಳಲ್ಲಿ ಮೊಹರಂ ಆಚರಣೆ



ಗಜೇಂದ್ರಗಡ ಎಂಬುದು ಗದಗ್ ಜಿಲ್ಲೆಯ ಒಂದು ಸಣ್ಣ ಪಟ್ಟಣ. ಅಲ್ಲಿ ನಡೆಯುವ ಮೊಹರಂ ಹಬ್ಬವೂ ಒಂದು ವಿಶಿಷ್ಟ ಬಗೆಯದು. ಗಜೇಂದ್ರಗಡ ನಗರದಲ್ಲಿರುವ ಬೀಬಿಪಾತೀಮಾ, ಹಟೇಲ್‌ಭಾಷಾ, ಮೌಲಾಲಿ ಟೆಕ್ಕೇದ ಅಜ್ಜನಿಗೆ ಒಂದೊಂದು ರೀತಿಯಲ್ಲಿ ತಮ್ಮ ಹರಕೆ ತೀರಿಸುತ್ತಾರೆ.

ಹುಲಿ ವೇಷಧಾರಿಗಳು

ಹೆಚ್ಚಾಗಿ ಹಿಂದೂ ಕೋಮಿಗೆ ಸೇರಿದ ವಿಶೇಷವಾಗಿ ತಳ ಸಮುದಾಯಕ್ಕೆ ಸೇರಿದ ವ್ಯಕ್ತಿಗಳು ಮೈತುಂಬಾ ಹುಲಿಯ ಬಣ್ಣ ಬರೆಸಿಕೊಳ್ಳುತ್ತಾರೆ. ಕಾಟಿಕ, ಲಂಬಾಣಿ ಸಮುದಾಯಕ್ಕೆ ಸೇರಿದ ಬಡವರ್ಗದ ಜನರು ಈ ರೀತಿ ಹುಲಿಯ ಬಣ್ಣ ಬಳೆದುಕೊಂಡು ಮನೆ-ಮನೆಗೆ ತೆರಳಿ ಜಗ್ಗಲಗಿಯ ನಾದಕ್ಕೆ ತಕ್ಕಂತೆ ಕುಣಿದು ಭಕ್ತರು ನೀಡುವ ಹಣವನ್ನು ಪಡೆದುಕೊಂಡು ಅದಕ್ಕೆ ಇನ್ನಷ್ಟು ಹಣ ಸೇರಿಸಿ ಮಾಂಸದ ಅಡಿಗೆ ಮಾಡಿಸಿ, ನೆರೆಹೊರೆಯವರಿಗೆ ಕರೆದು ಊಟ ಹಾಕಿಸುವ ಮೂಲಕ ತಮ್ಮ ಭಾವೈಕೆತೆಯನ್ನು ಮೆರೆಯುತ್ತಾರೆ.

ಕುಂಚಿ ಕೊರವರ ಮೊಹರಂ ಸಂಸ್ಕೃತಿ

ಗಜೇಂದ್ರಗಡ ನಗರದಲ್ಲಿ ಮೊಹರಂ ಹಬ್ಬ ಬಂತೆಂದರೆ ಮುಸ್ಲಿಂರಷ್ಟೇ ಸೌಹಾರ್ದತೆಯಿಂದ ಈ ಹಬ್ಬವನ್ನು ಆಚರಿಸುವವರು ಇಲ್ಲಿನ ಕುಂಚಿಕೊರವ ಸಮುದಾಯದವರು. ಇವರು ನಗರದ ಹೊರವಲಯದಲ್ಲಿ ಗುಡಿಸಲುಗಳನ್ನು ಹಾಕಿಕೊಂಡು ತಮ್ಮ ಮೂಲ ಕಸುಬಾದ ಹಂದಿ ಸಾಕಾಣಿಕೆ ಮಾಡುತ್ತಾ, ಜೀವನ ನಡೆಸುತ್ತಾರೆ. ಅಭಿವೃದ್ಧಿಯ ದೃಷ್ಟಿಯಿಂದ ಆಳಿದ ಎಲ್ಲಾ ಸರ್ಕಾರಗಳೂ ಈ ಸಮುದಾಯವನ್ನು ಕಡೆಗಣಿಸಿದವರೇ! ಹೆಚ್ಚೆಂದರೆ ಅಲ್ಲೊಂದು-ಇಲ್ಲೊಂದು ಅಪರೂಪವೆನ್ನುವಂತೆ ಆರ್.ಸಿ.ಸಿ. ಚಾವಣಿ ಹಾಕಿಸಿದ ಮನೆಗಳು ಕಾಣಸಿಗುತ್ತವೆ.

ಈ ಸಮುದಾಯಕ್ಕೆ ಮೊಹರಂ ಅತ್ಯಂತ ಸಂಭ್ರಮ, ಸಂತೋಷ ಕೊಡುವ ಹಬ್ಬ. ತಮ್ಮ ಕಷ್ಟದ ನಡುವೆಯೇ ತಮ್ಮ ಗಲ್ಲಿಯಲ್ಲಿ ಒಂದು ಮಸೀದಿಯನ್ನು ಕಟ್ಟಿಸಿಕೊಂಡು ತಾವೇ ಸ್ವ ಇಚ್ಚೆಯಿಂದ ಅಲ್ಲಿ ಮೌಲಾಲಿ ದೇವರುಗಳನ್ನು ಸ್ಥಾಪಿಸಿ ಅದಕ್ಕೆ ಮಾಡಬೇಕಾದ ವಿಧಿ-ವಿಧಾನಗಳನ್ನು, ನಗರದ ಒಬ್ಬ ಮುಜಾವರನನ್ನು ಕರೆಸಿ ಪಾತೇಹಾ ಮಾಡಿಸುತ್ತಾರೆ. ಕತ್ತಲ ರಾತ್ರಿ ದಿನ, ಅಂದರೆ ಮೊಹರಂ ಕೊನೆಯ ದಿನದ ಹಿಂದಿನ ದಿನ ಮಸೀದಿಯ ಆವರಣದಲ್ಲಿ ಪ್ರತಿ ವರ್ಷ ಭಾವೈಕತೆ ಸಾರುವ ತತ್ವ ಪದಕಾರರನ್ನು ಕರೆಸಿ ಹಾಡು ಹಾಡಿಸುವ ಮೂಲಕ ಸೌಹಾರ್ದತೆಯನ್ನು ಸಾರುವಲ್ಲಿ ಪ್ರಮುಖ ಪಾತ್ರ ವಹಿಸುತ್ತಾರೆ.

ಗೊಲ್ಲ ಜನಾಂಗದ ಫಕೀರರು

ನಗರದ ಅನೇಕ ಗಲ್ಲಿಗಳಂತೆ ಗೊಲ್ಲರ ಗಲ್ಲಿಯು ತನ್ನದೇ ಆದ ವಿಶಿಷ್ಟತೆಯನ್ನು ಪಡೆದುಕೊಂಡಿದೆ. ಯಾದವ ಜನಾಂಗದ ಮೂಲ ಪುರುಷ ಎನ್ನಲಾಗುವ ಕೃಷ್ಣ ಈ ಜನಾಂಗದ ಆರಾಧ್ಯ ದೈವ. ನಗರದ 11ನೇ ವಾರ್ಡಿನ ವ್ಯಾಪ್ತಿಗೆ ಒಳಪಡುವ ಈ ಗೊಲ್ಲರ ಗಲ್ಲಿಯು ಸರಕಾರದ ಅನೇಕ ಅಭಿವೃದ್ಧಿ ಕಾರ್ಯಗಳಿಂದ ವಂಚಿತಗೊಂಡಿದೆ. ಮೂಲತಃ ಗೋಪಾಲಕರಾದ ಇವರು ಈಗ ಅಕ್ಕಡಿಕಾಳು ವ್ಯಾಪಾರ ಕಸುಬನ್ನು ತಮ್ಮ ವೃತ್ತಿಯನ್ನಾಗಿ ಮಾಡಿಕೊಂಡಿದ್ದಾರೆ. ಈ ಜನಾಂಗದ ಶಿಕ್ಷಣಮಟ್ಟ ಹೇಳಿಕೊಳ್ಳುವಷ್ಟು ಉತ್ತಮವಾಗಿಲ್ಲ. 500 ಜನಸಂಖ್ಯೆಯಲ್ಲಿ ಮಹಿಳೆಯರದ್ದೇ ಸಿಂಹಪಾಲು. ಅಂದರೆ, 300 ಜನ ಮಹಿಳೆಯರು, 200 ಜನ ಪುರುಷರು. ಈ ಜನಾಂಗಕ್ಕೂ, ಮೊಹರಂ ಹಬ್ಬಕ್ಕೂ ಅವಿನಾಭಾವ ಸಂಬಂಧ. "ದಿವಾಣದ" ಎಂಬ ಅಡ್ಡ ಹೆಸರನ್ನು ಹೊಂದಿದವರು(ಸರ್‌ನೇಮ್) ಕಡ್ಡಾಯವಾಗಿ ಇಲ್ಲಿನ ಭೀಬಿಪಾತೀಮಾ ದೇವರಿಗೆ ಫಕೀರರಾಗಿ ತಮ್ಮ ಸೇವೆಯನ್ನು ಸಲ್ಲಿಸುತ್ತಾರೆ. ಅಂದರೆ 'ದೇವರು ಕುಳಿತುಕೊಳ್ಳುವ' ದಿನ ಮಸೀದಿಗೆ ಹೋಗಿ ಅಲ್ಲಿಕೊಡುವ ಲಾಡಿಯನ್ನು(ದಾರದಿಂದ ಮಾಡಿದ ಹಾರ)ಕೊರಳಿಗೆ ಹಾಕಿಕೊಂಡು, ಎರಡು ಕೈಗಳಿಗೆ ಕಟ್ಟಿಕೊಂಡು ಬರುತ್ತಾರೆ. ಆ ದಿನ ಕಡ್ಡಾಯವಾಗಿ ಮೈಮೇಲೆ ಧರಿಸುವ ಬಟ್ಟೆಯು ಹೊಸದಾಗಿರಬೇಕು. ಫಕೀರರಾದ ಮೇಲೆ ಕತ್ತಲ ರಾತ್ರಿಯ ದಿನ ಮನೆಯಲ್ಲಿ ಮಾಂಸದ ಅಡಿಗೆ, ಶರಬತ್ತು(ಏಲಕ್ಕಿ, ಬೆಲ್ಲ, ಬಡೆಸೋಪು ಹಾಕಿ ತಯಾರಿಸಿದ ಪಾನೀಯ)ಭೀಬಿಪಾತೀಮಾ ಮಸೀದಿಗೆ ತೆಗೆದುಕೊಂಡು ಹೋಗಿ ನೈವೇದ್ಯ ಅರ್ಪಿಸಿ ಬರುತ್ತಾರೆ. ಮೊಹರಂ ಕೊನೆಯ ದಿನದವರೆಗೆ ಈ "ಫಕೀರರು" ಸ್ನಾನ ಮಾಡುವಹಾಗಿಲ್ಲ.

ಈ ಮೂಲಕ ತಮ್ಮ ಭಕ್ತಿಯನ್ನು ಸಲ್ಲಿಸುವ ಮೂಲಕ ಈ "ಗೊಲ್ಲ" ಜನಾಂಗದವರು ಕೋಮು ಸೌಹಾರ್ದತೆಗೆ ತಮ್ಮದೇ ಆದ ಕಾಣಿಕೆ ನೀಡುತ್ತಾರೆ.

ಕಪ್ಪು ಮುಖದ ದೇವರ ಸೇವಕರು

ಮೊಹರಂ ಹಬ್ಬದಲ್ಲಿ ಒಂದೊಂದು ತಳ ಸಮುದಾಯದವರು ತಮ್ಮದೇ ಆದ ರೀತಿಯಲ್ಲಿ ಹರಕೆ ಸಲ್ಲಿಸಿದರೆ, ಕೆಲ ಜನಾಂಗದವರು ವಿಶಿಷ್ಟ ರೀತಿಯಲ್ಲಿ ಹರಕೆ ಸಲ್ಲಿಸುತ್ತಾರೆ. ಅವರೇ ಕಪ್ಪು ಮುಖದ ದೇವರಸೇವಕರು!

ಮುಖದ ತುಂಬಾ ಕಪ್ಪು ಮಸಿ, ಸೊಂಟಕ್ಕೆ ಎತ್ತಿಗೆ ಕಟ್ಟುವ ದೊಡ್ಡ ಶಬ್ದದ ಗೆಜ್ಜೆಸರ, ತಲೆತುಂಬಾ ಟೋಪಿ, ಕೈಯಲ್ಲಿ ಉದ್ದಕ್ಕೆ ಸುತ್ತಿ ಹದಗೊಳಿಸಿದ ವಸ್ತ್ರ. ಇದು ಇವರ ವಿಶಿಷ್ಟ ವೇಷಭೂಷಣ!

ಚಿಕ್ಕ ಮಕ್ಕಳು ಇವರನ್ನು ಅಳ್ಳೊಳ್ಳಿ ಬವಾ ಎಂದು ಕರೆಯುತ್ತಾರೆ. ದೇವರಿಗೆ ಹರಕೆ ಹೊತ್ತ ಇವರು ಮೊಹರಂ ಕೊನೆಯ ದಿನದ ವರೆಗೆ, ಅಂದರೆ ಐದು ದಿನ ಸ್ನಾನ ಮಾಡದೇ, ತಮ್ಮ ಈ ವಿಶಿಷ್ಟ ವೇಷದೊಂದಿಗೆ ಮಾತನಾಡದೇ ಹಾಗೇ ಮೌನವಾಗಿದ್ದು, ಮನೆಯ ಮುಂದೆ ಬಂದು ನಿಲ್ಲುತ್ತಾರೆ. ಮನೆಯವರು ಹೊರಗೆ ಕಾಣಿಸದಿದ್ದರೆ, ಸೊಂಟಕ್ಕೆ ಬಿಗಿದುಕೊಂಡ ಗೆಜ್ಜೆ ಸರವನ್ನು ಜೋರಾಗಿ ಶಬ್ದಮಾಡಿ, ತಾವು ಬಂದ ಸೂಚನೆಯನ್ನು ಕೊಡುತ್ತಾರೆ. ಮೂಕ ಸಂವೇದನೆಯಿಂದ ದಕ್ಷಿಣೆ ಕೇಳುತ್ತಾರೆ. ದಕ್ಷಿಣೆ ಪಡೆದುಕೊಂಡು ಕೈಯಲ್ಲಿರುವ ವಸ್ತ್ರದಿಂದ ಬೆನ್ನಿಗೆ ಒಂದು ಸಾರಿ ಬಾರಿಸಿ ಮುಂದಿನ ಮನೆಗೆ ಹೊರಡುತ್ತಾರೆ. ಒಂದು ವೇಳೆ ಹಣ ಕೊಡಲು ನಿರಾಕರಿಸಿದರೆ, ಜಪ್ಪಯ್ಯ ಅಂದರೂ ಮನೆಬಿಟ್ಟು ಕದಲುವದಿಲ್ಲ.

ಹೀಗೆ ಐದು ದಿನ ಕಪ್ಪು ಮುಖ ಹೊತ್ತುಕೊಂಡು ದೇವರ ಸೇವಕರಾಗಿ ಸೇವೆ ಸಲ್ಲಿಸಿ, ತಮ್ಮ ಹರಕೆ ತೀರಿಸುತ್ತಾರೆ.

ರಾಜವಾಡೆಯ ಮುಂದೆ ಸಮಾಗಮ

ಮೊಹರಂ ಕೊನೆಯ ದಿನ ಬೆಳಗಿನ ಜಾವ ನಗರದ 18 ಮಸೀದಿಗಳಲ್ಲಿ ಸ್ಥಾಪಿಸಲ್ಪಟ್ಟ ದೇವರುಗಳನ್ನು ತರಲಾಗುತ್ತದೆ. ಅವು ರಾಜವಾಡೆಯ ಮುಂದಿನ ಅಂಗಳದಲ್ಲಿ

ಪುಟ 13 ಕ್ಕೆ

ಗಮನ ಸೆಳೆದ ಆಟೋ ಚಾಲಕರ ರಾಜಭವನ್ ಚಲೋ.....

"ಆಟೋ ಚಾಲಕರ ಪ್ರತಿಭಟನೆ ಪ್ರಯಾಣಿಕರ ಪರದಾಟ" ಎಂಬ ಶೀರ್ಷಿಕೆಯಡಿ ಬಹುತೇಕ ಪತ್ರಿಕೆಗಳು ಆಟೋ ಚಾಲಕರ ಹೋರಾಟದ ಕುರಿತು ಬರೆದಿವೆ. ಆದರೆ ಯಾವ ಹಿನ್ನೆಲೆಯಲ್ಲಿ ಈ ಹೋರಾಟ ನಡೆಯುತ್ತಿದೆ ಎಂಬುದನ್ನು ಉದ್ದೇಶಪೂರ್ವಕವಾಗಿ ಮರೆಮಾಚಿವೆ.

2007ರ ಡಿಸೆಂಬರ್‌ನಿಂದ ಎಲ್‌ಪಿಜಿ ಗ್ಯಾಸ್ ದರ 3 ಬಾರಿ ಏರಿಕೆಯಾಗಿದೆ. ಸದ್ಯ ಎಲ್‌ಪಿಜಿ ದರ ತೈಲ ಬೆಲೆ ಸೇರಿ ಸದ್ಯ 43.69 ರೂ. ಆಗಿದೆ. ಜೀವನಾವಶ್ಯಕ ವಸ್ತುಗಳ ಬೆಲೆಗಳು ತೀವ್ರಗತಿಯಲ್ಲಿ ಏರುತ್ತಿವೆ. ಹಾಲಿನ ದರ ಇತ್ತೀಚೆಗೆ ಏರಿಕೆಯಾಗಿದೆ. ಪ್ರಮುಖವಾಗಿ ನಗರದಲ್ಲಿ ಮನೆ ಬಾಡಿಗೆಗಳು ಗಗನ ಮುಟ್ಟಿರುವ ಪರಿಸ್ಥಿತಿಯಲ್ಲಿ ಆಟೋ ಚಾಲಕರು ಜೀವನ ನಡೆಸುವುದು ಕಷ್ಟಕರವಾಗಿದೆ. ಆದ್ದರಿಂದ ದರ ಏರಿಕೆಗಾಗಿ ಒತ್ತಾಯಿಸಿ ಆಟೋ ರಿಕ್ಷಾ ಚಾಲಕರ ಸಂಘ (ಎಆರ್‌ಡಿಯು) ನೇತೃತ್ವದಲ್ಲಿ ಹಲವು ಹಂತದ ಹೋರಾಟಗಳ ನಂತರ ರಾಜಭವನ್ ಚಲೋ ನಡೆಸಿದ್ದಾರೆ. ಇತ್ತೀಚಿನ ದಿನಗಳಲ್ಲಿ ನಡೆದ ಯಶಸ್ವಿ ಮುಷ್ಕರ ಇದಾಗಿದೆ. ಶಿಸ್ತುಬದ್ಧವಾಗಿ ಚಿಕ್ಕಲಾಲ್‌ಬಾಗ್‌ನಿಂದ ಬನ್ನಪ್ಪ ಪಾರ್ಕ್‌ವರೆಗೆ ರ್‍ಯಾಲಿ ನಡೆಸಿದ ಚಾಲಕರು ದರ ಏರಿಕೆಗೆ ಒತ್ತಾಯಿಸಿದ್ದಾರೆ. 1500 ಕ್ಕೂ ಹೆಚ್ಚು ಚಾಲಕರು ತಮ್ಮ ಆಟೋಗಳ ಸಮೇತ ಪ್ರತಿಭಟನೆಯಲ್ಲಿ ಪಾಲ್ಗೊಂಡಿದ್ದಾರೆ.

ಸದ್ಯ ಆಟೋ ದರ ಕನಿಷ್ಠ 12 (2 ಕಿ.ಮೀ) ಪ್ರತಿ ಕಿ.ಮೀ.ಗೆ 6 ರೂ.ಇದೆ. ಕನಿಷ್ಠ ದರ 12 ರೂ. ಉಳಿಸಿ 2 ಕಿ.ಮೀ. ನಿಂದ ಒಂದೂವರೆ ಕಿ.ಮೀ.ಗೆ ಇಳಿಸಬೇಕೆಂಬ ಹಾಗೂ ಪ್ರತಿ ಕಿ.ಮೀ.ಗೆ 8 ರೂ. ಹೆಚ್ಚಿಸಬೇಕೆಂದು ಪ್ರಮುಖ ಬೇಡಿಕೆ ಆಧಾರದಲ್ಲಿ ಹೋರಾಟ ಯಶಸ್ವಿಯಾಗಿದೆ. ಪ್ರತಿಭಟನಾ ನಂತರದಲ್ಲಿ ನಡೆದ ಬೆಂಗಳೂರು ನಗರ ಜಿಲ್ಲೆ ಸಾರಿಗೆ ಪ್ರಾಧಿಕಾರದ ಸಭೆಯಲ್ಲಿ ಕನಿಷ್ಠ ದರ 14 ರೂ.(2 ಕಿ.ಮೀ) 7 ರೂ.ಕಿ.ಮೀ. ದರವನ್ನು ನಿಗದಿಪಡಿಸಿ ಆದೇಶ ಹೊರಡಿಸಿದ್ದಾರೆ. ಈ ತೀರ್ಮಾನದ ವಿರುದ್ಧ ಎಆರ್‌ಡಿಯು ಅಸಮಾಧಾನ ವ್ಯಕ್ತಪಡಿಸಿ ಇದನ್ನು ಮಧ್ಯಂತರ ಪರಿಹಾರವೆಂದು ಪರಿಗಣಿಸಿ ಹೋರಾಟವನ್ನು ಮುಂದುವರೆಸಲು ತೀರ್ಮಾನಿಸಿದೆ. 04 ಫೆ, 2008ರಿಂದ ಪ್ರತಿದಿನ ಬೆಳಿಗ್ಗೆ 11 ಗಂಟೆಯಿಂದ ನಗರದ ಎಲ್ಲಾ ಆರ್.ಟಿ.ಓ. ಕಛೇರಿಗಳ ಎದುರು ಪ್ರತಿಭಟನೆ ನಡೆಸಲು ತೀರ್ಮಾನಿಸಿದೆ.


ರಾಜಭವನದತ್ತ ಆಟೋಗಳು.

ಸರ್ಕಾರದ ಮುಂದಿಟ್ಟಿರುವ ಇತರೆ ಬೇಡಿಕೆಗಳು:

1. ಆಟೋ ಚಾಲಕರಿಗೆ ಕಲ್ಯಾಣ ಮಂಡಳಿ ರಚಿಸಬೇಕು. .
2. ಚಾಲಕರಿಗೆ ಪ್ರತ್ಯೇಕ ವಸತಿ ಸಮುಚ್ಛಯ ನಿರ್ಮಿಸಬೇಕು.
3. ಚಾಲಕರಿಗೆ ನೀಡಿರುವ ರಹದಾರಿ (ಪರ್ಮಿಟ್) ಪತ್ರಗಳನ್ನು ವರ್ಗಾಯಿಸಬಾರದು.
4. ಎಲ್ಲಾ ಆಟೋ ಚಾಲಕರಿಗೆ ಬಿಪಿಎಲ್ ಕಾರ್ಡ್ ವಿತರಿಸಬೇಕು ಮುಂತಾದವು.

ಪ್ರತಿಭಟನಾ ರ್‍ಯಾಲಿಯಲ್ಲಿ ಎಆರ್‌ಡಿಯು ಅಧ್ಯಕ್ಷರಾದ ಮೀನಾಕ್ಷಿ ಸುಂದರಂ, ಉಪಾಧ್ಯಕ್ಷರಾದ ಕೆ.ಎನ್.ಉಮೇಶ್, ಕಾರ್ಯಾಧ್ಯಕ್ಷರಾದ ಶ್ರೀನಿವಾಸಮೂರ್ತಿ, ಪ್ರಧಾನ ಕಾರ್ಯದರ್ಶಿ ರಾಘವೇಂದ್ರ ಮುಂತಾದವರು ಭಾಗವಹಿಸಿದ್ದರು. ಬೇಡಿಕೆಗಳ ಮನವಿಪತ್ರವನ್ನು ರಾಜ್ಯಪಾಲರಿಗೆ ಅರ್ಪಿಸಲಾಯಿತು.

– ಲಿಂಗರಾಜು



ಮಂಗಳೂರು : ಜಾತ್ಯತೀತತೆ ರಕ್ಷಣೆಗಾಗಿ....

ಸದಾ ಕೋಮುಗಲಭೆಗಳಿಂದ ತತ್ತರಿಸುತ್ತಿರುವ ಮಂಗಳೂರು ನಗರದಲ್ಲಿ ಜಾತ್ಯಾತೀತ ಮನೋಭಾವವನ್ನು ಹಾಗೂ ಕಾರ್ಮಿಕವರ್ಗದ ಚಳುವಳಿಯನ್ನು ಬೆಳೆಸುವ ದೃಢ ಸಂಕಲ್ಪವನ್ನು ಸಿಪಿಐ(ಎಂ) ಮಾಡಿದೆ. ಇತ್ತೀಚೆಗೆ ಜರುಗಿದ 19ನೇ ಮಂಗಳೂರು ನಗರ ಸಮ್ಮೇಳನದಲ್ಲಿ ಈ ಬಗ್ಗೆ ಗಂಭೀರವಾಗಿ ಚರ್ಚೆ ನಡೆದು ಮುಂದಿನ ದಿನಗಳಲ್ಲಿ ಈ ಕೆಲಸವನ್ನು ಪ್ರಜ್ಞಾಪೂರ್ವಕವಾಗಿ ಮಾಡುವಂತೆ ಕಾರ್ಯಕರ್ತರಲ್ಲಿ ವಿಶ್ವಾಸ ಮೂಡಿಸಿದೆ.

ಸಮ್ಮೇಳನವು ಪಕ್ಷದ ರಾಜಕೀಯ ಶಕ್ತಿ ಕೇಂದ್ರವಾದ ಜಪ್ಪಿನಮೊಗರುನಲ್ಲಿ ಅತ್ಯಂತ ಯಶಸ್ವಿಯಾಗಿ ಜರುಗಿತು. ಸಮ್ಮೇಳನದ ಸ್ಥಳಕ್ಕೆ ಕಾಂ.ಪಿ.ರಾಮಚಂದ್ರರಾವ್ ನಗರವೆಂದೂ, ಸಭಾಂಗಣಕ್ಕೆ ಜೆ.ವೀರಪ್ಪ ವೇದಿಕೆಯೆಂದು ನಾಮಕರಣ ಮಾಡಲಾಗಿತ್ತು. ಸಮ್ಮೇಳನದ ಉದ್ಘಾಟನೆಯನ್ನು ಸಿಪಿಐ(ಎಂ) ರಾಜ್ಯ ಕಾರ್ಯದರ್ಶಿ ಮಂಡಳಿ ಸದಸ್ಯರಾದ ಬಿ.ಮಾಧವರವರು ನೆರವೇರಿಸಿದರು.

ಸಭೆಯ ಅಧ್ಯಕ್ಷತೆಯನ್ನು ಸಿಪಿಐ(ಎಂ) ಮಂಗಳೂರು ನಗರ ಕಾರ್ಯದರ್ಶಿ ಜೆ.ಬಾಲಕೃಷ್ಣ ಶೆಟ್ಟಿಯವರು ವಹಿಸಿದ್ದರು. ವೇದಿಕೆಯಲ್ಲಿ ಪಕ್ಷದ ಜಿಲ್ಲಾ ಮುಖಂಡರಾದ ವಸಂತ ಆಚಾರಿ, ಕೃಷ್ಣಪ್ಪ ಕೊಂಚಾಡಿ, ಯಾದವಶೆಟ್ಟಿ, ಬಾಬು ದೇವಾಡಿಗ, ಸುನಿಲ್‌ಕುಮಾರ್ ಬಜಾಲ್, ನಗರ ಸಮಿತಿ ಸದಸ್ಯರಾದ ಪೂವಪ್ಪ ಸಾಲ್ಯಾನ್, ಶಶಿಧರ್ ಶಕ್ತಿನಗರ, ಉದಯಚಂದ್ರ ರೈ, ಸಿಪಿಐ(ಎಂ) ಕಾರ್ಪೊರೇಟರ್ ಜಯಂತಿ.ವಿ ಶೆಟ್ಟಿಯವರು ಉಪಸ್ಥಿತರಿದ್ದರು. ಉದ್ಘಾಟನೆಯ ಮೊದಲು ಪಕ್ಷದ ಹಿರಿಯ ಸದಸ್ಯರಾದ ಚಂದು ಭಂಡಾರಿಯವರು ಧ್ವಜಾರೋಹಣಗೈದರು. ಪ್ರಾರಂಭದಲ್ಲಿ ಸಮ್ಮೇಳನದಲ್ಲಿ ಸ್ವಾಗತ ಸಮಿತಿಯ ಅಧ್ಯಕ್ಷರಾದ ದಿನೇಶ್ ಅಂಚನ್‌ರವರು ಸ್ವಾಗತಿಸಿದರೆ, ಕೊನೆಯಲ್ಲಿ ಜಪ್ಪಿನಮೊಗರು ಶಾಖಾ ಕಾರ್ಯದರ್ಶಿ ಚಂದ್ರಹಾಸ.ಜೆ.ಯವರು ವಂದಿಸಿದರು.

ಬಳಿಕ ನಡೆದ ಪ್ರತಿನಿಧಿ ಅಧಿವೇಶನದಲ್ಲಿ ಸುಮಾರು 80ರಷ್ಟು ಪ್ರತಿನಿಧಿಗಳು ಭಾಗವಹಿಸಿದ್ದರು. ಸಮ್ಮೇಳನವು ಮಂಗಳೂರು ನಗರದ ಸಮಗ್ರ ಅಭಿವೃದ್ಧಿಗಾಗಿ ಹಲವಾರು ನಿರ್ಣಯಗಳನ್ನು ಕೈಗೊಂಡಿತು. ಅವುಗಳಲ್ಲಿ ಅಡುಗೆ ಅನಿಲ ವಿತರಣೆಯಲ್ಲಿನ ಲೋಪದೋಷಗಳನ್ನು ಸರಿಪಡಿಸಲು, ಎಲ್ಲಾ ಬಡವರಿಗೆ ಬಿಪಿಎಲ್ ಕಾರ್ಡ್ ಹಾಗೂ ಮನೆ ನಿವೇಶನ ನೀಡಲು, ದಲಿತರ ಅಭಿವೃದ್ಧಿಗಾಗಿ ವಿಶೇಷ ಪ್ಯಾಕೇಜ್ ಜಾರಿಗಾಗಿ, ರಸ್ತೆ ಡಾಮರೀಕರಣ, ಬಜಾಲ್, ಪಡೀಲ್ ರೈಲ್ವೆ ಮೇಲ್ಸೇತುವೆ ನಿರ್ಮಾಣ, ಮಂಗಳೂರು, ಬೆಂಗಳೂರು ರೈಲ್ವೆ ಮಾರ್ಗ ಆಧರಿಸಿ ಮಧ್ಯಭಾರತಕ್ಕೆ ಸಂಪರ್ಕ ಕಲ್ಪಿಸುವ ರೈಲು ಪ್ರಾರಂಭಿಸಲು ಒತ್ತಾಯ ಇತ್ಯಾದಿ ಪ್ರಮುಖವಾದ ನಿರ್ಣಯಗಳು.

ಮುಂದಿನ ದಿನಗಳಲ್ಲಿ ಪಕ್ಷವನ್ನು ನಗರದಾದ್ಯಂತ ಬಲಿಷ್ಠವಾಗಿ ಕಟ್ಟಿಬೆಳೆಸಲು ನೂತನ ನಗರ ಸಮಿತಿಯನ್ನು ಆಯ್ಕೆ ಮಾಡಲಾಯಿತು. ನೂತನ ಕಾರ್ಯದರ್ಶಿ ಯಾಗಿ ಸುನಿಲ್‌ಕುಮಾರ್ ಬಜಾಲ್‌ರವರನ್ನು ಸರ್ವಾನುಮತದಿಂದ ಆರಿಸಲಾಯಿತು. ನಗರ ಸಮಿತಿ ಸದಸ್ಯರಾಗಿ ಜೆ.ಬಾಲಕೃಷ್ಣ ಶೆಟ್ಟಿ, ವಸಂತ ಆಚಾರಿ, ಕೃಷ್ಣಪ್ಪ ಕೊಂಚಾಡಿ, ಬಾಬು ದೇವಾಡಿಗ, ಶಶಿಧರ್ ಶಕ್ತಿನಗರ, ಜಯಂತಿ ಶೆಟ್ಟಿ, ಸುರೇಶ್ ಬಜಾಲ್, ಭಾರತಿ ಬೋಳಾರ, ದಯಾನಂದ ಶೆಟ್ಟಿಯವರನ್ನು ಆರಿಸಲಾಯಿತು. ಸಮ್ಮೇಳನದ ಸಮಾರೋಪವನ್ನು ಸಿಪಿಐ(ಎಂ) ದಕ್ಷಿಣ ಕನ್ನಡ ಜಿಲ್ಲಾ ಕಾರ್ಯದರ್ಶಿ ಕೆ.ಆರ್.ಶ್ರೀಯಾನ್‌ರವರು ಮಾಡುತ್ತಾ, ಪಕ್ಷದ ಬೆಳವಣಿಗೆಗೆ ಎಲ್ಲಾ ಕಾರ್ಯಕರ್ತರು ಶಕ್ತಿಮೀ[...] ಐಕ್ಯತೆಯಿಂದ ದುಡಿಯುವಂತೆ ಕರೆ ನೀಡಿದರು.

ಅಂದು ಸಂಜೆ ಬಜಾಲ್‌ನಿಂದ ಹೊರ[...] ಆಕರ್ಷಕ ಮೆರವಣಿಗೆಯು ಜಪ್ಪಿನಮೊಗರುನ[...] ದಾಪುಗಾಲನ್ನಿಟ್ಟಿತ್ತು. ಮೆರವಣಿಗೆಯಲ್ಲಿ ನೂರಾ[...] ಸಂಖ್ಯೆಯಲ್ಲಿದ್ದ ಕಾರ್ಯಕರ್ತರು ಘೋಷಣೆಗಳ[...] ಕೂಗುತ್ತಾ ಸಾಗಿದರು. ಮೆರವಣಿಗೆಯ ಮುಂಭಾಗದಲ್ಲಿದ್ದ ನಾಸಿಕ್ ಬ್ಯಾಂಡ್‌ನ ತಾಳ[...] ನೂರಕ್ಕೂ ಮಿಕ್ಕಿದ ಯುವಜನರು ಹೆಜ್ಜೆ ಹಾ[...] ನಲಿಯುತ್ತಿರುವ ದೃಶ್ಯ ರಸ್ತೆಯ ಇಕ್ಕೆಲಗಳಲ್ಲಿ ಸೇರಿ[...] ಜನತೆಯ ಕಣ್ಮನ ಸೆಳೆಯುವಂತಿತ್ತು. ಕೊಂ[...] ವಾದ್ಯಗಳ ನಿನಾದ, ಸುಡು ಮದ್ದುಗಳ ಆರ್ಭ[...] ಮೆರವಣಿಗೆಗೆ ಹೊರ ಮೆರಗನ್ನು ನೀಡಿತು.

ಬಳಿಕ ಜಪ್ಪಿನಮೊಗರು ಶಾಲಾ ವಠಾರದ[...] ಜರುಗಿದ ಬಹಿರಂಗ ಸಭೆಯಲ್ಲಿ ಮಂಜೇಶ್ವ[...] ಸಿಪಿಐ(ಎಂ) ಶಾಸಕರಾದ ಸಿ.ಎಚ್.ಕುಞಂ[...] ರವರು ಮಾತನಾಡಿದರು. ವೇದಿಕೆಯ[...] ಸಿಪಿಐ(ಎಂ) ಜಿಲ್ಲಾ ಕಾರ್ಯದರ್ಶಿ ಕೆ.ಆರ್ ಶ್ರೀಯಾನ್, ರಾಜ್ಯ ಕಾರ್ಯದರ್ಶಿ ಮಂಡ[...] ಸದಸ್ಯರಾದ ಬಿ.ಮಾಧವ, ಜಿಲ್ಲಾ ಮುಖಂಡರಾ[...] ವಸಂತ ಆಚಾರಿ, ಕೃಷ್ಣಪ್ಪ ಕೊಂಚಾಡಿ, ಬಾಬು ದೇವಾಡಿಗ ಮುಂತಾದವರು ಉಪಸ್ಥಿತರಿದ್ದರು.

ಸಿಂಚನ, ಮಂಗಳೂರ[...]

ನಕ್ಸಲ್‌ವಾದ ಕೋಮುವಾದಗಳ ವಿರುದ್ಧ ಸೆಣೆಸಲು ನಿರ್ಧಾರ
ಕೈಗಾರಿಕೆಗಳ ಪುನಶ್ಚೇತನಕ್ಕೆ ಒತ್ತಾಯ

ಶಿವಮೊಗ್ಗ ಜಿಲ್ಲೆಯು ಮಲೆನಾಡು ಪ್ರದೇಶವಾಗಿದ್ದು, ಜಗದ್ವಿಖ್ಯಾತ ಜೋಗ್‌ಫಾಲ್ಸನ್ನು ಹೊಂದಿದ್ದು, ಇಲ್ಲಿನ ಬೃಹತ್ ವಿದ್ಯುದಾಗರವು ರಾಜ್ಯಕ್ಕೆ ಬೆಳಕು ನೀಡುವ ಮೂಲವಾಗಿದ್ದರೂ ಜಿಲ್ಲೆಯ ಜನತೆಯ ಬದುಕಿನಲ್ಲಿ ಇನ್ನೂ ಅಂತಹ ಬೆಳಕು ಮೂಡಿಲ್ಲ. ಜಿಲ್ಲೆಯು 'ಶೈಕ್ಷಣಿಕ - ವಾಣಿಜ್ಯ' ಕೇಂದ್ರವಾಗಿ ಮಾರ್ಪಡುತ್ತಿದೆ. ಇಂಜಿನಿಯರಿಂಗ್ ಕಾಲೇಜು, ಡೆಂಟಲ್ ಕಾಲೇಜು, ಎರಡು ಮೆಡಿಕಲ್ ಕಾಲೇಜುಗಳನ್ನು ಹೊಂದಿದೆ. ಜಿಲ್ಲೆಯಲ್ಲಿ ವ್ಯವಸಾಯ ಪ್ರಮುಖ ಕಸುಬಾಗಿದೆ. ಭತ್ತ, ಅಡಿಕೆ ಇಲ್ಲಿನ ಪ್ರಮುಖ ಬೆಳೆಗಳಾಗಿವೆ. ಕೈಗಾರಿಕೆಗಳೆಂದರೆ, ಪ್ರಮುಖವಾಗಿ ವಿ.ಐ.ಎಸ್.ಎಲ್ ಮತ್ತು ಎಂ.ಪಿ.ಎಂ. ಕೈಗಾರಿಕೆಗಳಾಗಿವೆ. ಚಿಕ್ಕ ಚಿಕ್ಕ ಕೈಗಾರಿಕೆಗಳೂ ಕೂಡ ಇವೆ. ಇತ್ತೀಚೆಗೆ ನೆರೆ ಹಾವಳಿಗಳಿಂದ ಮನೆಗಳ ಕುಸಿತ, ರೈತರ ಬೆಳೆಹಾನಿ, ಸಾವು ನೋವುಗಳಿಂದ ರೈತರ ಜೀವನ ತತ್ತರಿಸಿ ಹೋಗಿದೆ. ಈವರೆಗೆ ಕರ್ನಾಟಕ ಸರ್ಕಾರದಿಂದ ಹಾಗೂ ಕೇಂದ್ರ ಸರ್ಕಾರದಿಂದ ಪರಿಹಾರ ಕಾರ್ಯಗಳು ಆಗದೆ ರೈತರು ತೀವ್ರ ಸಂಕಷ್ಟಕ್ಕೊಳಗಾಗಿದ್ದಾರೆ.

ರಾಜಕೀಯ ಪಕ್ಷಗಳ ಬಲಾಬಲ

ಇಲ್ಲಿನ ಪ್ರಮುಖ ರಾಜಕೀಯ ಪಕ್ಷಗಳೆಂದರೆ, ಬಿಜೆಪಿ ಮತ್ತು ಕಾಂಗ್ರೆಸ್, ಸಮಾಜವಾದಿ, ಜೆಡಿ(ಎಸ್) ಗಳಾಗಿವೆ. ಶಿವಮೊಗ್ಗ, ಶಿಕಾರಿಪುರ, ತೀರ್ಥಹಳ್ಳಿ, ಹೊಸನಗರ, ಸಾಗರಗಳಲ್ಲಿ ಬಿಜೆಪಿ ಪ್ರಾಬಲ್ಯ ಹೊಂದಿದ್ದರೆ ಭದ್ರಾವತಿ ಮತ್ತು ಸೊರಬ ವಿಧಾನಸಭಾ ಕ್ಷೇತ್ರಗಳಲ್ಲಿ ಸ್ಥಾನ ಹೊಂದಿದ್ದು, ಲೋಕಸಭಾ ಕ್ಷೇತ್ರ ಎಸ್.ಬಂಗಾರಪ್ಪನವರ ಎಸ್.ಪಿ.ಯ ತೆಕ್ಕೆಯಲ್ಲಿದೆ. ಇತ್ತೀಚಿನ ಸ್ಥಳೀಯ ಸಂಸ್ಥೆ ಚುನಾವಣೆಗಳಲ್ಲಿ ಸೊರಬ ಭದ್ರಾವತಿ ಕಾಂಗ್ರೆಸ್ಸಿಗೆ, ಹೊಸನಗರ ಜೆ.ಡಿ.ಎಸ್. ಪಾಲಾಗಿದೆ. ಉಳಿದಂತೆ ಶಿವಮೊಗ್ಗ, ಶಿಕಾರಿಪುರ, ಶಿರಾಳಕೊಪ್ಪ, ತೀರ್ಥಹಳ್ಳಿ, ಸಾಗರ ಬಿ.ಜೆ.ಪಿ ಪಾಲಾಗಿದೆ.

ಬಿ.ಜೆ.ಪಿ.ಯು ಕೋಮು ಹುನ್ನಾರ ನಡೆಸಿ, ಕೋಮುಭಾವನೆಯನ್ನು ಕೆರಳಿಸಿ ಯಾವಾಗಲೂ ಕೋಮುಗಲಭೆಗಳನ್ನು ನಡೆಸಲು ಪ್ರಯತ್ನ ನಡೆಸುತ್ತಿರುತ್ತದೆ. ಮತೀಯ ಅಲ್ಪಸಂಖ್ಯಾತರ ಮೇಲೆ ಧಾಳಿಗಳು, ಸಂಘ ಪರಿವಾರದಿಂದ ನಡೆಯುತ್ತಿರುತ್ತವೆ. ಇದರೆಲ್ಲದರ ವಿರುದ್ಧ ಸೆಟೆದು ನಿಲ್ಲಬೇಕಾದ ಕಾಂಗ್ರೆಸ್ ಪಕ್ಷ ಮೌನವಾಗಿರುತ್ತದೆ. ಬಿ.ಜೆ.ಪಿ.ಯು ಕಾರ್ಮಿಕ ಸಂಘಟನೆಗಳನ್ನು ಪ್ರಗತಿಪರ ಹೋರಾಟಗಳಲ್ಲಿ ದುಡಿಯುತ್ತಿರುವ ಜನರನ್ನು ಬೆದರಿಸಿ ಸಂಘಟನೆಗಳನ್ನು ಮುರಿಯಲು ಸದಾ ಪ್ರಯತ್ನ ನಡೆಸುತ್ತಿರುತ್ತದೆ.

ಇಲ್ಲಿ ಕೆಲವೆಡೆ ಸಿಪಿಐ(ಎಂ) ಪಕ್ಷದ ಪ್ರಭಾವವಿದೆ. ಆದರೆ ಸಂಘಟನಾತ್ಮಕವಾಗಿ ಇನ್ನೂ ಬೆಳೆಯಬೇಕಾದ ಪಕ್ಷವಾಗಿದೆ. ಆಗಾಗ್ಗೆ ಜನಪರ ಹೋರಾಟಗಳು ನಡೆಯುತ್ತಿವೆ. ಹಾಗೂ ಜನಪರವಾಗಿ ಹಲವು ವಿಚಾರಗಳಿಗೆ ಧ್ವನಿ ಎತ್ತಲಾಗಿದೆ.

ಜಿಲ್ಲೆಯು ಈ ಹಿಂದೆ ನಕ್ಸಲೀಯ ಚಳುವಳಿಯ ಕೇಂದ್ರವಾಗಿದ್ದು, ಈಗ ಅದು ಒಡೆದು ಹೋಗಿದೆ. ಈಗ ಅದರ ಚಟುವಟಿಕೆಯು ಕಡಿಮೆಯಾಗಿದೆ. ಜಿಲ್ಲೆಯ ಜನರ ಸಮಸ್ಯೆಗಳ ವಿರುದ್ಧದ ಜನಚಳುವಳಿಯನ್ನು ಬಲಗೊಳಿಸುವ ಕುರಿತು ಡಿಸೆಂಬರ್ 25, 2007ರಂದು ಶಿವಮೊಗ್ಗ ಸ್ಕೌಟ್ ಭವನದಲ್ಲಿ ನಡೆದ ಸಿಪಿಐ(ಎಂ) ಜಿಲ್ಲಾ ಸಮ್ಮೇಳನ ಚರ್ಚಿಸಿತು. ಆರಂಭದಲ್ಲಿ ಧ್ವಜಾರೋಹಣವನ್ನು ರೈತಮುಖಂಡರಾದ ಕಾಂ.ಕೆ.ಎಂ.ಶ್ರೀನಿವಾಸ್ ನೆರವೇರಿಸಿದರು. ಅವರು ಕೆಂಪುಧ್ವಜವು ಹೋರಾಟಗಾರರ ಧ್ವಜವಾಗಿದ್ದು, ಜನರ ದುಮ್ಮಾನಗಳನ್ನು ನೀಗಿಸುತ್ತಾ ಬಂದಿರುವ ಧ್ವಜವಾಗಿದೆ. ಇದು ಅಂತರ್ರಾಷ್ಟ್ರೀಯ ದುಡಿಯುವ ಜನರ ಭಾವೈಕ್ಯವನ್ನು ಸಾರುತ್ತದೆ ಎಂದರು.

ಸಮ್ಮೇಳನದ ಉದ್ಘಾಟನೆಯನ್ನು ಸಿಪಿಐ(ಎಂ) ಪಕ್ಷದ ರಾಜ್ಯ ಕಾರ್ಯದರ್ಶಿ ಮಂಡಳಿ ಸದಸ್ಯರಾದ ಕಾಂ.ಕೆ.ಶಂಕರ್ ನೆರವೇರಿಸಿದರು.

ನಂತರ ಮಾತನಾಡಿದ ಸಿಪಿಐ(ಎಂ) ಜಿಲ್ಲಾ ಕಾರ್ಯದರ್ಶಿ ಎಸ್.ಬಿ.ಶಿವಶಂಕರ್‌ರವರು ಜಿಲ್ಲೆಯನ್ನು ಕೋಮುವಾದಿ ತೆಕ್ಕೆಗಳಿಂದ ಮುಕ್ತಿಗೊಳಿಸಬೇಕೆಂದು ಹೇಳಿ ಅಲ್ಪಸಂಖ್ಯಾತರ ಮೇಲೆ ಸಂಘ ಪರಿವಾರ ನಡೆಸುತ್ತಿರುವ ದಾಳಿಗಳನ್ನು ಖಂಡಿಸಿದರು. ಸಿಪಿಐ(ಎಂ) ಪಕ್ಷದ ಹಿರಿಯ ಸದಸ್ಯರಾದ ಕಾಂ.ಜಿ.ಎಸ್.ನಾಗರಾಜ್ ನಕ್ಸಲ್ ಅಪಾಯದ ಕುರಿತು ಎಚ್ಚರಿಸಿದರು. ಕಾಂ.ವಿಮಲಾರವರು ಪ್ರತಿನಿಧಿ ಸಮ್ಮೇಳನದಲ್ಲಿ ಉಪಸ್ಥಿತರಿದ್ದರು. ಮತ್ತು ಮಾರ್ಗದರ್ಶನ ಮಾಡಿದರು. ಜಿಲ್ಲಾ ಸಮಿತಿ ರಚನೆ ಮತ್ತು ರಾಜ್ಯ ಸಮ್ಮೇಳನಕ್ಕೆ ಪ್ರತಿನಿಧಿಗಳನ್ನು ಆಯ್ಕೆ ಮಾಡಲಾಯಿತು.


ವೇದಿಕೆಯಲ್ಲಿ ಶಿವಶಂಕರ್, ಕೆ.ಶಂಕರ್, ಜಿ.ಎಸ್. ನಾಗರಾಜ್, ಶ್ರೀನಿವಾಸ

ಉದ್ಘಾಟನಾ ಸಮಾರಂಭದಲ್ಲಿ ಎಲ್.ರಂಗೇಗೌಡ ಸ್ವಾಗತಿಸಿದರು, ವಂದನಾರ್ಪಣೆಯನ್ನು ಕೆ.ಜಿ.ಗಿರಿಯಪ್ಪ ಇವರು ಮಾಡಿದರು. ಪ್ರತಿನಿಧಿ ಸಮ್ಮೇಳನದಲ್ಲಿ ಎಸ್.ಬಿ.ಶಿವಶಂಕರ್ ಸ್ವಾಗತಿಸಿದರೆ, ಎಲ್.ರಂಗೇಗೌಡ ವಂದಿಸಿದರು. ಕೊನೆಯಲ್ಲಿ ಘೋಷಣೆಗಳೊಂದಿಗೆ ಸಮ್ಮೇಳನ ಮುಕ್ತಾಯವಾಯಿತು.

ನೂತನ ಸಮಿತಿ

1. ಎಸ್.ಬಿ.ಶಂಕರ್ 2. ಎಲ್.ರಂಗೇಗೌಡ
3. ಕೆ.ಸುಕುಮಾರನ್ 4. ಕೆ.ಜಿ.ಗಿರಿಯಪ್ಪ
5. ಬೆಟ್ಟೇಗೌಡ 6. ಎಂ.ನಾರಾಯಣ್
7. ಜಿ.ಎಸ್.ನಾಗರಾಜ್
8. ಕೆ.ಲಕ್ಷ್ಮೀನಾರಾಯಣ್

ಜಿಲ್ಲಾ ಕಾರ್ಯದರ್ಶಿಯಾಗಿ ಎಸ್.ಬಿ.ಶಿವಶಂಕರ್ ಆಯ್ಕೆಯಾಗಿದ್ದಾರೆ.

ಭೂಹೀನ ಕೃಷಿ ಕಾರ್ಮಿಕರಿಗೆ ಭೂಮಿಯನ್ನು ಪುಕ್ಕಟೆಯಾಗಿ ಹಂಚಬೇಕೆಂದು ರೈತರು ಬೆಳೆದ ಬೆಳೆಗೆ ವೈಜ್ಞಾನಿಕವಾದ ಮತ್ತು ನ್ಯಾಯವಾದ ಬೆಲೆ ನೀಡಬೇಕೆಂದು ಜಿಲ್ಲೆಯಲ್ಲಿ ಅತಿವೃಷ್ಟಿಯಿಂದ ಕಂಗಾಲಾಗಿರುವ ರೈತರಿಗೆ ಮತ್ತು ಕೃಷಿ ಕಾರ್ಮಿಕರಿಗೆ ಪರಿಹಾರ ನೀಡಬೇಕೆಂದು. ತುಂಬಾ ಹಳೆಯ ಬೇಡಿಕೆಯಾದ ಶಿವಮೊಗ್ಗದಿಂದ ತಾಳಗುಪ್ಪ, ತಾಳಗುಪ್ಪದಿಂದ ಭಟ್ಕಳಕ್ಕೆ ರೈಲ್ವೆ ಮಾರ್ಗ ಸಂಪರ್ಕಿಸಬೇಕೆಂದು ಕೇಂದ್ರ ಸರ್ಕಾರವನ್ನು ಸಮ್ಮೇಳನವು ಒತ್ತಾಯಿಸಿದೆ.

ಜಿಲ್ಲೆಯ ರಾಷ್ಟ್ರೀಯ ಹೆದ್ದಾರಿ, ರಾಜ್ಯ ಹೆದ್ದಾರಿಗಳು ಸಂಪೂರ್ಣವಾಗಿ ಹಾಳಾಗಿದ್ದು, ಕೂಡಲೇ ದುರಸ್ತಿ ಕಾರ್ಯವನ್ನು ಆರಂಭಿಸಬೇಕೆಂದು ಸರ್ಕಾರಗಳನ್ನು ಒತ್ತಾಯಿಸಿ ಸಮ್ಮೇಳನವು ನಿರ್ಣಯ ಕೈಗೊಂಡಿದೆ.

ವಿ.ಐ.ಎಸ್.ಎಲ್. ಕಾರ್ಖಾನೆಯನ್ನು ಸ್ಪರ್ಧಾತ್ಮಕವಾಗಿ ಉತ್ಪಾದನೆಯಲ್ಲಿ ಮುಂದೆ ಕೊಂಡೊಯ್ಯಲು, ಆಧುನಿಕರಣಕ್ಕಾಗಿ 2000 ಕೋಟಿ ರೂಪಾಯಿಗಳನ್ನು ಮಂಜೂರು ಮಾಡಬೇಕೆಂದು ಕೇಂದ್ರ ಸರ್ಕಾರವನ್ನು ಒತ್ತಾಯಿಸಿ, ಭದ್ರಾವತಿಯ ಎಂ.ಪಿ.ಎಂ ಕಾರ್ಖಾನೆಯನ್ನು ಪುನಶ್ಚೇತನ ಗೊಳಿಸಲು 120 ಕೋಟಿ ರೂಪಾಯಿಗಳನ್ನು ಮಂಜೂರು ಮಾಡಬೇಕೆಂದು ಒತ್ತಾಯಿಸಿ, ನಿರ್ಣಯಗಳನ್ನು ಅಂಗೀಕರಿಸಲಾಯಿತು.

ಮುಂದಿನ ಲೋಕಸಭಾ ಚುನಾವಣೆಗಳಲ್ಲಿ ತಾನು ಅಧಿಕಾರಕ್ಕೆ ಮರಳುತ್ತೇನೆ ಎಂದು ಬಿಂಬಿಸಲು ಬಿಜೆಪಿ ಎಷ್ಟೇ ಪ್ರಯತ್ನ ಪಟ್ಟರೂ ಬಹಳ ಮಂದಿಯನ್ನು ನಂಬಿಸಲು ಅದಕ್ಕೆ ಆಗುತ್ತಿಲ್ಲ. ಅದೇನೇ ಹೇಳಿದರೂ ಕಳೆದ ನಾಲ್ಕು ವರ್ಷಗಳಲ್ಲಿ ಬಲ ಕಳಕೊಂಡಿರುವುದು ಎನ್‌ಡಿಎ ಹೊರತು ಯುಪಿಎ ಅಲ್ಲ ಎಂಬುದೂ ವಾಸ್ತವ. ಎಡಪಕ್ಷಗಳು ಆರಂಭದಿಂದಲೂ ಯುಪಿಎ ಮೈತ್ರಿಕೂಟದ ಭಾಗವಾಗಿರಲಿಲ್ಲ. ಜಾತ್ಯಾತೀತ ಶಕ್ತಿಗಳನ್ನು ಬಲಗೊಳಿಸುವುದು, ಜನಗಳ ವಾಸ್ತವಿಕ ಪ್ರಶ್ನೆಗಳನ್ನು ಎತ್ತಿಕೊಳ್ಳುವುದು ತಮ್ಮ ಅಜೆಂಡಾ ಎಂದು ಅವರು ಹೇಳುತ್ತಲೇ ಬಂದಿದ್ದಾರೆ. ಆದ್ದರಿಂದ ಗುಜರಾತ್ ಮತ್ತು ಹಿಮಾಚಲ ಪ್ರದೇಶದಲ್ಲಿ ಚುಣಾವಣಾ ಗೆಲುವುಗಳ ನಂತರ ಬಿಜೆಪಿಯ ಅಬ್ಬರ ಕೇವಲ ಬೊಗಳೆ.

ಗುಜರಾತಿನ ಚುನಾವಣೆಗಳ ನಂತರ ಬಿಜೆಪಿ ಮುಂದಿನ ಲೋಕಸಭಾ ಚುನಾವಣೆಗಳಲ್ಲಿ ದಿಲ್ಲಿಯಲ್ಲಿ ಮತ್ತೆ ತಮ್ಮದೇ ರಾಜ್ಯಭಾರ ಎಂದು ಬಿಂಬಿಸಲು ಹೆಣಗುತ್ತಿದೆ. ಇತ್ತೀಚೆಗೆ ದಿಲ್ಲಿಯಲ್ಲಿ ನಡೆದ ಅದರ ರಾಷ್ಟ್ರೀಯ ಮಂಡಳಿ ಸಭೆಯಲ್ಲೂ ಅದೇ ಅಬ್ಬರ ಕಂಡು ಬಂತು. ಅದು ತನ್ನ ಇತರ ರಾಜ್ಯ ಸರಕಾರಗಳು ಗುಜರಾತನ್ನು ಅನುಕರಿಸಬೇಕು ಎಂದು ಕರೆ ನೀಡಿದೆ.

‘ಹಿಂದುತ್ವ’ದ ಗುಟುರು

ಈ ಸಭೆಯಲ್ಲಿ ರಾಜನಾಥ್ ಸಿಂಗ್‌ರವರ ಅಧ್ಯಕ್ಷೀಯ ಭಾಷಣ ಮತ್ತೆ ಹಿಂದುತ್ವದ ಪ್ರಿಯ ಘೋಷಣೆಗಳ ಚರ್ವಿತ ಚರ್ವಣವೇ ಆಗಿತ್ತು. ‘ವಂದೇ ಮಾತರಂ’ನ್ನು ಕಡ್ಡಾಯಗೊಳಿಸಬೇಕು, ಅಫ್ಜಲ್‌ನನ್ನು ಗಲ್ಲಿಗೇರಿಸಬೇಕು, ಮುಸ್ಲಿಮರ ತುಷ್ಟೀಕರಣ, ಭಯೋತ್ಪಾದನೆಯ ಬಗ್ಗೆ ಮೃದು ಧೋರಣೆ ಇತ್ಯಾದಿ, ಇತ್ಯಾದಿ. ಗುಜರಾತ್ ಮತ್ತು ಹಿಮಾಚಲ ಪ್ರದೇಶದಲ್ಲಿ ಚುನಾವಣಾ ಗೆಲುವಿನಿಂದ ಹಿಗ್ಗಿ ಹೋಗಿರುವ ಅವರು ಎನ್‌ಡಿಎ ಸರಕಾರ ಮತ್ತೆ ಅಧಿಕಾರಕ್ಕೆ ಬರುತ್ತದೆ, ಏಕೆಂದರೆ ಎನ್‌ಡಿಎ ಆಳ್ವಿಕೆ ಯುಪಿಎಗಿಂತ ಉತ್ತಮವಾಗಿತ್ತು ಎಂದು ಸಾರಿದ್ದಾರೆ. ಆದರೆ ಎನ್‌ಡಿಎ ಯ ‘ಹೊಳೆಯುವ ಭಾರತ’ ಪ್ರಚಾರ ಎಷ್ಟು ಹಾಸ್ಯಾಸ್ಪದ ಎಂದು ಜನರು ಕೊಟ್ಟ ಉತ್ತರವನ್ನು ಅವರು ಮರೆಯುವುದು ಅವರಿಗೆ ಅನುಕೂಲಕರವಾಗಿರಬಹುದು, ಜನರು ಮರೆಯುತ್ತಾರೆಯೇ? ಬಿಜೆಪಿ ನೇತೃತ್ವದ ಸರಕಾರದ ಆರು ವರ್ಷಗಳ ಆಳ್ವಿಕೆಯನ್ನು ಜನರು ಮರೆಯಲು ಹೇಗೆ ಸಾಧ್ಯ? ಹಿಂದೆಂದೂ ಕಾಣದ ರೀತಿಯಲ್ಲಿ ಸಾವಿರಾರು ರೈತರು ಆತ್ಮಹತ್ಯೆ ಮಾಡಿಕೊಳ್ಳುವ ಪ್ರಕ್ರಿಯೆ ಆರಂಭವಾದದ್ದು ಇದೇ ಆಳ್ವಿಕೆಯಲ್ಲಲ್ಲವೇ? ಕೃಷಿ ಬೆಳವಣಿಗೆ ಇಳಿಮುಖವಾಗಿ ಬಿಕ್ಕಟ್ಟಿನ ಪರಿಸ್ಥಿತಿ ಏರ್ಪಟ್ಟದ್ದು ವಾಜಪೇಯಿ ಸರಕಾರದ ವಿನಾಶಕಾರಿ ಆರ್ಥಿಕ ನೀತಿಗಳಿಂದಾಗಿ. ಈಗಲೂ ಅದು ಅಂಗೀಕರಿಸಿರುವ ಕೃಷಿ ಕುರಿತ ಠರಾವು ಬಿಜೆಪಿ ನೇತೃತ್ವ ದ ಸರಕಾರ ಬಂದರೆ ಮತ್ತೆ ಅದೇ ವಿನಾಶಕಾರಿ ನೀತಿ ಮುಂದುವರೆಯುತ್ತದೆ ಎಂಬುದನ್ನು ನೆನಪಿಸುತ್ತದೆ.

ಹೇಗಾದರೂ ಮರಳಿ ದೆಹಲಿ ಗದ್ದುಗೆ ಹಿಡಿಯಬೇಕೆಂದು ಹೊಂಚು ಹಾಕುತ್ತಿರುವ ಬಿಜೆಪಿಯು ಬಡಬಡಿಸಿ ಎಷ್ಟೇ ಅಬ್ಬರ ಮಾಡಿದರೂ ಅದರ ಟೊಳ್ಳುತನ ಬಯಲಾಗಿದೆ.

ಭಾರತವೆಲ್ಲಾ ಗುಜರಾತ್ ಅಲ್ಲ ಬೊಗಳೆ ಬಿಜೆಪಿಗೆ ಇದು ಗೊತ್ತೆ?

ರಾಜಸ್ಥಾನ, ಮಧ್ಯಪ್ರದೇಶ ಮತ್ತು ಛತ್ತೀಸ್‌ಘಡದಲ್ಲಿ ಅದು ಚುನಾವಣೆಗಳನ್ನು ಎದುರಿಸಬೇಕಾಗಿದೆ. ಅಲ್ಲಿನ ರಾಜ್ಯ ಸರಕಾರಗಳು ಜನ-ವಿರೋಧಿ ಆಳ್ವಿಕೆಯಲ್ಲಿ ಹೊಸ ದಾಖಲೆಗಳನ್ನೇ ಸೃಷ್ಟಿಸಿವೆ. ಬಂಡವಾಳಶಾಹಿಗಳ, ಭೂಮಾಲಕರ ಹಿತಾಸಕ್ತಿಗಳಿಗೆ ಬಹಿರಂಗ ಪ್ರೋತ್ಸಾಹ, ಹೊಲಸು ಭ್ರಷ್ಟಾಚಾರ ಮತ್ತು ದಮನ. ಅವರೆಲ್ಲ ಗುಜರಾತನ್ನು ಅನುಕರಿಸಬೇಕಂತೆ. ಆದರೆ ಎಲ್ಲಾ ರಾಜ್ಯಗಳು ಗುಜರಾತ ಆಗಲು ಸಾಧ್ಯವಿಲ್ಲ.


ಕೃಪೆ: ಪ್ರಜಾವಾಣಿ

ಪೋಟಾ ಕಾನೂನು ಇಲ್ಲದ್ದರಿಂದ ಭಯೋತ್ಪಾದನೆಯನ್ನು ತಡೆಯಲು ಆಗಿಲ್ಲ ಎಂಬುದು ಬಿಜೆಪಿಯ ಹಳೆಯ ರಾಗ. ಬಿಜೆಪಿ ಅಧ್ಯಕ್ಷರು ಅದನ್ನು ಮತ್ತೆ ಆಲಾಪಿಸಿದ್ದಾರೆ. ಇವರ ಆಳ್ವಿಕೆಯಲ್ಲಿ ಅಕ್ಷರಧಾಮ, ಸಂಸತ್ತಿನ ಮೇಲೆ ಧಾಳಿ ಮುಂತಾದ ಭಯೋತ್ಪಾದಕ ಕೃತ್ಯಗಳ ಒಂದು ಸರಣಿಯೇ ನಡೆಯಿತು. ಆಗ ಪೋಟ ಕಾನೂನು ಜ್ಯಾರಿಯಲ್ಲಿತ್ತು. ಹಾಗಿರುವಾಗ ಈ ಆಲಾಪನೆ ಯಾರನ್ನೂ ನಂಬಿಸಲಾರದು. ಇನ್ನು ಸಚಾರ್ ಸಮಿತಿಯು ವರದಿ ಅವರಿಗೆ ಮುಸ್ಲಿಮರ ತುಷ್ಟೀಕರಣವಾಗಿ ಕಾಣುತ್ತದೆ. ಕೋಮುವಾದಿ ಕಣ್ಣುಪಟ್ಟಿ ಕಟ್ಟಿಕೊಂಡ ಅವರಿಗೆ ಮುಸ್ಲಿಂ ಅಲ್ಪಸಂಖ್ಯಾತರ ನಿಜವಾದ ದುಸ್ಥಿತಿ ಕಾಣದಿದ್ದರೆ ಆಶ್ಚರ್ಯವಿಲ್ಲ. ಆದರೆ ಇದು ಖಂಡಿತ ಮುಸ್ಲಿಂ ತುಷ್ಟೀಕರಣದ ಅಥವಾ ವೋಟ್ ಬ್ಯಾಂಕಿನ ರಾಜಕೀಯವಲ್ಲ, ಭಾರತದ ಪ್ರಜಾಪ್ರಭುತ್ವ ತನ್ನ ಅತಿ ದೊಡ್ಡ ಅಲ್ಪಸಂಖ್ಯಾತ ಸಮುದಾಯಕ್ಕೆ ನ್ಯಾಯ ಒದಗಿಸುವ ಪ್ರಶ್ನೆ ಇದು. ಯುಪಿಎ ಸರಕಾರ ಅಲ್ಪಸಂಖ್ಯಾತರಿಗೆ ಮತ್ತು ದಲಿತ ವಿಭಾಗಗಳಿಗೆ ಸಾಮಾಜಿಕ ನ್ಯಾಯ ಒದಗಿಸುವ ತನ್ನ ವಚನವನ್ನು ಈಡೇರಿಸಬೇಕು.

‘ಮಹಿಳಾ ಮೀಸಲಾತಿ’ ವಂಚನೆ

ಬಿಜೆಪಿ ತನ್ನ ಪಕ್ಷದ ಸಮಿತಿಗಳಲ್ಲಿ ಮಹಿಳೆಯರಿಗೆ 33 ಶೇಕಡಾ ಸ್ಥಾನಗಳನ್ನು ಕೊಡುವುದಾಗಿ ಪ್ರಕಟಿಸಿದೆ. ಆದರೆ ಇದು ಶಾಸನ ಸಭೆಗಳಲ್ಲಿ ಮತ್ತು ಸಂಸತ್ತಿನಲ್ಲಿ ಮಹಿಳೆಯರಿಗೆ ಮೂರನೇ ಒಂದು ಮೀಸಲಾತಿ ಕುರಿತಂತೆ ಅದರ ಬದಲಾಗುತ್ತಾ ಬಂದ ನಿಲುವುಗಳನ್ನು ಮುಚ್ಚಿಕೊಳ್ಳಲು ಎಂಬುದು ಸ್ಪಷ್ಟ. ಅದೀಗ ಪಕ್ಷಗಳ ಅಭ್ಯರ್ಥಿಗಳ ಪಟ್ಟಿಯಲ್ಲಿ ಮಹಿಳೆಯರಿಗೆ ಮೂರನೇ ಒಂದು ಕೋಟಾ ಇರಬೇಕು ಎನ್ನುತ್ತಿದೆ. ಆದರೆ ತನ್ನ ಪಕ್ಷದ ಕೇಂದ್ರ ಪದಾಧಿಕಾರಿಗಳು, ಸಂಸದೀಯ ಮಂಡಳಿಯನ್ನು ಈ ಕೋಟಾದಿಂದ ಅದು ಹೊರತು ಪಡಿಸಿದೆ!

ಇದು ಅಡ್ವಾಣಿಯವರನ್ನು ಪಕ್ಷದ ಪ್ರಧಾನ ಮಂತ್ರಿ ಅಭ್ಯರ್ಥಿ ಎಂದು ಸಾರಿದ ಮೇಲೆ ನಡೆದಿರುವ ಅದರ ಮೊದಲ ರಾಷ್ಟ್ರೀಯ ಮಂಡಳಿ ಸಭೆಯಾಗಿತ್ತು. ಭಾರತದ ಭವಿಷ್ಯದ ಪ್ರಧಾನ ಮಂತ್ರಿ ಅಡ್ವಾಣಿಯವರು ಎಂದು ಸಮರ್ಥಿಸಿಕೊಳ್ಳಲು ದೇಶದ ರಾಜಕೀಯ ಆಗಸದಲ್ಲಿ ಅವರು ಒಂದು ವಿಶೇಷ ಸ್ಥಾನ ಪಡೆದವರು ಎಂದು ಚಿತ್ರಿಸಲು ರಾಜನಾಥ ಸಿಂಗ್ ಯತ್ನಿಸಿದರು. ಆದರೆ ವಾಸ್ತವತೆ ಸಂಪೂರ್ಣ ಭಿನ್ನವಾಗಿದೆ. ಬಾಬ್ರಿ ಮಸೀದಿ ಧ್ವಂಸದ ಮೊಕದ್ದಮೆಯಲ್ಲಿ ಒಬ್ಬ ಆಪಾದಿತ, ಅಲ್ಪಸಂಖ್ಯಾತರನ್ನು ಸದಾ ದೂರುವ ಅಡ್ವಾಣಿಯವರನ್ನು ಹಿಂದುತ್ವವನ್ನು ಒಪ್ಪದ ಪ್ರಾದೇಶಿಕ ಪಕ್ಷಗಳಿರುವ ಒಂದು ವಿಶಾಲ ಮೈತ್ರಿಕೂಟದ ನೇತಾರನೆಂದು ಒಪ್ಪಿಸುವುದು ಕಷ್ಟದ ಕೆಲಸ ಎಂದು ಅವರಿಗೂ ಗೊತ್ತಿದೆ. ಇನ್ನೂ ಹೆಚ್ಚು ಮಿತ್ರರನ್ನು ಗಳಿಸಿಕೊಳ್ಳದೆ ಅಧಿಕಾರ ಗಿಟ್ಟಿಸುವ ಸಾಧ್ಯತೆಯಿಲ್ಲ ಎಂಬುದೂ ಬಿಜೆಪಿಗೆ ಗೊತ್ತು. ಹೀಗಿರುವಾಗ ಈ ಪ್ರಕಟನೆ ಇವರ ಮೈತ್ರಿಕೂಟವನ್ನು ವಿಸ್ತರಿಸುವಲ್ಲಿ ಒಂದು ಅಡ್ಡಿಯಾಗಿ ಪರಿಣಮಿಸಬಹುದು ಎಂಬ ಸಂದೇಹ ಅವರಿಗೂ ಇಲ್ಲದಿಲ್ಲ.

ಈ ಸಭೆಯಲ್ಲಿ ಅಡ್ವಾಣಿಯವರು ಸಿಪಿಐ(ಎಂ) ಮತ್ತು ಎಡಪಕ್ಷಗಳ ಮೇಲೆ ವಿಷಕಾರಿದ್ದಾರೆ, ಭಾರತದ ರಾಜಕಾರಣ ‘ಕ್ರಿಮಿನಲೀಕರಣ’ ಹೊಂದಿದೆಯಂತೆ. ಈಗ ಅದರ ಅರ್ಥವೇನೋ ಅವರಿಗೇ ಗೊತ್ತು. ಆದರೆ ಅಮೆರಿಕಾದ ಬಗ್ಗೆ ಭಕ್ತಿ ಮತ್ತು ಇಸ್ರೇಲ್ ಬಗ್ಗೆ ಪ್ರೀತಿಯಿಂದ ಕುರುಡಾದ ವ್ಯಕ್ತಿ ಮಾತ್ರವೇ ಹೀಗೆ ಹೇಳಲು ಸಾಧ್ಯ ಎಂಬುದಂತೂ ನಿಜ. ಎಷ್ಟೆಂದರೂ ಅವರು ಕುಖ್ಯಾತ ಸಿಐಎ ನ ಮುಖ್ಯಾಲಯಕ್ಕೆ ಭೇಟಿ ನೀಡಿದ ಏಕೈಕ ಗೃಹ ಮಂತ್ರಿ ಎಂಬ ‘ಹೆಗ್ಗಳಿಕೆ’ ಹೊಂದಿದವರು ತಾನೇ? ಎಡಪಕ್ಷಗಳ ಬಗ್ಗೆ ಅವರ ಕೋಪವೂ ಅರ್ಥವಾಗುವಂತದ್ದೇ. ಬಿಜೆಪಿ ಸಂಸತ್ತಿನಲ್ಲಿ ಅಧಿಕೃತ ವಿರೋಧ ಪಕ್ಷ ಎಂದೆನಿಸಿಕೊಂಡರೂ ಯುಪಿಎ 2004ರಲ್ಲಿ ಅಧಿಕಾರಕ್ಕೆ ಬಂದಂದಿನಿಂದ ಸತತವಾಗಿ ಜನರ ಪ್ರಶ್ನೆಗಳನ್ನು ಎತ್ತುತ್ತಾ ಬಂದಿರುವುದು, ನವ-ಉದಾರವಾದಿ ನೀತಿಗಳನ್ನು ವಿರೋಧಿಸುತ್ತಿರುವುದು, ರಾಷ್ಟ್ರೀಯ ಸಾರ್ವಭೌಮತೆಯನ್ನು ರಕ್ಷಿಸುತ್ತಿರುವುದು ಹಾಗೂ ಸ್ವತಂತ್ರ ವಿದೇಶಾಂಗ ನೀತಿಗಾಗಿ ಒತ್ತಾಯಿಸುತ್ತಿರುವುದು ಎಡಪಕ್ಷಗಳು. ಬಿಜೆಪಿಯ ಕೋಮುವಾದಿ ರಾಜಕೀಯವನ್ನು ಎಡಪಕ್ಷಗಳು ಎಡೆಬಿಡದೆ ಬಯಲಿಗೆಳೆಯುತ್ತಿರುವುದು ಕೋಮುವಾದಿ ಅಜೆಂಡಾವನ್ನು ಪುನರುಜ್ಜೀವನಗೊಳಿಸುವ ಅದರ ರಾಜಕೀಯ ಆಟಕ್ಕೊಂದು ದೊಡ್ಡ ಅಡ್ಡಿ.

ಬೊಗಳೆ

ಮುಂದಿನ ಲೋಕಸಭಾ ಚುನಾವಣೆಗಳಲ್ಲಿ ತಾನು ಅಧಿಕಾರಕ್ಕೆ ಮರಳುತ್ತೇನೆ ಎಂದು ಬಿಂಬಿಸಲು ಬಿಜೆಪಿ ಎಷ್ಟೇ ಪ್ರಯತ್ನ ಪಟ್ಟರೂ ಬಹಳ ಮಂದಿಯನ್ನು ನಂಬಿಸಲು ಅದಕ್ಕೆ ಆಗುತ್ತಿಲ್ಲ. ಅದೇನೇ ಹೇಳಿದರೂ ಕಳೆದ ನಾಲ್ಕು ವರ್ಷಗಳಲ್ಲಿ ಬಲ ಕಳಕೊಂಡಿರುವುದು ಎನ್‌ಡಿಎ ಹೊರತು ಯುಪಿಎ ಅಲ್ಲ ಎಂಬುದೂ ವಾಸ್ತವ. ಎಡಪಕ್ಷಗಳು ಆರಂಭದಿಂದಲೂ ಯುಪಿಎ ಮೈತ್ರಿಕೂಟದ ಭಾಗವಾಗಿರಲಿಲ್ಲ. ಜಾತ್ಯಾತೀತ ಶಕ್ತಿಗಳನ್ನು ಬಲಗೊಳಿಸುವುದು, ಜನಗಳ ವಾಸ್ತವಿಕ ಪ್ರಶ್ನೆಗಳನ್ನು ಎತ್ತಿಕೊಳ್ಳುವುದು ತಮ್ಮ ಅಜೆಂಡಾ ಎಂದು ಅವರು ಹೇಳುತ್ತಲೇ ಬಂದಿದ್ದಾರೆ. ಆದ್ದರಿಂದ ಗುಜರಾತ್ ಮತ್ತು ಹಿಮಾಚಲ ಪ್ರದೇಶದಲ್ಲಿ ಚುಣಾವಣಾ ಗೆಲುವುಗಳ ನಂತರ ಬಿಜೆಪಿಯ ಅಬ್ಬರ ಕೇವಲ ಬೊಗಳೆ, ವಾಸ್ತವತೆಯನ್ನು ಬೇಗನೇ ಅದು ಒಪ್ಪಿಕೊಳ್ಳಬೇಕಾಗುತ್ತದೆ.

ಬಿಜೆಪಿ ಸಂಸತ್ತಿನಲ್ಲಿ ಅಧಿಕೃತ ವಿರೋಧ ಪಕ್ಷ ಎಂದೆನಿಸಿಕೊಂಡರೂ ಯುಪಿಎ 2004ರಲ್ಲಿ ಅಧಿಕಾರಕ್ಕೆ ಬಂದಂದಿನಿಂದ ಸತತವಾಗಿ ಜನರ ಪ್ರಶ್ನೆಗಳನ್ನು ಎತ್ತುತ್ತಾ ಬಂದಿರುವುದು, ನವ-ಉದಾರವಾದಿ ನೀತಿಗಳನ್ನು ವಿರೋಧಿಸುತ್ತಿರುವುದು, ರಾಷ್ಟ್ರೀಯ ಸಾರ್ವಭೌಮತೆಯನ್ನು ರಕ್ಷಿಸುತ್ತಿರುವುದು ಹಾಗೂ ಸ್ವತಂತ್ರ ವಿದೇಶಾಂಗ ನೀತಿಗಾಗಿ ಒತ್ತಾಯಿಸುತ್ತಿರುವುದು ಎಡಪಕ್ಷಗಳು.

ಎನ್‌ಡಿಎ ಯ ‘ಹೊಳೆಯುವ ಭಾರತ’ ಪ್ರಚಾರ ಎಷ್ಟು ಹಾಸ್ಯಾಸ್ಪದ ಎಂದು ಜನರು ಕೊಟ್ಟ ಉತ್ತರವನ್ನು ಅವರು ಮರೆಯುವುದು ಅವರಿಗೆ ಅನುಕೂಲಕರವಾಗಿರಬಹುದು, ಜನರು ಮರೆಯುತ್ತಾರೆಯೇ?

ನನ್ನ ಪಕ್ಷ

ನಾನೊಂದು ಪಕ್ಷವನು ಕಟ್ಟಲಿಹೆ ಮುಂದು
ಅದಕಾಗಿ ಚಿಹ್ನೆಯನು ಹುಡುಕುತಿಹೆ ಇಂದು
ನೆತ್ತರಿನ ಕಲೆಯಿರುವ ತ್ರಿಶೂಲವನ್ನೆ ಮಾಡಿದರೆ
ಹೇಗಯ್ಯ ಪಕ್ಷಕ್ಕೆ ಚಿನ್ಹೆ?

– ಎಡಂಬಾರಿ

ಅತ್ತ ಜಗಮಗ - ಇತ್ತ ಧಗಧಗ ಇದು ನಮ್ಮ ಬೆಂಗಳೂರು

ಬೆಂಗಳೂರು ನಗರ ಒಂದು ಬೃಹತ್ ಮಹಾನಗರವಾಗಿ ಬೆಳೆಯುತ್ತಿರುವ ವೇಗ ಮತ್ತು ರೀತಿ ಅಬ್ಬಬ್ಬಾ ಎನ್ನುವಂತಿದೆ. ಇಲ್ಲಿಗೆ ಬರುತ್ತಿರುವ ಬಹುರಾಷ್ಟ್ರೀಯ ಕಂಪನಿಗಳು, ವಿದೇಶಿ ಬಂಡವಾಳ ಮತ್ತು ಅದರ ಪರಿಣಾಮಗಳು ಮಾತ್ರ ಒಂದು ವಿಭಾಗಕ್ಕೆ ಆಹಾ ಹಾ.... ಎನ್ನುವಂತಿದ್ದರೆ ಮತ್ತೊಂದು ವಿಭಾಗಕ್ಕೆ ಅಯ್ಯಪ್ಪ, ಅಯ್ಯಮ್ಮಾ ಅನ್ನುವಂತಿದೆ.

ಕೆ.ಎನ್.ಉಮೇಶ್

"ಒಂದದೂರು ಬೆಂಗಳೂರು ಆನಂದದ ತವರೂರು" ಎಂಬ ಹಳೆಯಕನ್ನಡ ಚಲನಚಿತ್ರಗೀತೆ ಇಂದಿಗೂ ಕೆಲವರಿಗೆ ನೆನಪಿರಬಹುದು. ಈ ಹಾಡು ರಾಜ್ಯದ ಜನತೆಗೆ ಬೆಂಗಳೂರಿನ ಜನತೆಗೆ ಏನರ್ಥ ತರುತ್ತದೋ? ಆದರೆ ದೂರದ ಅಮೇರಿಕ ಹಾಗೂ ಯುರೋಪಿನ ರಾಷ್ಟ್ರಗಳಿಗಂತೂ ನಿಜವಾಗಿದೆ. ಅಂದಚೆಂದ ಎಲ್ಲವನ್ನೂ ನೀಡುತ್ತಿವೆ. ಅಮೇರಿಕಾದ ನಗರದಲ್ಲಿರುವ ಆಸ್ಪತ್ರೆ, ಹೋಟೆಲ್, ಸಾಮಗ್ರಿ ಮುಂತಾದ ಅನೇಕ ವಿಚಾರಗಳನ್ನು ಅಲ್ಲಿಯ ಜನ ಇಲ್ಲಿಗೆ ರಿಂಗಾಯಿಸಿ ಮಾಹಿತಿ ಪಡೆಯಬೇಕಿದೆ. ಇದೇ ಪರಿಸ್ಥಿತಿ ಯುರೋಪಿನ ಅನೇಕ ಶ್ರೀಮಂತ ದೇಶಗಳದ್ದು! ಇದರ ಪರಿಣಾಮವಾಗಿ ಬೆಂಗಳೂರಿನಲ್ಲಿ ಅಹೋರಾತ್ರಿ ಎನ್ನದೆ ಅಮೇರಿಕಾದ ಹಾಗೂ ಯುರೋಪಿನ ರಾಷ್ಟ್ರಗಳ ಪ್ರಜೆಗಳಿಗೆ ಸೇವೆ ಮಾಡಲೆಂದೇ ಲಕ್ಷಾಂತರ ಯುವಕ ಯುವತಿಯರು ದುಡಿಯುತ್ತಿದ್ದಾರೆ. ಇವರ ದುಡಿಮೆಗೆ ಅನುವುಗೊಳಿಸಲೆಂದೇ ಸಾವಿರಾರು ವಾಹನಗಳು ಹಾಗೂ ಚಾಲಕರು ಎಲ್ಲೆಂದರಲ್ಲಿ ಆ ಹೊತ್ತು ಈ ಹೊತ್ತು ಎನ್ನದೇ ದೌಡಾಯಿಸುತ್ತಿರುತ್ತಾರೆ. 5 ವರ್ಷದ ಹಿಂದೆ ರಾತ್ರಿ 8 ಗಂಟೆ ಆದರೆ ಬಣಗುಡುತ್ತಿದ್ದ ರಿಂಗ್‌ರಸ್ತೆಗಳಲ್ಲಿ ರಾತ್ರಿಯಿಡೀ ವಾಹನಗಳ ಓಡಾಟ ನೋಡಬಹುದು. ಇದುವೆ ಮಾಹಿತಿ ತಂತ್ರಜ್ಞಾನದ ಮಹಿಮೆ. ಪರಿಣಾಮವಾಗಿ ಸಿಲಿಕಾನ್ ಸಿಟಿ ಖ್ಯಾತಿಗೆ ಪಾತ್ರವಾಗಿರುವ ಉದ್ಯಾನನಗರಿ ಬೆಂಗಳೂರಿನಲ್ಲಿ ಐಟಿ, ಬಿಟಿ, ಐಟಿಇಎಸ್ ಮುಂತಾದ ಉದ್ಯಮಿಗಳಲ್ಲಿ 5 ಲಕ್ಷಕ್ಕೂ ಹೆಚ್ಚು ಮಂದಿ ಬೌದ್ಧಿಕ ಉದ್ಯೋಗದಲ್ಲಿ ದುಡಿಯುತ್ತಿದ್ದಾರೆ. ಕ್ವಾರ್ಟರ್‌ಗೆ ಸಾವಿರ ಕೋಟಿ ಇವರ ದುಡಿಮೆ ಮಾರುವ ಕಾಯಕದಲ್ಲಿ ತೊಡಗಿರುವ ದಣಿಗಳಂತೂ ಧಿಡೀರ್ ಶತಕೋಟ್ಯಾಧಿಪತಿಗಳಾಗಿದ್ದಾರೆ. 3 ತಿಂಗಳಿಗೊಮ್ಮೆ ಇವರ ಕ್ವಾರ್ಟರ್ (ಬ್ರಾಂದಿ ವಿಸ್ಕಿ ಅಲ್ಲ ತ್ರೈಮಾಸಿಕ ಆದಾಯ) ಹತ್ತಿರ ಹತ್ತಿರ ಸಾವಿರ ಕೋಟಿ.

ಇತ್ತೀಚೆಗೆ ನಮ್ಮ ದೇಶದ ರೂಪಾಯಿಗೊಂದಿಷ್ಟು ಬೆಲೆ ಬಂದದ್ದರಿಂದ ಅಂದರೆ ಅಮೇರಿಕಾ ಡಾಲರ್ ಕುಸಿದಿದ್ದರಿಂದ ಇವರ ತ್ರೈಮಾಸಿಕ ಆದಾಯದ ಪ್ರಮಾಣದಲ್ಲಿ ಕಡಿಮೆಯಾಗುತ್ತಿದೆಯಂತೆ. ಈ ಕಂಪನಿಗಳ ನೆಲೆಗಾಗಿ ಬೆಂಗಳೂರಿನ ಸುತ್ತಮುತ್ತೆಲ್ಲ ಬಹುಮಹಡಿಕಟ್ಟಡಗಳು ಥಳಕುಬಳಕು ಗಾಜಿನ ಬಿಲ್ಡಿಂಗ್‌ಗಳು ಎದ್ದಿವೆ. ಅಂತೆಯೇ ವಸತಿ ಸಮುಚ್ಚಯಗಳು ಅಪಾರ್ಟ್‌ಮೆಂಟ್‌ಗಳು ಅವರ ಗಳಿಕೆಯ ಕಬಳಿಸುವ ಮಾಲ್‌ಗಳು, ಮಲ್ಟಿಪ್ಲೆಕ್ಸ್‌ಗಳು, ಎದ್ವಾತದ್ವಾ ಬೆಳೆದಿವೆ. ಮನೆ ಬಾಡಿಗೆಗಳು ಗಗನಕ್ಕೇರುತ್ತಿವೆ. ಮುಟ್ಟಿದರೆ ಸಾಕು ಮುಟ್ಟಿದವರೆ



ಮುನಿಯುವಂತೆ ಬೆಲೆಗಳು ಏರುತ್ತಿವೆ. ಒಟ್ಟಾರೆ ಮಾಹಿತಿ ತಂತ್ರಜ್ಞಾನ ಕ್ರಾಂತಿಯು ಬೆಂಗಳೂರಿನ ಚಿತ್ರವನ್ನಂತು ಬದಲಿಸಿದೆ. ಬೆಂಗಳೂರನ್ನು ಬೃಹತ್ ಬೆಂಗಳೂರಾಗಿ ಮಾರ್ಪಡಿಸುತ್ತಿವೆ.

ಎಂ.ಎನ್.ಸಿ.ಗಳ ಸಂಶೋಧನಾ ಕೇಂದ್ರವಾಗಿ...

ವಿಜ್ಞಾನ ತಂತ್ರಜ್ಞಾನ ಸಂಶೋಧನೆ ಮುಂತಾದ ಬೌದ್ಧಿಕ ಕಸರತ್ತಿನ ತಾಣವಾಗಿದ್ದ ಬೆಂಗಳೂರು ಇದೀಗ ಇದೇ ರಂಗದಲ್ಲಿ ಖಾಸಗಿ ಬಹುರಾಷ್ಟ್ರೀಯ ಬಂಡವಾಳ ಆಧಾರಿತ ಸಂಶೋಧನ ಕೇಂದ್ರವಾಗಿ ಮಾರ್ಪಡುತ್ತಿದೆ. ಕೇಂದ್ರ ಸರ್ಕಾರದ ಪ್ರತಿಷ್ಠಿತ ಭಾರತೀಯ ವಿಜ್ಞಾನ ಸಂಸ್ಥೆ, (ಐಐಎಸ್‌ಸಿ) ಐಎಂ ನಗರವಾಗಿದ್ದ ಬೆಂಗಳೂರಿನಲ್ಲಿ ಇತ್ತೀಚೆಗೆ ಸರ್ಕಾರಿ ಪೋಷಿತ ನ್ಯಾನೋ ತಂತ್ರಜ್ಞಾನ ಪಾರ್ಕ್ ಹಾಗೂ ನಾಲೆಡ್ಜ್ ಪಾರ್ಕ್ ಪ್ರಾರಂಭವಾಗುತ್ತಿವೆ. ಆದರೆ ಈಗಾಗಲೆ ಜನರಲ್ ಎಲೆಕ್ಟ್ರಿಕಲ್ (GE)ನ ವಿಶ್ವದ ಎರಡನೆ ಅತಿದೊಡ್ಡ ಸಂಶೋಧನಾ ಕೇಂದ್ರ ಜೆಎಫ್‌ಡಬ್ಲ್ಯು ಟೆಕ್ನಾಲಜಿ ರಿಸರ್ಚ್ ಸೆಂಟರ್ ನಗರದ ವೈಟ್‌ಫೀಲ್ಡ್‌ನಲ್ಲಿ 1600 ಸಂಶೋಧಕರನ್ನೊಳಗೊಂಡು ಸಂಶೋಧನೆಯನ್ನು ನಡೆಸುತ್ತಿದೆ.

ಹೈಟೆಕ್ ಆರೋಗ್ಯ ನಗರಿಯಾಗಿ...!

ಬಹುರಾಷ್ಟ್ರೀಯ ಜೀವವಿಮಾ ಕಂಪನಿಗಳು ಅಮೇರಿಕಾ ಯುರೋಪ್ ದೇಶಗಳ ತನ್ನ ಪಾಲಿಸಿದಾರರ ಆರೋಗ್ಯ ತಪಾಸಣೆಗಾಗಿ ಬೆಂಗಳೂರನ್ನು ಆಶ್ರಯಿಸಲು ಆರಂಭಿಸಿ ಬಹುರಾಷ್ಟ್ರೀಯ ಬಂಡವಾಳದ ಹೈಟೆಕ್ ಆಸ್ಪತ್ರೆಗಳು ತಲೆಯೆತ್ತಿವೆ. ಬೆಂಗಳೂರನ್ನು ಆರೋಗ್ಯ ನಗರಿಯಾಗಿ (health city) ಆರೋಗ್ಯ ಪ್ರವಾಸೋದ್ಯಮವನ್ನು ಉತ್ತೇಜಿಸಲಾಗಿದೆ (health toursim) ಎಂಬ ಪ್ರವೃತ್ತಿಗಳು ಕಾಣಲಾರಂಭಿಸುತ್ತಿವೆ.

2004 ಏಪ್ರಿಲ್‌ನಿಂದ 2007 ಆಗಸ್ಟ್ ನಡುವೆ ಬೆಂಗಳೂರಿಗೆ 2026 ದಶಲಕ್ಷ ಡಾಲರ್ (ರೂ 8104 ಕೋಟಿ) ವಿದೇಶಿ ನೇರ ಬಂಡವಾಳ ಹರಿದುಬರುವ ಮೂಲಕ ನವದೆಹಲಿ ಹಾಗೂ ಮುಂಬೈ ನಂತರದ ಸ್ಥಾನವನ್ನು ಪಡೆದುಕೊಂಡಿದೆ. ವಿಶ್ವದಲ್ಲೇ ಟೋಕಿಯೋ ಹಾಗೂ ಚಿಕಾಗೋ ನಂತರ ಅತಿ ಹೆಚ್ಚು ಆಫೀಸ್ ಸ್ಪೇಸ್ (ಕಛೇರಿ ಜಾಗ)ದ ಬೇಡಿಕೆಯುಳ್ಳ ನಗರವಾಗಿ ಬೆಳೆಯುತ್ತಿದೆ. 2004 ಮತ್ತು 2005ರಲ್ಲಿ 110 ಹೊಸ ವಿದೇಶಿ ಮಾಲಿಕತ್ವದ ಸಂಸ್ಥೆಗಳು ಬೆಂಗಳೂರಿನಲ್ಲಿ ಸ್ಥಾಪನೆಯಾಗಿವೆ. 682 ಅಮೇರಿಕಾ ಹಾಗೂ ಯುರೋಪ್ ಮೂಲದ ಬಹುರಾಷ್ಟ್ರೀಯ ಕಂಪನಿಗಳು 66 ಫಾರ್ಚೂನ್ 500 ಕಂಪನಿಗಳು 1685 ಐಟಿ, ಐಟಿಇಎಸ್ ಹಾಗೂ 131 ಜೈವಿಕ ತಂತ್ರಜ್ಞಾನ ಕಂಪನಿಗಳು ಬೆಂಗಳೂರಿನ ಮಾಹಿತಿ ತಂತ್ರಜ್ಞಾನ ಕಂಪನಿಗಳ ಭಾಗವಾಗಿವೆ. 2005 ಮತ್ತು 2006ರಲ್ಲಿ ರಾಷ್ಟ್ರದ 54 ಸಾವಿರ ಕೋಟಿ ರೂಪಾಯಿಗಳ ಮಾಹಿತಿ ತಂತ್ರಜ್ಞಾನ ಮತ್ತು ಸಾಫ್ಟ್‌ವೇರ್ ರಫ್ತು ಮಾರುಕಟ್ಟೆಗೆ ಕರ್ನಾಟಕದ ಕೊಡುಗೆಯಾದ ರೂ.34,600 ಕೋಟಿ ರೂಪಾಯಿ ಬೆಂಗಳೂರಿನದೇ.



ಬೆಂಗಳೂರಿನ ನೆಲೆಗಳನ್ನು ಅರಸಿ ಬರುತ್ತಿರುವ ಬಹುರಾಷ್ಟ್ರೀಯ ಬಂಡವಾಳದ ಸತ್ಕಾರಕ್ಕಾಗಿ ನಗರ ಮತ್ತು ಗ್ರಾಮಾಂತರ ಹಾಗೂ ರಾಮನಗರ ಜಿಲ್ಲೆಗಳ ವ್ಯಾಪ್ತಿಯಲ್ಲಿ 29 ಎಸ್‌ಇಝೆಡ್‌ಗಳಿಗೆ ಅನುಮತಿಸ ಲಾಗಿದ್ದು 16ಕ್ಕೆ ಸರ್ಕಾರದ ತಾತ್ವಿಕ ಮಾನ್ಯತೆಯು ಲಭಿಸಿದೆ. ಅದಕ್ಕಾಗಿ ಭೂಮಿ ವಶಪಡಿಸಿ ಕೊಳ್ಳುವ ಭರಾಟೆಯು ವ್ಯಾಪಕವಾಗಿ ಸಾಗಿದೆ. ಈ ಬಹುರಾಷ್ಟ್ರೀಯ ಬಂಡವಾಳದ ಸ್ಥಳೀಯ ನಿರ್ವಹಣೆಗೆ ಅಗತ್ಯವಿರುವ ಮಾನವ ಸಂಪನ್ಮೂಲವನ್ನು ರೂಪಿಸಲೆಂದೇ ನಗರದ ನೂರಾರು ಇಂಜಿನಿಯರಿಂಗ್ ಮುಂತಾದ ಕಾಲೇಜುಗಳು ಆಡಳಿತ ನಿರ್ವಹಣಾ ಕೋರ್ಸ್‌ಗಳನ್ನು ಒಂದೇ ಕ್ಯಾಂಪಸ್‌ನಲ್ಲಿ ಎರಡೆರಡು ವಿಶ್ವ ವಿದ್ಯಾಲಯ ಕೋರ್ಸ್‌ಗಳನ್ನು ಕೈಗಾರಿಕೆಗಳಲ್ಲಿನ ಪಾಳಿ ಕೆಲಸದಂತೆ shift ಗಳಲ್ಲಿ ನಡೆಸುತ್ತಿವೆ. ಈ ಕ್ಯಾಂಪಸ್‌ಗಳಲ್ಲಿ ಪಂಚತಾರಾ ಹೋಟೆಲ್‌ಗಳನ್ನು ಮೀರಿಸುವಂತಹ ಹಾಸ್ಟೆಲ್‌ಗಳು ಕಾಲೇಜು ಕೊಠಡಿಗಳು ನಿರ್ಮಾಣಗೊಂಡಿವೆ.


ಬೆಂಗಳೂರು ನ್ಯಾನೋ ಸಂಸ್ಥೆ

ಹಳೇ ಆರ್ಥಿಕತೆ....ಸ್ವಾವಲಂಬನೆ

ಸ್ವತಂತ್ರ ಭಾರತದ ಸ್ವಾವಲಂಬಿ ಆರ್ಥಿಕ ಅಭಿವೃದ್ಧಿಗೆ ಬುನಾದಿ ಒದಗಿಸುವಂತಹ ನೆಲೆಯನ್ನು ನೀಡಿದ್ದ ಸಾರ್ವಜನಿಕ ಉದ್ದಿಮೆಗಳ ಬೀಡಾಗಿದ್ದ ಬೆಂಗಳೂರು ಹಾಗೂ ಜವಳಿ ಕೈಗಾರಿಕೆಗಳ ನಗರವಾಗಿದ್ದ ಬೆಂಗಳೂರಿನ ಆ ಹಳೆಯ ಆರ್ಥಿಕತೆಯ ಬುನಾದಿಯ ಮೇಲೆ ಹೊಸ ಆರ್ಥಿಕತೆಯ ಐಟಿ, ಬಿಟಿಯ ಬೆಳವಣಿಗೆಗಳು ಮುಂದೆ ಆರೋಗ್ಯ ಪ್ರವಾಸೋದ್ಯಮದ ಹಾಗೂ ನ್ಯಾನೋ ತಂತ್ರಜ್ಞಾನದ ನಗರವಾಗಲಿದೆ ಎಂಬ ಭರವಸೆಯು ಸೂಸುತ್ತಿದೆ. ಬೆಂಗಳೂರು ಮಹಾನಗರವು 47.2 ಶತಕೋಟಿ ಅಮೇರಿಕನ್ ಡಾಲರ್ ಅಂದರೆ 1.75 ಲಕ್ಷ ಕೋಟಿ ರೂಪಾಯಿಗಳ ಆರ್ಥಿಕತೆ ಹೊಂದಿದೆ. ಭಾರತದ 4ನೇ ದೊಡ್ಡದಾದ ಹಾಗೂ ವೇಗವಾಗಿ ಬೆಳೆಯುತ್ತಿರುವ ಮಾರುಕಟ್ಟೆಯಾಗಿದೆ. ರಾಜ್ಯದ ಕಾರ್ಪೊರೇಟ್ ತೆರಿಗೆಯ ಶೇ.75, ವಾಣಿಜ್ಯ ತೆರಿಗೆಯ ಶೇ.80 ಐಷಾರಾಮಿ ತೆರಿಗೆಯ ಶೇ.90ರಷ್ಟನ್ನು ಬೆಂಗಳೂರು ಮಹಾನಗರವು ನೀಡುತ್ತಿದೆ. ರಾಜ್ಯದ ನೊಂದಣಿ ವರಮಾನಕ್ಕೆ ಶೇ.70ರಷ್ಟನ್ನು ಕೊಡುಗೆಯಾಗಿ ನೀಡುತ್ತಿರುವ ಬೆಂಗಳೂರು ನಗರದ ಕೊಡುಗೆ ಪ್ರಸಕ್ತ ಸಾಲಿನಲ್ಲಿ ನಿರೀಕ್ಷಿತ ರೀತಿಯಲ್ಲಿ ಇಲ್ಲ. ಈ ಬೆಳವಣಿಗೆ ಹೀಗೆ ಮುಂದುವರೆದಲ್ಲಿ 2008 ಏಪ್ರಿಲ್ ವೇಳೆಗೆ 1.5 ಲಕ್ಷ ಅಪಾರ್ಟ್‌ಮೆಂಟ್‌ಗಳು ಕೊಳ್ಳುವವರಿಲ್ಲದೆ ಖಾಲಿ ಉಳಿಯುವ ಸಾಧ್ಯತೆಯಿದೆ ಎಂದು ಅಂದಾಜಿಸಲಾಗಿದೆ. ಒಟ್ಟಾರೆ ಬೆಂಗಳೂರು ಬಹುರಾಷ್ಟ್ರೀಯ ಬಂಡವಾಳದ ಕೇಂದ್ರವಾಗಲು ದಾಪುಗಾಲಿಡುತ್ತಿದೆ.



ಜಗಮಗ ಜಾಹೀರಾತು, ಧಗಧಗ ಬದುಕು

ಗರ್ಭದಲ್ಲೇ ಅಡಗಿದೆ ಬಿಕ್ಕಟ್ಟು

ಈ ಬೆಳವಣಿಗೆಗಳು ಯೋಜನಾಬದ್ಧವಾಗಿರದ ಕಾರಣ ಯೋಜನಾ ರಹಿತವಾಗಿ ಯದ್ವಾತದ್ವಾವಾಗಿ ಉದಾರೀಕರಣದ ಭರಾಟೆಯಲ್ಲಿ ನಡೆದ ಪರಿಣಾಮ ಅಗತ್ಯ ಮೂಲ ಸೌಕರ್ಯವನ್ನೊದಗಿಸಲಾಗದೆ ಬೆಳವಣಿಗೆಗಿದ್ದ ಅಪಾರ ಅವಕಾಶಗಳಿಗೆ ಮಿತಿ ಹಾಕಿಕೊಳ್ಳುವಂತೆ ಮೂಲಭೂತ ಸೌಲಭ್ಯಗಳ ಕೊರತೆಯ ಬಿಕ್ಕಟ್ಟನ್ನು ನಿರ್ಮಿಸಿಕೊಂಡಿದೆ. 1980ರಲ್ಲಿ 202 ಚದರ ಕಿ.ಮೀ ವ್ಯಾಪ್ತಿ ಹೊಂದಿದ್ದ ಬೆಂಗಳೂರು ಪ್ರಸ್ತುತ ಮಹಾನಗರವಾಗಿ 750 ಚದರ ಕಿ.ಮೀ ವ್ಯಾಪ್ತಿಗೆ ವಿಸ್ತರಣೆಗೊಂಡಿದೆ. ಬೆಂಗಳೂರು ಮಹಾನಗರ ಪಾಲಿಕೆಯು ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯಾಗಿ ಮಾರ್ಪಟ್ಟಿದೆ.

ಒಳವರ್ತುಲ ರಸ್ತೆಯೊಂದಿಗೆ ಹೊರ ವರ್ತುಲ ರಸ್ತೆ ಹೊಂದಿದ್ದು ಬೆಂಗಳೂರು ನಗರವು ಪೆರಿಫೆರಲ್ ವರ್ತುಲ ರಸ್ತೆ (ಪಿಆರ್‌ಆರ್) ಜೊತೆಯಲ್ಲೆ ಇಂಟರ್ ಮೀಡಿಯೇಟ್ ವರ್ತುಲ ರಸ್ತೆ (ಐಆರ್‌ಆರ್) ಹಾಗೂ ಸೆಟಲೈಟ್ ಟೌನ್‌ಷಿಪ್ ವರ್ತುಲರಸ್ತೆ (ಎಸ್‌ಟಿಆರ್‌ಆರ್)ಗಳನ್ನು ಒಳಗೊಳ್ಳಲು ಮುಂದಾಗುತ್ತಿದೆ. ಇದರೊಟ್ಟಿಗೆ ಬೆಂಗಳೂರು ಮಹಾನಗರ ಪ್ರದೇಶ ಅಭಿವೃದ್ಧಿ ಪ್ರಾಧಿಕಾರ (ಬಿಎಂಆರ್‌ಡಿಎ) ಯೋಜಿತ ಸೆಟಲೈಟ್ ಟೌನ್‌ಷಿಪ್‌ಗಳು, ಮೆಟ್ರೊ, ಮಾನೋ ಹಾಗೂ ಕಮ್ಯುಟರ್ ರೈಲ್ವೆ ವ್ಯವಸ್ಥೆ (ಸಿಆರ್‌ಎಸ್) ಮುಂತಾದ ಸಾರಿಗೆ ಸಂಪರ್ಕದೊಂದಿಗೆ ಫ್ಲೈ ಓವರ್‌ಗಳು ಅಂಡರ್ ಪಾಸ್‌ಗಳನ್ನು ನಿರ್ಮಿಸಿ ಬಿಕ್ಕಟ್ಟಿನಿಂದ ಹೊರಬರುವ ಯತ್ನ ನಡೆದಿವೆ. ಹಳೆಯ ಆರ್ಥಿಕತೆಯ ಸಾರ್ವಜನಿಕ ಉದ್ದಿಮೆಗಳ ಟೌನ್‌ಷಿಪ್‌ಗಳು ಅನುಭವಿಸದಿದ್ದ ಸಾರಿಗೆ ದಟ್ಟಣೆ ಮಳೆ ನೀರಿನ ಹಾವಳಿಯಂತಹ ಸಮಸ್ಯೆಗಳು ಹೊಸ ಆರ್ಥಿಕತೆಯ ಪ್ರದೇಶಗಳನ್ನೇ ಕಾಡುತ್ತಿವೆ. ಈ ಮೂಲ ಪ್ರಶ್ನೆಗೆ ಉತ್ತರ ಹುಡುಕದೆ ಇಂತಹ ಮೇಲ್ನೋಟದ ಬದಲಾವಣೆಗಳಿಂದ ಬಿಕ್ಕಟ್ಟಿಗೆ ಪರಿಹಾರ ಹುಡುಕುವ ಯತ್ನ ನಡೆದಿದೆ. ಇದು ಮುಂದೆ ಬೆಂಗಳೂರಿಗೆ ಹೂಡಿಕೆಯನ್ನು ಸೀಮಿತಗೊಳಿಸಲಿದೆ. ಹಾಗಾಗಿ ಬೆಂಗಳೂರು, ಮುಂಬೈ ಕೈಗಾರಿಕಾ ಕಾರಿಡಾರ್ ಹಾಗೂ ಬೆಂಗಳೂರು ಮೈಸೂರು ಕಾರಿಡಾರ್‌ಗಳಿಗೆ ಸರ್ಕಾರಗಳು ಮುಂದಾಗಬೇಕೆಂದು ಅದಕ್ಕೆ ಬೇಕಿರುವ ಅಗತ್ಯ ತಾಲೀಮನ್ನೂ ಬಂಡವಾಳಗಾರರ ವೇದಿಕೆಗಳು ಈಗಾಗಲೇ ಪ್ರಾರಂಭಿಸಿವೆ.

ದೇವನಹಳ್ಳಿ ಅಂತರ್ರಾಷ್ಟ್ರೀಯ ವಿಮಾನ ನಿಲ್ದಾಣ

ದೇವನಹಳ್ಳಿ ಅಂತರ್ರಾಷ್ಟ್ರೀಯ ವಿಮಾನ ನಿಲ್ದಾಣ ಪ್ರಾರಂಭವಾದಲ್ಲಿ ಡಾಬಸ್ ಪೇಟೆ, ದೇವನಹಳ್ಳಿ ರಸ್ತೆ ನಿರ್ಮಾಣಗೊಳಿಸಿ ತುಮಕೂರನ್ನು ಪ್ರಧಾನ ಬಂಡವಾಳ ಹೂಡಿಕೆ ಕೇಂದ್ರವಾಗಿ ಅಂತೆಯೇ ಮಂಡ್ಯ ಮೈಸೂರನ್ನು ಅದಕ್ಕೆ ಪೂರಕವಾಗಿ ಅಣಿನೆರೆಸುವ ತಾಲೀಮು ಆರಂಭಗೊಂಡಿವೆ. ಬಂಡವಾಳವು ತನ್ನ ಗರ್ಭದಲ್ಲೇ ಹೊತ್ತು ತರುವ ಬಿಕ್ಕಟ್ಟಿನಂತೆ ಪ್ರಸ್ತುತ ಮೂಲಭೂತ ಸೌಕರ್ಯದ ಬಿಕ್ಕಟ್ಟನ್ನು ಬೆಂಗಳೂರಿಗೆ ತಂದೊದಗಿಸಿದೆ. ಇದೇ ಅದನ್ನು ಮಹಾನಗರದಿಂದ ಇತರೆ ನಗರಗಳೆಡೆಗೆ ಹೋಗುವಂತೆ ಮಾಡಿದೆ. ಇದಕ್ಕಾಗಿಯೇ ಅಂದದ ಬೆಂಗಳೂರನ್ನು 'ಮತ್ತಷ್ಟು ಅಂದ' ವಾಗಿರಿಸಲು ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ರೂಪಿತವಾಗಿದೆ.

ಬಿಕ್ಕಟ್ಟಿಗೆ ಶಾಂತಿ....ಜನರ ಮೇಲೆ ಹೊರೆ

ಮೊನ್ನೆ ಮೊನ್ನೆವರೆಗೂ 500ರಿಂದ 700 ಕೋಟಿ ಬಜೆಟ್ ಹೊಂದಿದ ಬಿಬಿಎಂಪಿ ಪ್ರಸಕ್ತ 2007-2008ರಲ್ಲಿ 3300 ಕೋಟಿ ರೂ.ಗಳ ಬಜೆಟ್ ಹೊಂದಿದೆ. ಕೇಂದ್ರ ಸರ್ಕಾರದ ಜವಹರಲಾಲ್ ನೆಹರು ಅರ್ಬನ್ ರೆನ್ಯೂವಲ್ ಮಿಷಿನ್ ಯೋಜನೆಯಡಿ (JnNURM) 2007ರಿಂದ 2012ರವರೆಗೆ 6 ವರ್ಷಗಳ ನೀತಿ ಹಾಗೂ ಬಂಡವಾಳ ಹೂಡಿಕೆ ಯೋಜನೆಯನ್ನು ರೂಪಿಸಲಾಗಿದೆ. ಈ ಯೋಜನೆ ಬಿಬಿಎಂಪಿ, ಬಿಡಿಎ, ಬಿಎಂಆರ್‌ಡಿಎ, ಬಿಡಬ್ಲುಎಸ್‌ಎಸ್‌ಬಿ ಹಾಗೂ ಬಿಎಂಟಿಸಿ ಒಳಗೊಂಡಂತೆ ಬೆಂಗಳೂರು ನಗರ ನಿರ್ವಹಣೆಯಲ್ಲಿ ಪ್ರಧಾನ ಪಾತ್ರ ವಹಿಸುವ ಎಲ್ಲಾ ಸಂಸ್ಥೆಗಳಿಗೂ ಸೇರಿ ಸಮಗ್ರವಾದ ನಗರ ಅಭಿವೃದ್ಧಿ ಯೋಜನೆಯನ್ನು ರೂಪಿಸಲಾಗಿದೆ. ಈ ಯೋಜನೆ ಅಡಿ ಹೂಡಲಾಗುವ ಬಂಡವಾಳದ ಶೇ.35ರಷ್ಟನ್ನು ಕೇಂದ್ರ ಸರ್ಕಾರ ಶೇ.15ರಷ್ಟನ್ನು ರಾಜ್ಯ ಸರ್ಕಾರ ಹೂಡಲಿದ್ದು ಶೇ.25ರಷ್ಟನ್ನು ಬಿಬಿಎಂಪಿ ಹಾಗೂ ಉಳಿದದ್ದನ್ನು ಫಲಾನುಭವಿಗಳು ಭರಿಸಬೇಕಿದೆ.

ಪರಿಣಾಮವಾಗಿ ಬಿಎಂಟಿಸಿ ಬಸ್ ನಿಲ್ದಾಣಕ್ಕೂ ಟಿಕೆಟ್ ದರ ಏರಿಕೆ ಮಾಡುವ, ನೀರು ಒಳಚರಂಡಿ ಮುಂತಾದ ನಾಗರೀಕ ಸೌಲಭ್ಯಗಳಿಗೂ





ಬಳಕೆ ವೆಚ್ಚ ಸಂಗ್ರಹಿಸುವ ಕ್ರಮಗಳು ಜಾರಿಗೊಳ್ಳುತ್ತಿವೆ. ಬಿಬಿಎಂಪಿ ತನ್ನ ಪಾಲಿನ ಬಂಡವಾಳಕ್ಕಾಗಿ ವಿಶ್ವಬ್ಯಾಂಕ್ ಸಾಲ ಪಡೆದಿದ್ದು ಅದರ ಬಡ್ಡಿ ಹಾಗೂ ಕಂತಿಗಾಗಿ ರೂ.221.45 ಕೋಟಿಯನ್ನು 2007-2008ರ'ಲ್ಲಿ ಮೀಸಲಿರಿಸಿದೆ. ಈ ಯೋಜನೆ ಭಾಗವಾಗಿಯೇ ಬೆಂಗಳೂರು ಮಹಾನಗರ ಪಾಲಿಕೆಯನ್ನು ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯನ್ನಾಗಿಸಲು 100 ಕಾರ್ಪೊರೇಟರ್‌ಗಳ ಸ್ಥಾನವನ್ನು 145ಕ್ಕೆ ಹೆಚ್ಚಿಸುವ ಹಾಗೂ ಮೇಯರ್‌ಗೆ ನೇರ ಚುನಾವಣೆ ನಡೆಸುವ ಯತ್ನ ನಡೆದಿದೆ. ಈ ಕಸರತ್ತಲ್ಲೇ ಚುನಾಯಿತ ಮಹಾನಗರ ಪಾಲಿಕೆಯ ಆಡಳಿತ ಮುಗಿದು 1 ವರ್ಷವಾದರೂ ಚುನಾವಣೆ ನಡೆದಿಲ್ಲ. jnnur ಜನ ಬೆಂಗಳೂರು ಯೋಜನೆ ರೂಪಿಸುವಲ್ಲಿ ಪ್ರಧಾನ ಪಾತ್ರ ವಹಿಸಿದ ಎನ್‌ಜಿಒಗಳಾದ ಸಿವಿಕ್, ಜನಾಗ್ರಹ ಹಾಗೂ ಹಿಂದಿನ ಕಾಂಗ್ರೆಸ್ ಸರ್ಕಾರದ ಸಮಯದಲ್ಲಿ ರಚಿಸಲಾಗಿದ್ದ ಬೆಂಗಳೂರು ಅಜೆಂಡಾ ಟಾಸ್ಕ್ ಫೋರ್ಸ್ (BATF) ಮತ್ತು ಅಧಿಕಾರಿಗಳ ಆಡಳಿತದ ರುಚಿಯನ್ನು ಜನತೆ ನೋಡುವಂತಾಗಿದೆ.

ಲಾಭ ಅರಸಿ ಬರುವ ಬಂಡವಾಳ ಬದುಕ ಅರಸಿ ಬರುವ ಶ್ರಮಿಕರು



ರಾಜ್ಯದ ಕೃಷಿ ಬಿಕ್ಕಟ್ಟಿನಿಂದಾಗಿ ಹೊರದೂಡಲ್ಪಡುತ್ತಿರುವ ದೊಡ್ಡ ಪ್ರಮಾಣದ ದುಡಿಯುವ ಜನತೆ ಇಂದು ಬದುಕನ್ನರಸಿ ಬೆಂಗಳೂರಿಗೆ ಬರುವ ಅಸಂಘಟಿತ ಕಾರ್ಮಿಕರಾಗಿ ಅನಾಗರಿಕ ಪರಿಸರದಲ್ಲಿ ದುಬಾರಿ ಬೆಲೆಯೇರಿಕೆಯಡಿ ಬದುಕುವಂತಾಗಿದೆ. ಪರಿಣಾಮವಾಗಿ ಬೆಂಗಳೂರು ಮಹಾನಗರವು ಒಂದೆಡೆ ದೈಹಿಕ ಶ್ರಮ ಮಾರುವ ಸಲುವಾಗಿ ವಲಸೆ ಬರುತ್ತಿರುವ ಕಾರ್ಮಿಕರ ನಗರವಾಗಿ ಮತ್ತೊಂದೆಡೆ ಬೌದ್ಧಿಕ ಶ್ರಮ ಮಾರುವ ಸಲುವಾಗಿ ಬರುತ್ತಿರುವ ವಲಸಿಗರ ನಗರವಾಗಿ ಮಾರ್ಪಡುತ್ತಿದೆ.

ಬಡವರು ಶ್ರೀಮಂತರ ನಡುವೆ ಹೆಚ್ಚುತ್ತಿರುವ ಕಂದರ

ದೊಡ್ಡ ಪ್ರಮಾಣದ ಅಸಂಘಟಿತ ಕಾರ್ಮಿಕರು ಕಟ್ಟಡ ಕಾರ್ಮಿಕರು ಗುತ್ತಿಗೆ ಕಾರ್ಮಿಕರು, ಹೊರಗುತ್ತಿಗೆ ಕಾರ್ಮಿಕರ ನಗರವಾಗಿ ಹೊರಹೊಮ್ಮುತ್ತಿದೆ. ಸಂಘಟಿತ ವಲಯದ ಕಾರ್ಮಿಕರ ಸಂಖ್ಯೆ 5 ಲಕ್ಷವಾದರೆ, ಅಸಂಘಟಿತ ವಲಯದ ಕಾರ್ಮಿಕರ ಸಂಖ್ಯೆ 15 ಲಕ್ಷಕ್ಕೂ ಮೇಲಿದೆ. ಅಂತೆಯೇ ಸೇವಾ ವಲಯದ ರಂಗಗಳಲ್ಲಿ 2 ಲಕ್ಷಕ್ಕೂ ಹೆಚ್ಚು ನೌಕರರು ದುಡಿಯುತ್ತಿರುವ ಅಂದಾಜಿದೆ. ಇಷ್ಟೆಲ್ಲ ಬೆಳವಣಿಗೆಗಳ ನಡುವೆ ಬೆಂಗಳೂರು ಬಹುರಾಷ್ಟ್ರೀಯ ಕಂಪನಿಗಳ ಕೇಂದ್ರವಾಗು ತ್ತಿರುವಾಗಲೇ ಪ್ರಸಕ್ತ ಅಭಿವೃದ್ಧಿ ಆಧಾರಿತ ಆದಾಯವು ನಗರ ಕೇಂದ್ರಿತವಾಗಿರುವ ಹಾಗೂ ಅದರ ವ್ಯಾಪ್ತಿ ಹೆಚ್ಚೆಚ್ಚು ಕೇಂದ್ರೀಕೃತವು ಹಾಗೂ ಸೀಮಿತವೂ ಆಗಿದೆ. ಇಡೀ ರಾಷ್ಟ್ರದಲ್ಲಿ ಶ್ರೀಮಂತ ಹಾಗೂ ಬಡವರ ನಡುವಿನ ಅತಿ ಹೆಚ್ಚು ಅಂತರ ಅಸ್ತಿತ್ವದಲ್ಲಿರುವುದು ಬೆಂಗಳೂರಿನಲ್ಲಿಯೇ. ಪ್ರಸಕ್ತ ಆದಾಯ ಹೆಚ್ಚಳದಿಂದ ಉಂಟಾಗುತ್ತಿರುವ ಸೌಲಭ್ಯಗಳ ಶೇ.63ರಷ್ಟನ್ನು ಬೆಂಗಳೂರಿನಲ್ಲಿ ಮೇಲ್‌ಸ್ತರದ ಶೇ.20ರಷ್ಟು ಜನಸಂಖ್ಯೆಯ ಜನ ಅನುಭವಿಸುತ್ತಿದ್ದಾರೆ. ತಳದ ಶೇ.20ರಷ್ಟು ಜನಸಂಖ್ಯೆಗೆ ಕೇವಲ ಶೇ.15ರಷ್ಟು ಲಭ್ಯವಾಗುತ್ತಿದೆ. ಮಹಾನಗರದಲ್ಲಿನ ಅರ್ಧಕ್ಕೂ ಹೆಚ್ಚು ಆದಾಯ ಜನಸಂಖ್ಯೆಯ ಮೇಲಿನ ಶೇ.20ಕ್ಕೆ ಹರಿದುಬರುತ್ತಿದೆ ಎಂಬ ಅಂಶವು ಪ್ರಸಕ್ತ ಬಂಡವಾಳಾಧಾರಿತ ಅಭಿವೃದ್ಧಿಯು ಬೆಂಗಳೂರಿನಲ್ಲಿ ಸೃಷ್ಟಿಸುತ್ತಿರುವ ಬಿಕ್ಕಟ್ಟಿನ ತೀವ್ರತೆಯನ್ನು ಸೂಚಿಸುತ್ತಿದೆ. ಅಸಂಘಟಿತ ಕಾರ್ಮಿಕರಿಗೆ ರಾಜ್ಯವ್ಯಾಪಿ ಸಮಾನ ಕನಿಷ್ಠ ಕೂಲಿ ಚಳುವಳಿ ತೀವ್ರಗೊಂಡು ಅದು ನಿಗದಿಯಾದಲ್ಲಿ ಜೀವನದ ಮಟ್ಟ ಸುಧಾರಿಸಬಹುದಾಗಿದೆ. ಲಕ್ಷಾಂತರ ಸಂಖ್ಯೆಯಲ್ಲಿರುವ ಅಸಂಘಟಿತ ಕಾರ್ಮಿಕರ ಹೋರಾಟ ಮತ್ತು ಸಂಘಟನೆಗೆ ಅಗತ್ಯ ಗಮನ ನೀಡಿದಲ್ಲಿ ಚಳುವಳಿಗೆ ಹೊಸ ಆಯಾಮ ಲಭ್ಯವಾಗುವ ಸಾಧ್ಯತೆ ಇದೆ.

ಅಂಚಿಗೆ ಸರಿಯುತ್ತಿರುವ ದುಡಿಯುವ ಜನ

ಈ ನಡುವೆ ಸರ್ಕಾರದ ನೀತಿಗಳು ಜನರ ಆದಾಯವನ್ನು ಹೆಚ್ಚೆಚ್ಚು ಕಸಿದುಕೊಳ್ಳುವ ಕ್ರಮಗಳಾಗಿದ್ದು ಬೆಲೆಯೇರಿಕೆ ಬವಣೆಯಿಂದ ದುಡಿಯುವ ಜನ ಬೆಂಗಳೂರು ನಗರದಿಂದ ಹೊರವಲಯಕ್ಕೆ; ಹೊರವಲಯದಿಂದ ಗ್ರಾಮಾಂತರಕ್ಕೆ ವಾಸಕ್ಕಾಗಿ ಸರಿಯುವ ಪ್ರವೃತ್ತಿಯು ತೀವ್ರಗೊಂಡಿದೆ. ದುಡಿಮೆಗಾಗಿ ದೂರ ದೂರದಿಂದ ಪ್ರಯಾಣಿಸಬೇಕಾದ ಪರಿಸ್ಥಿತಿ ನಿರ್ಮಿತಗೊಳ್ಳುತ್ತಿದೆ. ಅಸಂಘಟಿತ ದುಡಿಯುವ ಜನತೆಯು ತಮ್ಮ ಕುಟುಂಬದ ಮಾಸಿಕ ಆದಾಯದ ಶೇ.15ರಿಂದ 25ರಷ್ಟು ಸಾರಿಗೆ ವೆಚ್ಚಕ್ಕಾಗಿ ಹಾಗೂ ಆದಾಯದ ಶೇ.50ರಷ್ಟನ್ನು ಮನೆ ಬಾಡಿಗೆಗೆ ಭರಿಸಬೇಕಾದ ಪರಿಸ್ಥಿತಿ ನಿರ್ಮಾಣ ವಾಗುತ್ತಿದೆ. ಒಟ್ಟಾರೆ ಜನರ ಮೇಲಿನ ಹೊರೆ ಹೆಚ್ಚುತ್ತಿದೆ. ನಗರ ಸಾರಿಗೆ ಸಮಸ್ಯೆ ತೀವ್ರತೆಯಿಂದಾಗಿ ದುಡಿಮೆಯ ಕಾಲ 8ರಿಂದ 10 ಗಂಟೆಯಾದರೆ ಪ್ರಯಾಣದ ಕಾಲ 2ರಿಂದ 4 ಗಂಟೆಯೆಂಬಂತಾಗಿದೆ.

ಹಾಗಾಗಿ ನಗರವಾಸಿಗಳಲ್ಲಿ ವಸತಿ ನಿವೇಶನದ ಪ್ರಶ್ನೆ ಪ್ರಧಾನ ಪ್ರಶ್ನೆಯಾಗಿ ಹೊರಹೊಮ್ಮುತ್ತಿದೆ. ರಾಜ್ಯದ ರಾಜಧಾನಿಯಾಗಿ ವ್ಯಾಪಾರದ ಕೇಂದ್ರವಾಗಿರುವ ಬೆಂಗಳೂರಿನಲ್ಲಿ ದೊಡ್ಡ ಪ್ರಮಾಣದಲ್ಲಿರುವ ವ್ಯಾಪಾರವನ್ನು ಅವಲಂಬಿತ ದುಡಿಯುವ ಜನ ಚಿಲ್ಲರೆ ವ್ಯಾಪಾರದಲ್ಲಿ ವಿದೇಶಿ ನೇರ ಬಂಡವಾಳ ಹಾಗೂ ಸಂಘಟಿತ ವಲಯದ ಪ್ರವೇಶದಿಂದಾಗಿ ದೊಡ್ಡ ಪ್ರಮಾಣದಲ್ಲಿ ಬದುಕು ಕಳೆದುಕೊಳ್ಳುವ ಪರಿಸ್ಥಿತಿಯಲ್ಲಿದ್ದಾರೆ. ಅಂತೆಯೇ ವ್ಯಾಪಾರಕ್ಕೆಂದು ವಲಸೆ ಬಂದ ಶ್ರೀಮಂತರಿಂದ, ನಗರ ಕೇಂದ್ರದ ಆಸ್ತಿ ಖರೀದಿಗಳು ವ್ಯಾಪಕವಾಗುತ್ತಿದ್ದು ದಶಕಗಳಿಂದ ನಗರ ಕೇಂದ್ರದಲ್ಲಿ ನೆಲೆಸಿದ್ದ ಜನತೆ ಆಸ್ತಿ ಮಾರಿ ಹೊರವಲಯಕ್ಕೆ ಸರಿಯುವ ಪ್ರವೃತ್ತಿಯು ಹೆಚ್ಚಿದೆ.

ಭೂಸ್ವಾಧೀನದ 'ಬಲಿಪಶುಗಳು'

ಗ್ರಾಮಾಂತರ ಜಿಲ್ಲೆಯ ರೈತಾಪಿ ಜನತೆ ಒಂದೆಡೆ ಕೃಷಿ ಬಿಕ್ಕಟ್ಟು ಮತ್ತೊಂದೆಡೆ ಬಹುರಾಷ್ಟ್ರೀಯ ಬಂಡವಾಳದ ಹರಿಯುವಿಕೆ ಹಾಗೂ ನಗರೀಕರಣದ ಭಾಗವಾಗಿ ದೊಡ್ಡ ಪ್ರಮಾಣದಲ್ಲಿ ಭೂಸ್ವಾಧೀನ ಪ್ರಕ್ರಿಯೆಯ ಬಲಿಪಶುಗಳಾಗಿ ಇದ್ದ ಸಣ್ಣಪುಟ್ಟ ಭೂಮಿ ಕಳೆದುಕೊಳ್ಳುವ ಪ್ರಕ್ರಿಯೆಗಳು ಹೆಚ್ಚಿವೆ. ಅದರ ವಿರುದ್ಧದ ಹೋರಾಟಗಳು ನಡೆದಿವೆ. ಭೂಮಿ ಕಳೆದುಕೊಳ್ಳುವ ಕೆಲವರು ಧಿಡೀರ್ ಶ್ರೀಮಂತರಾಗಿ ಬಂಡವಾಳಿಗರ ಬಾಲ ಬಡುಕರಾಗಿ ಕಾರ್ಮಿಕರ ಮೇಲೆ, ಮಾಲೀಕರು ಬಳಸಬಹುದಾದ ಗೂಂಡಾ ಅಸ್ತ್ರಗಳಾಗಿ ಮಾರ್ಪಡುತ್ತಿದ್ದಾರೆ. ಆದರೆ ಭೂಮಿ ಕಳೆದುಕೊಳ್ಳುವ ಬಹುತೇಕರು ಕೂಲಿಕಾರರಾಗಿ ಮಾರ್ಪಡು ತ್ತಿದ್ದಾರೆ.

ಬಂಡವಾಳದ ನಾಗಾಲೋಟದ ಈ ಬೆಳವಣಿಗೆಗಳು ಹೊಸ ಹೊಸ ಸಿರಿತನದ ನಡುಗಡ್ಡೆಗಳಾದ-ಕೆಲವು ವಾಣಿಜ್ಯ ಪ್ರದೇಶಗಳಲ್ಲಿ ನೈಟ್‌ಔಟ್, ವೀಕ್‌ಎಂಡ್ ಮಸ್ತಿ ಹೆಚ್ಚುತ್ತಿವೆ. ರಾಕ್, ಪಾಪ್ ಶೋಗಳು, ಫ್ಯಾಶನ್ ಶೋಗಳು ಹೆಚ್ಚುತ್ತಿವೆ. ಮಲ್ಟಿಪ್ಲೆಕ್ಸ್, ಮಾಲ್ ಗಳಲ್ಲಿನ ಸಿನಿಮಾ ಮಂದಿರಗಳ ರೂ.500.00 ಹಾಗೂ ಅದಕ್ಕೂ ಹೆಚ್ಚಿನ ದರದ ಸಿನಿಮಾ ಥಿಯೇಟರ್‌ಗಳು ಸದಾ ಹೌಸ್‌ಫುಲ್ ಆಗುತ್ತಿರುವ, ವಾರಗಟ್ಟಲೆ ಮುಂಚಿತವಾಗಿ ಭರ್ತಿಯಾಗಿರುವ ವರದಿಗಳು ಇವೆ. ಸೈಬರ್ ಕೆಫೆಗಳು, ಬಾರ್‌ಗಳು, ಪಬ್‌ಗಳ ಸಂಖ್ಯೆಯೂ ಹೆಚ್ಚುತ್ತಿವೆ. ಜನವಸತಿ ಪ್ರದೇಶದಲ್ಲಿಯೂ ಬಾರ್, ಪಬ್‌ಗಳು ಹೆಚ್ಚುತ್ತಿವೆ.

ಜಾತೀಯತೆ ಹೋಗಿಲ್ಲ

ಇಷ್ಟೆಲ್ಲ ಬೆಳವಣಿಗೆಗಳ ನಡುವೆಯು ಆಧುನಿಕತೆಯ ಭರಾಟೆಯಲ್ಲಿಯು ಮಹಾನಗರಕ್ಕೆ ಅಂಟಿಕೊಂಡಿರುವ ಗ್ರಾಮಾಂತರದಲ್ಲಿ ಇಂದಿಗೂ ಜಾತಿ ದೌರ್ಜನ್ಯಗಳು ಅಸ್ಪೃಶ್ಯತೆಯ ಆಚರಣೆಗಳು ವ್ಯಾಪಕವಾಗಿವೆ. ನಗರ ಜಿಲ್ಲೆ ವ್ಯಾಪ್ತಿಯಲ್ಲೂ ಮನೆ ಬಾಡಿಗೆಗೆ ನೀಡುವ, ಪಡೆಯುವ ಪ್ರಕ್ರಿಯೆಗಳಲ್ಲಿ ಜಾತಿ ಮೂಲ ಹುಡುಕುವ ಯತ್ನಗಳು ನಡೆಯುತ್ತಿವೆ. ಕೊಲೆ, ಸುಲಿಗೆ, ಮೋಸ, ವಂಚನೆ ಕೊಲೆಪಾತಕ ರಾಜಕೀಯ, ದರೋಡೆ, ಮಹಿಳೆಯರ ಮೇಲೆ ದೌರ್ಜನ್ಯ, ಮಾನಭಂಗ ಮತ್ತು ಆಸಿಡ್ ದಾಳಿಗಳು ಹೆಚ್ಚುತ್ತಿವೆ.

ಸಂಘಟಿತ ಕಾರ್ಮಿಕರ ಮೊದಲ ತಲೆಮಾರಿನ ಕಾರ್ಮಿಕರು ನಿವೃತ್ತಿ ಹೊಂದಿದ್ದು ಅಥವಾ ಪಡೆಯುತ್ತಿದ್ದು ಎರಡನೆ ತಲೆಮಾರಿನ ಕಾರ್ಮಿಕರಲ್ಲಿ ಸ್ಥಳೀಯ, ರಾಜ್ಯದ ಯುವ ಕಾರ್ಮಿಕರ ಸಂಖ್ಯೆ

ಪುಟ 15ಕ್ಕೆ

> ಇಲ್ಲಿ ಎಲ್ಲವೂ ಇದೆ. ತುಂಬಿದ ವನಸಿರಿ, ಭಾವಪರವಶಗೊಳಿಸುವ ದೃಶ್ಯಗಳು. ಆದರೆ ಇಲ್ಲಿಗೆ ಹೋಗುವ ಸುಸೂತ್ರ ದಾರಿಯೊಂದನ್ನು ಬಿಟ್ಟು. ಹಾಗಾದರೆ?

ಚಿಕ್ಕಮಗಳೂರು ಹಳಿಯ ಮೇಲೆ ಬರಲಿ ರೈಲು...

ವಿ. ಸುಕುಮಾರ್

ಚಿಕ್ಕಮಗಳೂರು ನಗರಕ್ಕೆ ರೈಲ್ವೆ ಸಂಪರ್ಕ ಬೇಕೆನ್ನುವುದು ಚಿಕ್ಕಮಗಳೂರು ಜಿಲ್ಲೆಯ ಜನತೆಯ ಹಲವು ದಶಕಗಳ ಆಶಯ ಹಾಗೂ ಬೇಡಿಕೆ ಈಡೇರಿಸಲು ಹಲವು ಹೋರಾಟಗಳು ನಡೆದವು. ಫಲವಾಗಿ 1997ರಲ್ಲಿ ಆಗಿನ ಪ್ರಧಾನಿಯಾಗಿದ್ದ ಮಾನ್ಯ ಹೆಚ್.ಡಿ.ದೇವೇಗೌಡರು ಕಡೂರು, ಚಿಕ್ಕಮಗಳೂರು, ಸಕಲೇಶಪುರ ಮಾರ್ಗದ 93 ಕಿ.ಮೀ ಉದ್ದದಲ್ಲಿ ಕಡೂರು, ಚಿಕ್ಕಮಗಳೂರು ನಡುವಿನ 45 ಕಿ.ಮೀ.ಗೆ ಕಾಮಗಾರಿ ಆರಂಭಿಸಲು ಶಂಕುಸ್ಥಾಪನೆ ಮಾಡಿದರು. ಅಷ್ಟೇ ಹಣ ಬಿಡಿಬಿಡಿಯಾಗಿ ಬಿಡುಗಡೆಯಾಗುತ್ತಿದೆ. ಹತ್ತು, ನೂರು, ಸಾವಿರಕ್ಕೆ ಏರುತ್ತಲೇ ಇಲ್ಲ. ಹಾಗಾಗಿ ಶಂಕುಸ್ಥಾಪನೆ ಮಾಡಿದ ಕಲ್ಲು ಬಿದ್ದುಹೋದರೂ ನೆನಪು ಮಾತ್ರ ಹಸಿಯಾಗಿದೆ.

ರೈಲು ಸಂಪರ್ಕ ಬೇಕು ಏಕೆಂದರೆ

ಚಿಕ್ಕಮಗಳೂರು ಜಿಲ್ಲೆ ನೈಸರ್ಗಿಕವಾಗಿ ಸಂಪದ್ಭರಿತವಾದ ಜಿಲ್ಲೆ. ಅದು ಎಲ್ಲಾ ರೀತಿಯಲ್ಲೂ ತುಂಬಿದ ಜಿಲ್ಲೆ. ಸೌಂದರ್ಯ, ವಾಣಿಜ್ಯ, ಯಾತ್ರೆ ಮುಂತಾದವುಗಳಿಗೆ ಅದು ತುಂಬಿ ತುಳುಕುವ ಜಿಲ್ಲೆ.
ಪಶ್ಚಿಮ ಘಟ್ಟಗಳ ಸಾಲು,
ತುಂಬಿದ ವನಸಿರಿ,
ಜುಳುಜುಳು ಹರಿಯುವ ನದಿ ತೊರೆ,
ಖನಿಜಯುಕ್ತ ಬೆಟ್ಟಗಳು, ಹಳ್ಳಿಗಳು, ದುಮ್ಮಿಕ್ಕುವ ಜಲಪಾತಗಳು ಗಗನವನ್ನು ಚುಂಬಿಸಲು ಪೈಪೋಟಿ ನಡೆಸುವ ಹಲವು ಬಗೆಯ ಅಪರೂಪದ ಮರಗಳು, ಅಪರೂಪದ ಸಸ್ಯ ಪ್ರಭೇದ, ಪ್ರಾಣಿ ಪ್ರಭೇದಗಳು, ಭಾವ ಪರವಶಗೊಳಿಸುವ ದೃಶ್ಯಗಳು, ಸೂರ್ಯಾಸ್ತಕ್ಕೆ ಪ್ರಸಿದ್ಧ ಸ್ಥಳಗಳು, 'ಮುಕ್ತಿ'ಗಾಗಿ ಯಾತ್ರಾ ಸ್ಥಳಗಳು, ಸೌಹಾರ್ದ ಪರಂಪರೆಯ ಬಾಬಾ ಬುಡನ್‌ಗಿರಿಯಂತಹ ಸ್ಥಳಗಳು ಹೀಗೆ ಪಟ್ಟಿ ಬೆಳೆಯುತ್ತದೆ ಹನುಮಂತನ ಬಾಲದಂತೆ. ಚಿಕ್ಕಮಗಳೂರು ಜಿಲ್ಲೆಗೆ ಈ ಎಲ್ಲವೂ ಇದೆ, ಅಲ್ಲಿಗೆ ಹೋಗುವ ಸುಸೂತ್ರ ದಾರಿಯೊಂದನ್ನು ಬಿಟ್ಟು!

ಜಿಲ್ಲೆಯಲ್ಲಿ ಎರಡು ರಾಷ್ಟ್ರೀಯ ಹೆದ್ದಾರಿಗಳು, 6 ರಾಜ್ಯ ಹೆದ್ದಾರಿಗಳು 4 ಜಿಲ್ಲಾ ಮುಖ್ಯ ರಸ್ತೆಗಳು ಹಾದು ಹೋಗಿದ್ದು, ಉತ್ತಮ ರಸ್ತೆ ಸಂಪರ್ಕ ಕಲ್ಪಿಸಿವೆ. ಉತ್ತಮ ಸಂಪರ್ಕ ಮಾರ್ಗವೇನೋ ಇದೆ. ಆದರೆ ಸಂಪರ್ಕದ ಮಾರ್ಗ ಚೆನ್ನಾಗಿರಬೇಕಲ್ಲ. ವರ್ಷಕ್ಕೆ ಆರೇಳು ಇಂಚು ಮಳೆ ಬೀಳುವ ಪ್ರದೇಶದ ರಸ್ತೆಗಳ ಕತೆ ನೆನೆಸಿಕೊಂಡರೇ ಭಯವಾಗುವಾಗ ವಾರ್ಷಿಕ 600ರಿಂದ 700 ಇಂಚು ಮಳೆ ಬೀಳುವ ಪ್ರದೇಶದ ರಸ್ತೆ ಹೇಗಿರಬೇಕು. ಜೊತೆಗೆ ಬಸ್ ಸಂಚಾರದ ದರ ಕಿ.ಮೀ.ಗೆ ಹೆಸರಿಗೆ 40 ಪೈಸೆ ಆದರೆ ಕೊಡಬೇಕಾಗಿರುವುದು 58 ಪೈಸೆ. ಇರಲಿ ರಸ್ತೆ ಸಂಚಾರದ ನರಕಯಾತನೆ ಬೇಡ ಎನ್ನುವಂತಿದೆ. ಜಿಲ್ಲೆಯಿಂದ ಖನಿಜ, ಅದಿರುಗಳನ್ನು ಸಾಗಿಸುವ ಪವರ್ ಗೇರ್ ಲಾರಿಗಳಿಂದಲೂ ರಸ್ತೆ ಹಾಳಾಗುತ್ತಿದೆ. ಹಾಳಾದ ರಸ್ತೆಯ ಜೊತೆಗೆ ವಾಹನ ದಟ್ಟಣೆ ಬೇರೆ ಅಡಚಣೆಯುಂಟಾದರೆ ರಾತ್ರಿಯಿಡೀ ನಡುದಾರೀಲಿ ಜಾಗರಣೆ. ಇದು ಜನಸಂಚಾರಕ್ಕೆ ಆಗುವ ತೊಂದರೆಯಾದರೆ ಸರಕು ಸಾಗಣೆಯದು ಇನ್ನೊಂದು ರೀತಿಯದು. ಜಿಲ್ಲೆಯು ಕಾಫಿಗೆ ಹಾಗೂ ಸಾಂಬಾರ ಪದಾರ್ಥಗಳಿಗೆ ಹೆಸರುವಾಸಿಯಾದುದು. ಕಾಲದಲ್ಲಿ ಕಾಫಿ ಹಾಗೂ ಸಾಂಬಾರ್ ಪದಾರ್ಥಗಳನ್ನು ಸಂಸ್ಕರಣೆಗಾಗಿ, ರಫ್ತಿಗಾಗಿ ಹೊರಗೆ ಸಾಗಿಸುವ ಸಾಕಷ್ಟು ಕಷ್ಟವಾಗುತ್ತದೆ. ಕಾಫಿಯಿಂದ ಸಾಕಷ್ಟು ವಿದೇಶಿ ವಿನಿಮಯ ಸಂಗ್ರಹವಾಗುತ್ತದೆ. ಜೊತೆಗೆ ಕಾಫಿಗಿಂತಲೂ ಸಂಬಾರ ಪದಾರ್ಥಗಳಿಂದಲೂ ವಿದೇಶಿ ವಿನಿಮಯ ಸಂಗ್ರಹವಾಗುತ್ತಿದೆ. ಕಾಫಿ, ಸಾಂಬಾರ ಪದಾರ್ಥಗಳನ್ನು ರಸ್ತೆಗಳ ಮೂಲಕ ಸಾಗಿಸಿದರೆ ಸಾಗಾಣಿಕೆ ವೆಚ್ಚವು ರೈಲಿನಲ್ಲಿ ಸಾಗಿಸುವುದಕ್ಕಿಂತಲೂ ಮೂರುಪಟ್ಟು ಜಾಸ್ತಿಯಾಗುತ್ತದೆ. ಹಾಗಾಗಿ ರೈಲಿನ ಮೂಲಕ ಸರಕು ಸಾಗಿಸಿದರೆ ಹೆಚ್ಚು ಲಾಭದಾಯಕ.

ಉದ್ಯೋಗ ನೀಡಿಕೆಯಲ್ಲೂ ಈ ಜಿಲ್ಲೆಯದು ದೊಡ್ಡ ಕೊಡುಗೆ. ಪ್ಲಾಂಟೇಷನ್ ಉದ್ಯಮ ಬಲುದೊಡ್ಡದು. ಇದು ಲಕ್ಷಾಂತರ ಕಾರ್ಮಿಕರಿಗೆ ಉದ್ಯೋಗ ನೀಡಿದೆ. ಉತ್ತರ ಕರ್ನಾಟಕದಿಂದ ಇಲ್ಲಿಗೆ ಪ್ರಯಾಣಿಸುವವರ ಸಂಖ್ಯೆ ಅಪಾರ. ಶಿವಮೊಗ್ಗದಿಂದ ಚಿಕ್ಕಮಗಳೂರು ಮಾರ್ಗವಾಗಿ ಮಂಗಳೂರಿಗೆ ಕನಿಷ್ಟ 230ರಿಂದ 250 ಬಸ್ಸುಗಳು ಓಡಾಡುತ್ತಿವೆ. ಜಿಲ್ಲೆಯ ಬಾಬಾಬುಡನ್‌ಗಿರಿ, ಮುಳ್ಳಯ್ಯನಗಿರಿ ಕಲ್ಲತ್ತಿಗಿರಿ ಮುಂತಾದ ರಮಣೀಯ ಪ್ರದೇಶ ಹಾಗೂ ಜಲಪಾತಗಳು ಹಾಗೂ ಶೃಂಗೇರಿ, ರಂಬಾಪುರಿ, ಹೊರನಾಡು ಮುಂತಾದ ಯಾತ್ರಾಸ್ಥಳಗಳು ಅಲ್ಲದೆ ಪಕ್ಕದ ದಕ್ಷಿಣ ಕನ್ನಡ ಜಿಲ್ಲೆಗೆ ಧರ್ಮಸ್ಥಳ, ಸುಬ್ರಹ್ಮಣ್ಯ, ಮಂಗಳೂರು, ಉತ್ತರ ಕನ್ನಡದ ಪ್ರದೇಶಗಳಿಗೆ ಪ್ರವಾಸಕ್ಕೆ ಬರುವ ಉತ್ತರ ಕರ್ನಾಟಕದ ಜನರಿಗೆ ಚಿಕ್ಕಮಗಳೂರು ಸಮೀಪದ ದಾರಿ. ಹಾಗಾಗಿ ಪ್ರವಾಸೋದ್ಯಮಕ್ಕೆ ವಿಪುಲ ಅವಕಾಶಗಳಿರುವ ಈ ಜಿಲ್ಲೆಗೆ ಒಳ್ಳೆಯ ಸಂಪರ್ಕ ಕಲ್ಪಿಸಲು ರೈಲು ಮಾರ್ಗಕ್ಕೆ ಅನೇಕ ದಶಕಗಳಿಂದ ಹೋರಾಟ ನಡೆಯುತ್ತಿದೆ.

ತಂತ್ರ - ಪ್ರತಿತಂತ್ರಗಳು!

ಕಾಂಗ್ರೆಸ್, ಬಿಜೆಪಿ ಮೊದಲಾದ ಪಕ್ಷಗಳು ಈ ಜಿಲ್ಲೆಯನ್ನು ಪ್ರತಿನಿಧಿಸಿವೆ. ಆದರೆ ಬಿಜೆಪಿ ಬಾಬಾಬುಡನ್‌ಗಿರಿಯ ವಿವಾದಕ್ಕೆ ನೀಡಿದ ಮಹತ್ವವನ್ನು ರೈಲ್ವೆ ಸಂಪರ್ಕಕ್ಕೆ ಎಂದೂ ನೀಡಿಲ್ಲ. ಅವರು ಎಲ್ಲೂ ಜನರ ಪ್ರಶ್ನೆಗಳಿಗಾಗಿ ಹೋರಾಡಿದವರಲ್ಲ. ಆದ್ದರಿಂದ ಇಲ್ಲೇನೂ ಅದನ್ನು ನಿರೀಕ್ಷಿಸುವಂತಿಲ್ಲ. ಇನ್ನು ಕಾಂಗ್ರೆಸ್‌ನದು ಕೇವಲ ಪ್ರತಿತಂತ್ರ ಹೆಣೆದು ಎದುರಿಸುವುದರಲ್ಲಿಯೇ ಇದೆ. ಇನ್ನು ಜೆಡಿ(ಎಸ್)ನದು ತಂತ್ರ ಹೆಣೆದು ತಾನು ಸಿಕ್ಕಿಹಾಕಿಕೊಳ್ಳುವುದೇ ಆಗಿದೆ.

ದುಗುಡಗಳ ಧಗೆಯ ನಡುವಿನಿಂದ

ಕಮ್ಯೂನಿಸ್ಟ್ ಪಕ್ಷಗಳದು ಸಣ್ಣ ಶಕ್ತಿ. ಮೊನ್ನೆ ಮಾರ್ಕ್ಸ್‌ವಾದಿ ಕಮ್ಯೂನಿಸ್ಟ್ ಪಕ್ಷದ ಜಿಲ್ಲಾ ಸಮ್ಮೇಳನದಲ್ಲಿ ಚಿಕ್ಕಮಗಳೂರಿಗೆ ರೈಲು ಸಂಪರ್ಕ ಕಲ್ಪಿಸಬೇಕೆಂದು ನಿರ್ಣಯ ತೆಗೆದುಕೊಂಡಿದ್ದರು. ಸಕಲೇಶಪುರದಿಂದ ಚಿಕ್ಕಮಗಳೂರು ಮಾರ್ಗವಾಗಿ ಕಡೂರಿಗೆ ರೈಲು ಸಂಪರ್ಕ ಬೇಕೆನ್ನುವುದು ಸಿಪಿಐ(ಎಂ)ನ ಬೇಡಿಕೆ. ಬೆಂಗಳೂರು, ಮಂಗಳೂರು ರೈಲು ಆರಂಭಗೊಂಡಿರುವುದು ಅಥವಾ ಕಡೂರು ಮಾರ್ಗವಾಗಿ ಅರಸೀಕೆರೆಗೆ ಹೋದರೆ ರಾಜ್ಯದ ಎಲ್ಲ ಭಾಗಗಳಿಗೂ ಬಹುತೇಕ ರೈಲು ಪ್ರಯಾಣ ಮಾಡಬಹುದು. ಹಾಗಾಗಿ ಸಕಲೇಶಪುರ, ಚಿಕ್ಕಮಗಳೂರು, ಕಡೂರು ರೈಲು ಮಾರ್ಗಕ್ಕಾಗಿ 1997ರಲ್ಲಿ ಅಂದಿನ ಪ್ರಧಾನಿ ಎಚ್.ಡಿ.ದೇವೇಗೌಡರವರು ಮಂಜೂರು ಮಾಡಿದ್ದ ಕಾಮಗಾರಿ ಪೂರ್ಣಗೊಳ್ಳುವವರೆಗೆ ಹೋರಾಟ ಮಾಡುವುದಾಗಿ ಸಿಪಿಐ(ಎಂ)ನ ಜಿಲ್ಲಾ ಕಾರ್ಯದರ್ಶಿ ವಿ.ಸುಕುಮಾರ್‌ರವರ ಸ್ಪಷ್ಟ ನುಡಿ.

ಮೊನ್ನೆ 28 ಜನವರಿ 2007ರಂದು ನಗರದಲ್ಲಿ ಸಿಪಿಐ(ಎಂ) ಪ್ರತಿಭಟನೆ ಸಂಘಟಿಸಿತ್ತು. ಕೋಮುವಾದಿ ಅಜೆಂಡಾಗಳಿಂದ, ನಕ್ಸಲೈಟರ, ಪೊಲೀಸರ ಗುಂಡಿನ ಸದ್ದಿನಿಂದ ದೇಶದ ಗಮನ ಸೆಳೆದಿದ್ದ ಜಿಲ್ಲೆ ಅದರಲ್ಲಿ ಕಾಫಿ, ಸಾಂಬಾರ್ ಪದಾರ್ಥಗಳ ಸುವಾಸನೆಯನ್ನು ಕಳೆದುಕೊಂಡಿತ್ತು. ಸೌಂದರ್ಯದ ಒಡಲು ಭಯದ ಅನುಮಾನದ ಧಗೆಯಿಂದ ಸುಟ್ಟು ಕರಕಲಾಗಿತ್ತು.



ಇಂತಹ ಬೇಡಿಕೆಗಳನ್ನು ಜನರಿಂದ ಮರೆಸಿ ಹಾಕಿದ್ದ ಕೋಮು ಭಾವನೆಗಳಿಂದ ಹೊರಬಂದಿದ್ದ ಜನತೆ ಈ ಪ್ರತಿಭಟನೆಯನ್ನು ಚೆನ್ನಾಗಿಯೇ ಬೆಂಬಲಿಸಿದರು. ಏಕೆಂದರೆ ಯಾರು ದಶಕದಿಂದ ಪ್ರಸ್ತಾಪಿಸದ ಒಂದು ತುರ್ತು ಬೇಡಿಕೆಗಾಗಿ ಸಿಪಿಐ(ಎಂ) ಅಂದು ಪ್ರತಿಭಟನೆ ಸಂಘಟಿಸಿತ್ತು.

ಹಳಿ ಕಟ್ಟಿದ ರೈಲಿನ ಭೋಗಿಯು ಎಲ್ಲಿಯವರೆಗೆ ಬಂದಿದೆ

ಅದು 1990ರ ನಂತರದ ದಿನಗಳು. ವಾಣಿಜ್ಯ ಚಟುವಟಿಕೆಗಳು ಚೆನ್ನಾಗಿದ್ದ ಕಾಲ. ರಸ್ತೆಮಾರ್ಗ ದುಬಾರಿಯಾಗಿದ್ದ ಕಾಲ ಹಾಗೂ ರಾಜಕೀಯದಲ್ಲಿ ಚಿಕ್ಕಮಗಳೂರು ಜಿಲ್ಲೆ ಒಮ್ಮೆ ಮಿಂಚಿದ್ದಿತು. ರೈಲು ಸಂಪರ್ಕಕ್ಕಾಗಿ ಹೋರಾಟ ತೀವ್ರಗೊಂಡ ಕಾಲ. ಸಾಕಷ್ಟು ಚಳುವಳಿ ನಡೆದ ನಂತರ 1997ರಲ್ಲಿ ಅಂದಿನ ಪ್ರಧಾನಿಯಾಗಿದ್ದ ಎಚ್.ಡಿ.ದೇವೇಗೌಡರು ಕಡೂರು, ಚಿಕ್ಕಮಗಳೂರು ಸಕಲೇಶಪುರ ಮಾರ್ಗದ ಒಟ್ಟು 93 ಕಿ.ಮೀ ಉದ್ದ ರೈಲು ಮಾರ್ಗದ ಸಮೀಕ್ಷೆ ಮಾಡಿಸಿ ಅದರಲ್ಲಿ ಕಡೂರಿನಿಂದ ಚಿಕ್ಕಮಗಳೂರಿಗೆ 45 ಕಿ.ಮೀ ಉದ್ದ ಮಾರ್ಗ ನಿರ್ಮಾಣಕ್ಕೆ ಚಾಲನೆಯನ್ನು ನೀಡಿದರು. 12 ವರ್ಷಗಳಾದರೂ ಆ ಕಾಮಗಾರಿ ನಡೆದೂ ನಡೆದೂ ಕೊನೆಗೂ ನಿಂತುಹೋಗಿದೆ. ಅಂದಾಜು ವೆಚ್ಚವನ್ನು ಬಿಡಿಬಿಡಿಯಾಗಿ 5,10,15 ಕೋಟಿಗಳಂತೆ ಬಿಡುಗಡೆ ಮಾಡಲಾಗುತ್ತದೆ. ಅದು ಮಾರ್ಗ ಮಧ್ಯದ ಸೇತುವೆಗಳಿಗೆ ಸಾಲುವುದಿಲ್ಲ. ಜೊತೆಗೆ ಬಿಡುಗಡೆಯಾದ ಅಂದಾಜು ವೆಚ್ಚವನ್ನು ಇಂಜಿನಿಯರ್ ವಿಭಾಗ ಪೂರ್ಣ ಬಿಡುಗಡೆ ಮಾಡದೆ ಹಿಂದಕ್ಕೆ ಹೋಗುತ್ತದೆ. 2004, 05ರಲ್ಲಿ 15 ಕೋಟಿ ಬಿಡುಗಡೆಯಾದರೆ ವೆಚ್ಚವಾಗಿದ್ದು ಕೇವಲ 5.77 ಕೋಟಿ ರೂಪಾಯಿ ಮಾತ್ರ. ಉಳಿದಿದ್ದೆಲ್ಲಾ ಹಿಂದಕ್ಕೆ ಹೋಗಿದೆ. 2006, 07ರಲ್ಲಿ 10 ಕೋಟಿ ಬಿಡುಗಡೆಯಾಗಿದೆ. 07 ಡಿಸೆಂಬರ್ ಅಂತ್ಯದವರೆಗೆ 4 ಕೋಟಿ ಮಾತ್ರ ವೆಚ್ಚವಾಗಿದೆ. ಉಳಿದ ಮೂರು ತಿಂಗಳಲ್ಲಿ 6 ಕೋಟಿ ವೆಚ್ಚ ಮಾಡಬೇಕಾಗಿದೆ. ಅದು ಆಗದಿರುವ ಮಾತು.

ನಿರ್ಲಕ್ಷಿತ ಯೋಜನೆ

ಇದು ಇಲಾಖೆಯ ನಿರ್ಲಕ್ಷಕ್ಕೆ ಬಲಿಯಾಗಲಿರುವ ಯೋಜನೆ. ಇದರ ಹಿಂದಿನ ಶಕ್ತಿಗಳ ಲಾಭ ಇರಬಹುದು. ಈ ರೀತಿಯ ವಿಳಂಬದಿಂದ ಅಂದಾಜು ವೆಚ್ಚ ವಿಪರೀತವಾಗಿ ಹೆಚ್ಚುತ್ತಾ ಹೋಗುತ್ತದೆ. 1997ರಲ್ಲಿ ಕಡೂರು, ಚಿಕ್ಕಮಗಳೂರು, ಸಕಲೇಶಪುರ ಮಾರ್ಗ ನಿರ್ಮಾಣಕ್ಕೆ 294 ಕೋಟಿ ಅಂದಾಜಾಗಿತ್ತು. ಅಂದೇ ಪ್ರಾರಂಭಿಸಿ 2ರಿಂದ 3 ವರ್ಷಗಳಲ್ಲಿ ಕಾಮಗಾರಿ ಮುಗಿಸಿದ್ದರೆ 310 ಕೋಟಿಯೊಳಗೆ ಆಗುತ್ತಿತ್ತು. ಇಂದು ಅದೇ ಅಂದಾಜು ವೆಚ್ಚ 700 ಕೋಟಿಗೂ ದಾಟಲಿದೆ. ಈಗಲೂ ಬಿಡುಗಡೆ ಮಾಡದಿದ್ದರೆ ಅಂದಾಜು ವೆಚ್ಚವೂ ಬೆಳೆಯುತ್ತದೆ ಹಾಗೂ ಕಡತವೂ, ಜೊತೆಗೆ ಕಡತದ ಮೇಲಿನ ಧೂಳು ಸಹ ಬೆಳೆಯುತ್ತದೆ. ಹಾಗೆಯೇ ಜನರ ಬೇಡಿಕೆಯೂ ಸಹ. ಅದಕ್ಕೊಂದು ಅಂತಿಮವಾದರೂ ಇರುತ್ತದೆ ಅಲ್ಲವೇ? ಜಿಲ್ಲೆಯ ಜನರು ಬಹುದಿನಗಳ ಬೇಡಿಕೆಯನ್ನು ಈಡೇರಿಸದಿದ್ದರೆ ಚಳುವಳಿ ಸ್ವರೂಪ ಏನಾಗಲಿದೆಯೋ ಕಾದು ನೋಡಬೇಕಾಗಿದೆ.

ಸಿಪಿಐ(ಎಂ) ಈ ವಿಷಯವನ್ನು ಕೈಗೆತ್ತಿಕೊಂಡಿದೆ. 28ರಂದು ಸ್ಥಳೀಯ ಮಟ್ಟದ ಹೋರಾಟವನ್ನು ಆರಂಭಿಸಿದೆ. ಸರಿಯಾಗಿ ಒಂದು ತಿಂಗಳು ಅಂದರೆ ಫೆಬ್ರವರಿ 29ಕ್ಕೆ ರೈಲ್ವೆ ಬಜೆಟ್ ಮಂಡನೆಯಾಗಲಿದೆ. ಆದ್ದರಿಂದ ಕಡೂರು, ಚಿಕ್ಕಮಗಳೂರು, ಸಕಲೇಶಪುರ ರೈಲು ಮಾರ್ಗದ ಅನುಷ್ಠಾನಕ್ಕೆ ಪೂರ್ಣ ಹಣ ಬಿಡುಗಡೆ ಮಾಡುವಂತೆ ಹೋರಾಟ ಜಿಲ್ಲೆಯಲ್ಲಿ ಆರಂಭಗೊಂಡಿದೆ. ಸಿಪಿಐ(ಎಂ) ನಿಯೋಗವು ರೈಲ್ವೆ ಸಚಿವರನ್ನು ಭೇಟಿ ಮಾಡಲಿದ್ದು ಪಕ್ಷದ ಪಾರ್ಲಿಮೆಂಟರಿ ನಾಯಕರನ್ನು ಭೇಟಿ ಮಾಡುವ ನಿರೀಕ್ಷೆಯಿದೆ. ಹಾಗಾಗಿ ಜಿಲ್ಲೆಯ ಜನರ ಬಹುದಿನಗಳ ಕನಸಿಗೆ ಸಿಪಿಐ(ಎಂ) ರೆಕ್ಕೆ ಕಟ್ಟಿದೆ. ಜಿಲ್ಲೆಯ ಜನರು ಪಕ್ಷದ ಜೊತೆ ನಿಂತರೆ ಈ ಯೋಜನೆಯನ್ನು ಅನುಷ್ಠಾನಗೊಳಿಸಬಹುದು. ಪ್ರವಾಸೋದ್ಯಮದಲ್ಲಿ ಕೇರಳಕ್ಕೆ ಸೆಡ್ಡು ಹೊಡೆಯುವುದಾಗಿ ಹೇಳುವ ರಾಜ್ಯ ಸರ್ಕಾರವು ಕೂಡ ಈ ಯೋಜನೆಗೆ ಕೇಂದ್ರದ ಮೇಲೆ ಒತ್ತಡ ಹಾಕಬೇಕಾಗಿದೆ. ಪ್ರವಾಸ, ಯಾತ್ರೆಗೆ ಆಕರ್ಷಣೀಯ ಕೇಂದ್ರಕ್ಕೆ 'ರೈಲು ಬರಲಿ ಹಳಿಯ ಮೇಲೆ' ಎನ್ನುವುದು ನಮ್ಮ ಆಶಯ. ಆದಷ್ಟು ಬೇಗ ಈಡೇರಲಿ.



'ಟಾಟಾ ನಾನೋ' ಅಥವಾ ಇನ್ನೇನೋ ನಮಗೇನು?!

ವಸಂತ ಕಾಡೇಕರ್

ರತನ್ ಟಾಟಾ ಅವರ 'ಒಂದು ಲಕ್ಷ ಕಾರು', 'ಜನತಾ ಕಾರು' ಎಂದೆಲ್ಲಾ ಹೆಸರಿನಿಂದ 'ಅದೋ ಬಂತು' 'ಇದೋ ಬಂತು' ಅಂತ ಕೊನೆಗೂ 'ನಾನೋ' ಆಗಿ ಅವತರಿಸಿದೆ. 'ನಾನೋ'ಗೆ ದೇಶದ ಒಳಗೂ ಹೊರಗೂ ಸಂಭ್ರಮದ ಸ್ವಾಗತ, ಭಾರೀ ಸ್ಪಂದನ ಸಿಕ್ಕಿತು. ಇದು ಮೊದಲ ನೋಟಕ್ಕೆ ಈಗ ಮಾಮೂಲಿಯಾಗಿರುವ - ಕಂಪನಿಗಳು ಮತ್ತು ಮಾಧ್ಯಮಗಳು ಸೃಷ್ಟಿಸಿದ - 'ಮಾರ್ಕೆಟಿಂಗ್ ಹೈಪ್' ಅಂತ ಕಾಣುತ್ತದೆ. ಆದರೆ ಸ್ವಲ್ಪ ಆಳವಾಗಿ ಇಣುಕಿ ನೋಡಿದರೆ ನಾನೋ ಅವತಾರಕ್ಕೆ ಹೆಚ್ಚಿನ ಮಹತ್ವ ಇದೆ. ಇದು ಬರಿಯ ಇನ್ನೊಂದು ಉತ್ಪನ್ನದ 'ಲಾಂಚ್' ಅಲ್ಲ. ಇತ್ತೀಚಿನ ನಮ್ಮ ದೇಶದ ಮಾತ್ರವಲ್ಲ ಜಾಗತಿಕವಾಗಿಯೂ, ಸಂಕೀರ್ಣ ಕೈಗಾರಿಕಾ-ಆರ್ಥಿಕ ಬೆಳವಣಿಗೆಯಲ್ಲಿ ಒಂದು ಪ್ರಮುಖ ಮೈಲಿಗಲ್ಲು. ಹೊಸ ಸಾಧ್ಯತೆಗಳನ್ನು ತೋರಿಸುವ ಕೈಮರ ಎಂದನಿಸಿತು.

'ನಾನೋ' ಅದರ ಒಂದು ಲಕ್ಷ ಬೆಲೆಯ ಮೂಲಕ ನಾವು 'ಮಧ್ಯಮ ವರ್ಗ' ಎಂದು ಕರೆಯುವ ಹೆಚ್ಚಿನವರ ನಿಲುಕಿಗೆ ಸಿಗುವ ಅಗ್ಗದ ಕಾರು ಮಾತ್ರ ಅಲ್ಲ. ಆದರೆ ಅದರ ಬೆಲೆಯೂ ಕಡಿಮೆ ಸಾಧನೆಯೆನೂ ಅಲ್ಲ. ಅಮೆರಿಕನ್ ಕಾರಿನ 'ಡಿವಿಡಿ ಪ್ಲೇಯರ್' (ಸುಮಾರು ಎರಡು ವರೆ ಸಾವಿರ ಡಾಲರು) ಬೆಲೆಯಲ್ಲಿ ಇಡೀ ಕಾರು ಕೊಡುವುದು 'ಇಂಪಾಸಿಬಲ್' ಅಂತ ಲೇವಡಿ ಮಾಡಿದ್ದ ಕಾರು ಜಗತ್ತಿನ ದಿಗ್ಗಜಗಳು ಮತ್ತು ಅವರ ತುತ್ತೂರಿಗಳು ಬಾಯಿ ಮುಚ್ಚಿಕೊಳ್ಳಬೇಕಾಗಿದೆ.

ತಮ್ಮ ದೈತ್ಯಬಲದಿಂದ ವಸ್ತುಗಳ ದುಬಾರಿ ಬೆಲೆ ಹೇರುವ, ತಂತ್ರಜ್ಞಾನದ ವರ್ಗಾವಣೆ ಹಾಗೂ ಮುಕ್ತ ಬೆಳವಣಿಗೆಗೆ ತಡೆಯೊಡ್ಡುವ ಪಾಶ್ಚಿಮಾತ್ಯ ಬಹುರಾಷ್ಟ್ರೀಯ ಕಂಪನಿಗಳಿಗೆ ಇದು ಹೊಸ ಸವಾಲು. 'ನಾನೋ' ಬರಲಿ, ಇನ್ನೇನೋ ಬರಲಿ - ನಮಗೇನು ಎಂಬ ಸಿನಿಕತನ ನನಗಂತೂ ಸಾಧ್ಯವಾಗುತ್ತಿಲ್ಲ.

ಅದೂ ಚಂದ ವಿನ್ಯಾಸದ, ಉತ್ತಮ ಕ್ಷಮತೆ-ವೇಗ (100ಕಿ,ಮೀ) ಕೊಡುವ, ಪೆಟ್ರೋಲ್ ಮಿತಬಳಕೆ (20 ಕಿ.ಮೀ. ಲೀಟರ್ ಗೆ), ಅತಿ ಕಡಿಮೆ ಜಾಗ ತಿನ್ನುವ (ದೊಡ್ಡ ಕಾರುಗಳ ಅರ್ಧ), ಸುರಕ್ಷಿತತೆ-ಪರಿಸರದ (ಯುರೋ-4) ಮಾನದಂಡವನ್ನು ಮುಟ್ಟುವ ಕಾರನ್ನು ಇಂತಹ ಬೆಲೆಯಲ್ಲಿ ಕೊಡುವುದು ಸಾಧನೆಯೇ. ಈ ಎಲ್ಲಾ ವೈರುಧ್ಯ ಇರುವ ಹಲವು ಗುರಿಗಳನ್ನು ಮುಟ್ಟುವ ಇಂಜಿನಿಯರಿಂಗ್ ಸವಾಲು ಸ್ವೀಕರಿಸಿ ಅದನ್ನು ನಿಭಾಯಿಸಿದ ಟಾಟಾ ಮೋಟರ್ಸ್ ಇಂಜಿನಿಯರುಗಳು ಅಭಿನಂದನಾರ್ಹರು. ಇದಕ್ಕಾಗಿ ಹಲವು ವಿಶೇಷ ಸಾಮುಗ್ರಿ, ಹೊಸ ತಂತ್ರಜ್ಞಾನ ಬಳಸಲಾಗಿದೆ. ಐನ್ನೂರು ಇಂಜನೀಯರುಗಳು ಐದು ವರ್ಷಗಳಿಗೂ ಹೆಚ್ಚು ಕಾಲ ಇದಕ್ಕಾಗಿ ಶ್ರಮಿಸಿದರು ಎನ್ನಲಾಗಿದೆ.

ಶೇ. 25 ಕಡಿಮೆ ಗಾತ್ರದ ಇಂಜಿನ್ ನಿಂದ ಸುಮಾರು ಅದೇ ವೇಗ-ಸಾಮಥ್ಯ ಕೊಡುವ, ಶೇ.8 ಕಡಿಮೆ ಗಾತ್ರದ, ಶೇ.25 ರಷ್ಟು ಹೆಚ್ಚು ಮೈಲೇಜ್ ಕೊಡುವ, ಶೇ.20 ಕ್ಕಿಂತಲೂ ಹೆಚ್ಚು ಉಕ್ಕಿನ ಬಳಕೆಯಲ್ಲಿ ಕಡಿತ ಮಾಡಿರುವ ನಾನೋ ಸುಮಾರು ಅರ್ಧ ಬೆಲೆಗೆ ಸಿಗುತ್ತದೆ. ಆದರೆ ನಿಜವಾದ ವ್ಯತ್ಯಾಸ ಇರುವುದು ಹೆಚ್ಚು ಕಡಿಮೆ ಪೂರ್ಣ ಸ್ವದೇಶಿ ವಿನ್ಯಾಸ-ಉತ್ಪಾದನೆಯಲ್ಲಿ.

ಸ್ವದೇಶೀ ಕಾರು

ನಾನೋ ವಿನ್ಯಾಸ ಮತ್ತು ಉತ್ಪಾದನೆಯಲ್ಲಿ ಹೆಚ್ಚು ಕಡಿಮೆ ಪೂರ್ಣ 'ಸ್ವದೇಶಿ ಕಾರು' ಎನ್ನುವುದು ಅದರ ಅತಿ ದೊಡ್ಡ ಹೆಗ್ಗಳಿಕೆ. ಇದೇ ಕಾರಿನ ಬೆಲೆ ಕಡಿಮೆ ಇರುವುದಕ್ಕೆ ಮುಖ್ಯ ಕಾರಣ ಕೂಡಾ. ಇಂತಹ ಬೆಲೆಗೆ ಕೊಡುವುದು ಸಾಧ್ಯವಾಗಿರುವುದು ಹೊಸ ವಸ್ತುಗಳ-ತಂತ್ರಜ್ಞಾನದ ಬಳಕೆ, ಸಾಮಗ್ರಿಗಳ ಮಿತಬಳಕೆ - ಮುಂತಾದ ವಿನ್ಯಾಸದ ವೈಖರಿಯಿಂದ ಮಾತ್ರವಲ್ಲ. ಉತ್ಪಾದನೆಯಲ್ಲಿ ಹೊಸ ವಿಧಾನಗಳಿಂದ, ವಿದೇಶಗಳಿಂದ ಆಮದಾಗುವ ಸಾಮುಗ್ರಿಗಳು-ಭಾಗಗಳು ಅತಿ ಕಡಿಮೆ ಇರುವುದರಿಂದ, ಹೆಚ್ಚಿನ ಭಾಗ- ಸಾಮಗ್ರಿಗಳು ದೇಶದಲ್ಲೇ ತಯಾರಾಗುವುದರಿಂದ, ಕೆಲವು ಬಿಡಿ ಭಾಗಗಳನ್ನು ದೊಡ್ಡ ಪ್ರಮಾಣದಲ್ಲಿ ತಯಾರಿಸುವ ಉಪ-ಘಟಕಗಳನ್ನು ಬೆಳೆಸುವುದರಿಂದ, ಸಂಶೋಧನೆ-ಅಭಿವೃದ್ಧಿ ಮತ್ತು ಉತ್ಪಾದನೆಯ ಹೂಡಿಕೆಯ ಮೊದಲ ವೆಚ್ಚವನ್ನು ದೊಡ್ಡ ಪ್ರಮಾಣದ ಉತ್ಪಾದನೆಯಲ್ಲಿ ಹಂಚುವುದರಿಂದ ಇದು ಸಾಧ್ಯವಾಗಿದೆ ಎಂದು ಹೇಳಲಾಗಿದೆ. ಉತ್ಪಾದನೆ ಮಿತ ಖರ್ಚಿನಲ್ಲಿ ಆಗುವಂತೆ ವಿವರವಾದ ಯೋಜನೆ ಮಾಡಲಾಗಿದೆಯಂತೆ.

'ಜನತಾ ಕಾರು' ಎಂದು ಹೇಳಲಾದ ಇನ್ನೊಂದು ಕಾರು - ಮಾರುತಿ 800 - ಜತೆ ಹೋಲಿಕೆ ಅನಿವಾರ್ಯ ಆಗುತ್ತದೆ. ಶೇ. 25 ಕಡಿಮೆ ಗಾತ್ರದ ಇಂಜಿನ್ ನಿಂದ ಸುಮಾರು ಅದೇ ವೇಗ-ಸಾಮಥ್ಯ ಕೊಡುವ, ಶೇ.8 ಕಡಿಮೆ ಗಾತ್ರದ, ಶೇ.25 ರಷ್ಟು ಹೆಚ್ಚು ಮೈಲೇಜ್ ಕೊಡುವ, ಶೇ.20 ಕ್ಕಿಂತಲೂ ಹೆಚ್ಚು ಉಕ್ಕಿನ ಬಳಕೆಯಲ್ಲಿ ಕಡಿತ ಮಾಡಿರುವ ನಾನೋ ಸುಮಾರು ಅರ್ಧ ಬೆಲೆಗೆ ಸಿಗುತ್ತದೆ. ಆದರೆ ನಿಜವಾದ ವ್ಯತ್ಯಾಸ ಇರುವುದು ಹೆಚ್ಚು ಕಡಿಮೆ ಪೂರ್ಣ ಸ್ವದೇಶಿ ವಿನ್ಯಾಸ-ಉತ್ಪಾದನೆಯಲ್ಲಿ. ಮಾರುತಿ-800 ರ ವಿನ್ಯಾಸ ಹೆಚ್ಚು ಕಡಿಮೆ ಪೂರ್ಣ ಜಪಾನಿ ಯಾಗಿತ್ತು. ಉತ್ಪಾದನೆಯಲ್ಲೂ ಅದು ಯಾವತ್ತೂ ಅರ್ಧದಷ್ಟೂ ಸ್ವದೇಶಿ ಆಗಲಿಲ್ಲ. ಇತ್ತೀಚೆಗೆ ಸ್ವದೇಶಿ ಭಾಗ ಇನ್ನಷ್ಟು ಕಡಿಮೆಯಾಗಿತ್ತು. ಆದರೂ ಮಾರುತಿ-800 ಕಾರಿನ-ವಾಹನಗಳ ಬಿಡಿಭಾಗ-ಆಕ್ಸೆಸರಿಗಳ' ತಯಾರಿಕೆಯ ಮತ್ತು ರಿಪೇರಿ-ದುರಸ್ತಿಯ ಪೂರಕ ಕೈಗಾರಿಕೆಗೆ ಕುಮ್ಮಕ್ಕು ಕೊಟ್ಟಿತ್ತು. ನಾನೋ ಇನ್ನಷ್ಟು ದೊಡ್ಡ ಪ್ರಮಾಣದಲ್ಲಿ ವಾಹನ ಕೈಗಾರಿಕಾ ಕ್ಷೇತ್ರದ ಬೆಳವಣಿಗೆಗೆ ಕುಮ್ಮಕ್ಕು ಕೊಡುವ ಸಾಧ್ಯತೆ ಇದೆ. ಮಾರುತಿ ಕಾರಿನ ಆಗಿನ ಬೆಲೆ ಕಾರು ಮಾರುಕಟ್ಟೆಯನ್ನು ವಿಸ್ತರಿಸಿತ್ತು. ನಾನೋ ಕಾರು ಮಾರುಕಟ್ಟೆಯನ್ನು ಶೇ.65 ರಷ್ಟು ವಿಸ್ತರಿಸುತ್ತದೆ ಎಂದು ಅಂದಾಜು ಮಾಡಲಾಗಿದೆ.

ನಾನೋ ಟ್ರಾಫಿಕ್-ಪರಿಸರ ಜಾಮ್ ಮಾಡುವುದೆ?


ಇನ್ನೊಂದು ಮಗ್ಗಲು ನೋಡಿದರೆ, ನಾನೋದ ಉತ್ಪಾದನಾ ಮಾಡೆಲ್ ಗಳು 'ನಮ್ಮ ರಸ್ತೆಯ ಮೇಲೆ ಎಷ್ಟು ಪರಿಣಾಮಕಾರಿಯಾಗಿ ಇರುತ್ತವೆ ಮತ್ತು ಸಫಲವಾಗುತ್ತವೆ' ನಿಜವಾಗಿಯೂ ಬೆಲೆ ಒಂದು ಲಕ್ಷಕ್ಕೆ ಸೀಮಿತವಾಗಿರುತ್ತದೆಯೆ? ಅಥವಾ ಮಾರುಕಟ್ಟೆ ಹಿಡಿದ ನಂತರ ಬೆಲೆ ಏರಿಸಲಾಗುತ್ತದೆಯೆ? ಕಾರುಗಳ ಮಾರುಕಟ್ಟೆ ನಿಜವಾಗಿಯೂ ಶೇ.65 ರಷ್ಟು ಹೆಚ್ಚಿದರೆ, ನಮ್ಮ ರಸ್ತೆಗಳಲ್ಲಿ ಈಗಾಗಲೇ ದುರ್ಲಭವಾಗಿರುವ ನಡೆದಾಡುವ ಜಾಗ ಉಳಿಯುತ್ತದೆಯೆ ? ಸಾರ್ವಜನಿಕ ಸಾಗಾಣಿಕೆಗೆ ತೋರಲಾಗುತ್ತಿರುವ ಪಕ್ಷಪಾತ ಧೋರಣೆ ಇನ್ನಷ್ಟು ಬಲಗೊಳ್ಳುವುದಿಲ್ಲವೇ? ಜಗತಿನಾದ್ಯಂತ ಕಾರು ಕಂಪನಿಗಳನ್ನು ಕೊಳ್ಳಲು ಅನುವಾಗುವಂತೆ 'ನಾನೋ' ಮಾರ್ಕೆಟಿಂಗ್ ಗಿಮಿಕ್ ಮಾತ್ರ ಇರಬಹುದೇ? ಎಂಬಂತಹ ಪ್ರಶ್ನೆಗಳಿಗೆ ಸ್ಪಷ್ಟ ಉತ್ತರಗಳಿಲ್ಲ. ಕಾದು ನೋಡಬೇಕು. ಆದರೆ ನಮ್ಮ ಈಗಿನ ತಪ್ಪು ಸಾಗಾಣಿಕೆ ನೀತಿಗಳಿಗೆ 'ನಾನೋ' ವನ್ನು ಜವಾಬ್ದಾರ ಮಾಡುವುದು ಎಷ್ಟು ಸರಿ? ಬಸ್ಸು, ವ್ಯಾನಿನಂತಹ ಸಾರ್ವಜನಿಕ ಸಾಗಾಣಿಕೆ ಜತೆ ಆಟೋ, ಕಾರುಗಳ ಅಗತ್ಯವೂ ಇದೆ. 'ನಾನೋ' ಎರಡನೇ ಅಗತ್ಯ ಪೂರೈಸುವ ಜತೆಗೆ ವಾಹನ ಕೈಗಾರಿಕೆ ಮೂಲಕ ದೊಡ್ಡ ರೀತಿಯ ಉದ್ಯೋಗ ಸೃಷ್ಟಿಸುವ ಕೆಲಸ ಮಡಬಲ್ಲುದು. ನಮ್ಮ ರಸ್ತೆಗಳಲ್ಲಿ ಹೆಚ್ಚಿನ ಜಾಗ ಒದಗಿಸಲು, ಪರಿಸರ ಮಾಲಿನ್ಯ ಕಡಿಮೆ ಮಾಡಲು - ಇಮ್ಮಡಿ ಜಾಗ ತಿನ್ನುವ, ಒಬ್ಬರೇ ಓಡಾಡುವ, ಆಮದು ಹೆಚ್ಚಿಸುವ, ಸ್ಥಳಿಯ ಉದ್ಯೋಗ ಹೆಚ್ಚಿಸದ ದೊಡ್ಡ ಕಾರುಗಳಿಗೆ ಉತ್ತೇಜನ ಕೊಡದ ನೀತಿಗಳನ್ನು ತರಬಹುದಲ್ಲ.

'ನಾನೋ' ಹೊಸ ಹಾದಿ?

'ನಾನೋ' ಬಗ್ಗೆ ಮೇಲೆ ಹೇಳಿದ ಎಲ್ಲವೂ ನಿಜವಾಗದಿದ್ದರೂ, ಅದು ಹಲವು ಮಹತ್ವದ ಸಾಧ್ಯತೆಗಳತ್ತ ಗಮನ ಸೆಳೆದಿದೆ. ನಮ್ಮ ದೇಶದಲ್ಲಿ ಬಳಕೆಯ ವಸ್ತುಗಳ' ತಯಾರಿಕೆಗೆ ಖಾಸಗಿ ವಲಯದಲ್ಲಿ ಸಂಪೂರ್ಣ ಸ್ವದೇಶಿ ವಿನ್ಯಾಸ- ಉತ್ಪಾದನೆಗೆ ಮಹತ್ವಾಕಾಂಕ್ಷಿ ಯೋಜನೆ ಹಾಕಿ, ಗುಣಮಟ್ಟ-ಬೆಲೆಗಳಲ್ಲಿ ಜಾಗತಿಕ ಮಾನದಂಡ ಮೀರಿ ಯಶಸ್ಸು ಪಡೆದದ್ದು ಬಹುಶಃ ಇದೇ ಮೊದಲು. ಇಂತಹ ಸಾಧನೆಗಳು ಇರಲಿಲ್ಲವೆಂದಲ್ಲ. ಅವೆಲ್ಲಾ ಅಣುಶಕ್ತಿ, ಬಾಹ್ಯಾಕಾಶ ಮುಂತಾದ ಕ್ಷೇತ್ರಗಳಲ್ಲಿ ನೇರ ಸರಕಾರದ ಸಂಪನ್ಮೂಲ-ಯೋಜನೆ ಮತ್ತು ತುರ್ತು ರಾಷ್ಟ್ರೀಯ ಅಗತ್ಯದವು ಆಗಿದ್ದವು. ಬಳಕೆಯ ವಸ್ತುಗಳ ಪೂರ್ಣ ವಿನ್ಯಾಸ ಮತ್ತು ಉತ್ಪಾದನೆ ದೇಶದಲ್ಲೇ ಆದರೆ - ಅದು ಕಡಿಮೆ ಬೆಲೆಯದ್ದು, ಇಲ್ಲಿಯ ಬಳಕೆಗೆ ಸರಿಯಾದ್ದು ಇರುತ್ತದೆ. ಆ ವಸ್ತುವಿಗೆ ದೊಡ್ಡ ಮಾರುಕಟ್ಟೆ ಸೃಷ್ಟಿಸುತ್ತದೆ. ಮಾತ್ರವಲ್ಲ ಕೈಗಾರಿಕೀಕರಣಕ್ಕೆ, ಉದ್ಯೋಗಗಳಿಗೆ ದೊಡ್ಡ ಕುಮ್ಮಕ್ಕು ಕೊಡುತ್ತದ. ಆ ಮೂಲಕ ಎಲ್ಲಾ ವಸ್ತುಗಳಿಗೆ ಹೆಚ್ಚಿನ ಬೇಡಿಕೆ ಸೃಷ್ಟಿಸುತ್ತದೆ. (ಇದ್ಯಾವುದೂ 'ರಫ್ತು-ಆಧಾರಿತ' ಕೈಗಾರಿಕೆಗಳಲ್ಲಿ ಸಾಧ್ಯವಾಗುವುದಿಲ್ಲ. 'ರಫ್ತು-ಆಧಾರಿತ' ಕೈಗಾರಿಕೆ - ಸಾಫ್ಟವೇರ್ ಸೂಪರ್ ಪವರ್ ತನ್ನ ಎಲ್ಲಾ ಸಾಫ್ಟವೇರ್ ದುಬಾರಿ ಬೆಲೆಯಲ್ಲಿ ಆಮದು ಮಾಡುವ ವಿಚಿತ್ರ ಪರಿಸ್ಥಿತಿ - ನಿರ್ಮಾಣ ಮಾಡುತ್ತದೆ)

ತಮ್ಮ ದೈತ್ಯಬಲದಿಂದ ವಸ್ತುಗಳ ದುಬಾರಿ ಬೆಲೆ ಹೇರುವ, ತಂತ್ರಜ್ಞಾನದ ವರ್ಗಾವಣೆ ಹಾಗೂ ಮುಕ್ತ ಬೆಳವಣಿಗೆಗೆ ತಡೆಯೊಡ್ಡುವ ಪಾಶ್ಚಿಮಾತ್ಯ ಬಹುರಾಷ್ಟ್ರೀಯ ಕಂಪನಿಗಳಿಗೆ ಇದು ಹೊಸ ಸವಾಲು. ಸ್ವದೇಶೀ ಮಾರುಕಟ್ಟೆ ಮತ್ತು ತಂತ್ರಜ್ಞಾನದ ಬಲದಿಂದ ಈಗಾಗಲೆ ಇಂತಹ ಸವಾಲು ಹಾಕಿರುವ ಚೀನೀ ಕಂಪನಿಗಳ ಹಾದಿಯನ್ನು ಇಂಡಿಯಾದ ಕಂಪನಿಗಳೂ ಹಿಡಿಯಬಹುದು ಎಂಬುದರ ಸಂಕೇತ. 'ನಾನೋ' ಇಂತಹ ಹಲವು ಹೊಸ ಮಹತ್ವಾಕಾಂಕ್ಷೆಯ ಯೋಜನೆಗಳಿಗೆ ನಾಂದಿಯಾಗ ಬಹುದು. ಈಗಾಗಲೇ ಸಾರ್ವತ್ರಿಕ ಬಳಕೆಯ ಟೀವಿ, ಮೊಬೈಲ್, ಕಂಪ್ಯೂಟರ್‌ಗಳಲ್ಲಿ ಇಂತಹ ಪ್ರಯೋಗ ಯಾಕೆ ಮಾಡಬಾರದು ಎಂಬ ಚರ್ಚೆ ಕೇಳಬಂದಿದೆ. ಇಂದಿನ ಹಂತದಲ್ಲಿ ಒಳಗಿಂದ ಹೊರಗೆ ಹರಿಯುವ ಹೊಸ ಜಾಗತೀಕರಣದ ಹೊಸ ಸಾಧ್ಯತೆಗಳ ಹೊಸ ಉತ್ಸಾಹ 'ನಾನೋ' ಮೂಡಿಸಿದೆ. ಕನಿಷ್ಟವನ್ನು ಅಂತಹ ಕನಸು ಕಾಣಲು ಪ್ರಚೋದಿಸಿದೆ. 'ನಾನೋ' ಬರಲಿ, ಇನ್ನೇನೋ ಬರಲಿ - ನಮಗೇನು ಎಂಬ ಸಿನಿಕತನ ನನಗಂತೂ ಸಾಧ್ಯವಾಗುತ್ತಿಲ್ಲ.

ಕೃಪೆ: ಕನ್ನಡ ಟೈಮ್ಸ್



ವಿವಿಧ ದೇಶಗಳ ಒಟ್ಟು ರಾಷ್ಟ್ರೀಯ ಉತ್ಪನ್ನ (ಜಿ.ಡಿ.ಪಿ)

	ಬಿಲಿಯನ್ ಡಾಲರುಗಳಲ್ಲಿ	ಕೋಟಿ ರೂ.ಗಳಲ್ಲಿ	ಜಗತ್ತಿನ ಒಟ್ಟು ಜಿಡಿಪಿಯಲ್ಲಿ ಶೇ.
ಅಮೇರಿಕಾ	12,376	49504000	22.51
ಚೀನಾ	6333.2	(ಒಂದು	9.7
ಜಪಾನ್	3870.3	ಬಿಲಿಯನ್	7.04
ಜರ್ಮನಿ	2514.8	ಡಾಲರ್	4.57
ಭಾರತ	2341.0	ಎಂದರೆ	4.26
ಇಂಗ್ಲಂಡ್	1901.7	ನಾಲ್ಕು	3.46
ಫ್ರಾನ್ಸ್	1862	ಸಾವಿರ	3.39
ರಶಿಯಾ	1697.5	ಕೋಟಿ	3.09
ಬ್ರೆಜಿಲ್	1585.0	ರೂಪಾಯಿಗಳು)	2.88
ಎಲ್ಲಾ ದೇಶಗಳ ಒಟ್ಟು ಜಿಡಿಪಿ	54980.00		100.00

ಕಾಮ್ರೇಡ್ ಪಿ.ಕೆ.ಎಸ್.: ಬತ್ತದ ಉತ್ಸಾಹ ಎದೆಯಲ್ಲಿ ಅಚಲ ಬದ್ಧತೆ

ಕಳೆದ ವಾರ ಮೈಸೂರಿನಲ್ಲಿ ನಡೆದ ಸಿಪಿಐ(ಎಂ) ರಾಜ್ಯ ಸಮ್ಮೇಳನದ ಕುರಿತ ಲೇಖನ, ವರದಿಗಳನ್ನು ಓದಿದ್ದೀರಿ. ಇಂತಹ ಸಮ್ಮೇಳನವನ್ನು ಯಶಸ್ವಿ ಮಾಡಿದ ಸಂಗಾತಿಗಳ ನಿಧಿ ಸಂಗ್ರಹದ ವಿಶಿಷ್ಟ ಅನುಭವಗಳು, ಸಮ್ಮೇಳನದ ವಿಶೇಷ ಆಹ್ವಾನಿತರಾಗಿದ್ದ ಹಿರಿಯ ಸಂಗಾತಿಗಳ ಪರಿಚಯ, ಸಂದರ್ಶನ ನಿಮಗಾಗಿ

1949ರಲ್ಲಿ ಭಾರತ ಕಮ್ಯೂನಿಸ್ಟ್ ಪಕ್ಷದ ಮೇಲೆ ಕೇಂದ್ರ ಸರ್ಕಾರ ನಿಷೇಧ ಹೇರಿತ್ತು. ಪೊಲೀಸರು ಸಾವಿರಾರು ಮಂದಿ ಸಂಗಾತಿಗಳನ್ನು ಜೈಲಿಗೆ ತಳ್ಳಿದ್ದರು. ಸಾವಿರಾರು ಮಂದಿ ಭೂಗತರಾಗಿ ಕಾರ್ಯನಿರ್ವಹಿಸುತ್ತಿದ್ದಂತಹ ಸಂಧಿಗ್ಧ ಪರಿಸ್ಥಿತಿ. ಸರ್ಕಾರದ ನೀತಿಯನ್ನು ವಿರೋಧಿಸಿ 1947ರ ನವೆಂಬರ್ 6ರಂದು ಅಖಿಲ ಭಾರತ ಬಂದ್‌ಗೆ ಕರೆ ನೀಡಲಾಗಿತ್ತು. ಅದರ ಹಿಂದಿನ ರಾತ್ರಿ ಒಂದು ಗಂಟೆ ಸಮಯದಲ್ಲಿ ಗುಡಿಯಾತ್ತಮ್‌ನಲ್ಲಿ ಪೋಸ್ಟರ್, ಕರಪತ್ರ ವಿತರಿಸುವಾಗ ಪೊಲೀಸ್ ಬಂಧನಕ್ಕೆ ಒಳಗಾದ 17 ವರ್ಷದ ಯುವಕ ಪಿ.ಕೆ.ಸುಬ್ರಮಣಿಯಮ್ ಕರ್ನಾಟಕ ರಾಜ್ಯದ 19ನೇ ಸಮ್ಮೇಳನದಲ್ಲಿ ವಿಶೇಷ ಅತಿಥಿಯಾಗಿ ನಮ್ಮೊಂದಿಗಿದ್ದದು ಅವಿಸ್ಮರಣೀಯ ಗಳಿಗೆ.

ಬತ್ತದ ಅದಮ್ಯ ಉತ್ಸಾಹ, ಎದೆಯಲ್ಲಿ ಅಚಲ ಬದ್ಧತೆಯನ್ನು ತುಂಬಿಕೊಂಡಿರುವ ಪಿಕೆಎಸ್‌ರನ್ನು ಮಾತನಾಡಿಸಿದಾಗ ಅನುಭವ ಮತ್ತು ಹೋರಾಟಗಳ ನೆನಪಿನ ಸುರುಳಿ ಒಂದೊಂದಾಗಿ ಬಿಚ್ಚಿಕೊಳ್ಳುತ್ತಾ ಸಾಗಿ ನವಪೀಳಿಗೆಗೆ ವಿನೂತನ ಸ್ಫೂರ್ತಿ ನೀಡುತ್ತದೆ. ಕೆಲವು ಘಟನೆಗಳನ್ನು ಇಲ್ಲಿ ಸಂಕ್ಷಿಪ್ತವಾಗಿ ಬಿಚ್ಚಿಡಲಾಗಿದೆ.

ಗುಡಿಯಾತ್ತಮ್‌ನ ಎಲ್ಲ ಜಿಲ್ಲಾ ಸಮಿತಿ ಸದಸ್ಯರು ಜೈಲಿನಲ್ಲಿದ್ದರು. ಉಳಿದುಳಿದ ಸಂಗಾತಿಗಳು ಭೂಗತರಾಗಿ ಪಕ್ಷದ ಚಟುವಟಿಕೆಗಳಲ್ಲಿ ತೊಡಗಿಸಿ ಕೊಂಡಿದ್ದರು. ಬಂಧನಕ್ಕೊಳಗಾದ ದಿನ ಪಿಕೆಎಸ್ ಮತ್ತು ಉಳಿದಿಬ್ಬರು ಸಂಗಾತಿಗಳ ಮೇಲೆ ಪೊಲೀಸರು ಇಡೀ ರಾತ್ರಿ ಮಾರಣಾಂತಿಕವಾಗಿ ಹಲ್ಲೆ ನಡೆಸಿದರೂ ಭೂಗತರಾಗಿರುವ ಸಂಗಾತಿಗಳ ಕುರಿತು ತುಟಿ ಬಿಚ್ಚಿಲ್ಲ. ಇದು ಪತ್ರಿಕೆಗಳಲ್ಲಿ ಭಾರಿ ಸುದ್ದಿಯಾಯಿತು.



ಬೆಂಗಳೂರು ಜಿಲ್ಲಾ ಸಮ್ಮೇಳನದಲ್ಲಿ ಸನ್ಮಾನ. ಚಿತ್ರದಲ್ಲಿ ಕಾರ್ಯದರ್ಶಿ ಕೆ.ಪ್ರಕಾಶ್, ಅನಾರೋಗ್ಯವನ್ನು ಲೆಕ್ಕಿಸದೇ ತಪ್ಪದೇ ಜನಶಕ್ತಿಯನ್ನು ಓದುಗರಿಗೆ ತಲುಪಿಸುವ ಹಾಗೂ ಸನ್ಮಾನಿತ ಹಿರಿಯ ಒಡನಾಡಿ ಕೋದಂಡರಾಮ್.ಪಿ, ಪಿ.ಕೆ.ಎಸ್., ಬಯ್ಯಾರೆಡ್ಡಿ ಮತ್ತು ವಿ.ಜೆ.ಕೆ.

ಪಿಕೆಎಸ್‌ರ ಕಾರ್ಯಚಟುವಟಿಕೆ ಗಳನ್ನು ನೋಡಿದ ಜೈಲಿನಲ್ಲಿದ್ದ ಮುಖಂಡರು ಪಕ್ಷದ ಸದಸ್ಯತ್ವ ನೀಡಲು ಅಲ್ಲಿಯೇ ನಿರ್ಣಯ ಕೈಗೊಂಡರು.

ಆಗ ಕಮ್ಯೂನಿಸ್ಟರ ವಿರುದ್ಧ ಕಂಡಲ್ಲಿ ಗುಂಡಿಕ್ಕುವ ಆದೇಶವಿತ್ತು. ಗುಡಿಯಾತ್ತಮ್‌ನಿಂದ ತಲೆಮರೆಸಿಕೊಂಡು ಬೆಂಗಳೂರಿಗೆ ಆಗಮಿಸಿದ ಪಿಕೆಎಸ್ ಮೂರು ತಿಂಗಳು ಭೂಗತ ಜೀವನ ನಡೆಸಿದರು. ಪಕ್ಷದ ಮೇಲೆ ನಿಷೇಧ ಹಿಂಪಡೆದ ನಂತರ ತಮಿಳುನಾಡಿಗೆ ವಾಪಸಾದ ಪಿಕೆಎಸ್ ಮತ್ತೆ 1952ರಲ್ಲಿ ಬೆಂಗಳೂರಿಗೆ ಹಿಂದಿರುಗಿದರು.

ಬೆಂಗಳೂರಿನಲ್ಲಿ ಕಮ್ಯೂನಿಸ್ಟ್ ಪಕ್ಷಕ್ಕೆ ಅಡಿಪಾಯ ಹಾಕಿದವರಲ್ಲಿ ಪಿಕೆಎಸ್ ಅವರೂ ಒಬ್ಬರಾಗಿದ್ದಾರೆ. ಜವಳಿ ಮಿಲ್ ಕಾರ್ಮಿಕರ ಸಂಘಟನೆಯಲ್ಲಿ ತೊಡಗಿಸಿಕೊಂಡರು. ಕಾರ್ಖಾನೆಯೊಂದರಲ್ಲಿ ಕೆಲಸ ಮಾಡುತ್ತಿದ್ದ ಕರ್ನಾಟಕದ 'ಸಿಂಹಧ್ವನಿ' ಕಾಮ್ರೆಡ್ ಸೂರಿ ಉದ್ಯೋಗವನ್ನು ತ್ಯಜಿಸಿ ಚಳವಳಿಗೆ ಧುಮುಕಿದರು.


ಬಲಿಷ್ಠ ಚಳುವಳಿಯನ್ನು ಕಟ್ಟಿದರು. ಬೆಂಗಳೂರು ನಗರಸಭೆಗೆ ನಡೆದ ಮೊದಲ ಚುನಾವಣೆಯಲ್ಲಿ ಪಕ್ಷದ ನಾಲ್ವರು ಸದಸ್ಯರು ಆಯ್ಕೆಯಾಗಿದ್ದರು. 1964ರಲ್ಲಿ ಪಕ್ಷ ವಿಭಜನೆಯಾದಾಗ ಸಿಪಿಎಂ ಪಕ್ಷವನ್ನು ಆಯ್ಕೆ ಮಾಡಿಕೊಂಡ ಪಿಕೆಎಸ್, ಆರಂಭದಿಂದಲೂ ಪಕ್ಷದ ಮುಖವಾಣಿ ತೀಕದೀರ್ ಪತ್ರಿಕೆಯನ್ನು ಮಾರಾಟ ಮಾಡುತ್ತಿದ್ದರು. ಪಕ್ಷ ವಿಭಜನೆಯ ನಂತರ ಅಖಿಲ ಭಾರತ ನಾಯಕರಾದ ರಾಮಮೂರ್ತಿಯವರು ಬೆಂಗಳೂರಿಗೆ ಆಗಮಿಸಿ ಸಂಘಟನಾ ಸಮಿತಿಯನ್ನು ರಚಿಸಿದರು. ತೆನಾಲಿಯಲ್ಲಿ ನಡೆದ ಅಖಿಲ ಭಾರತ ಸಮಾವೇಶಕ್ಕೆ ಈ ಸಮಿತಿ ಕಾಮ್ರೆಡ್ ಸೂರಿಯವರನ್ನು ಪ್ರತಿನಿಧಿಯಾಗಿ ಆಯ್ಕೆ ಮಾಡಿತು.

ಪಿಕೆಎಸ್ ಗೋವಾ ವಿಮೋಚನಾ ಚಳುವಳಿಯಲ್ಲಿ ಸಕ್ರಿಯ ಪಾತ್ರ ವಹಿಸಿದ್ದರು. ರಾಜ್ಯದಿಂದ ಪಕ್ಷದ ಪರವಾಗಿ 14ಮಂದಿ ಪಾಲ್ಗೊಂಡಿದ್ದರು. 80 ವರ್ಷದ ಪಿಕೆಎಸ್, ಯುವ ಪೀಳಿಗೆ ಯಲ್ಲಿಯೂ ಬಿಸಿನೆತ್ತರುಕ್ಕಿಸುವ ಚೈತನ್ಯವನ್ನು ಹೊಂದಿದ್ದಾರೆ. ○

ಕಾಂ.ಸವರಿ ದಾಸ್

ರಾಜ್ಯದ ಹಿರಿಯ ಸ್ವಾತಂತ್ರ್ಯ ಹೋರಾಟಗಾರರೂ ಮತ್ತು ಕಾರ್ಮಿಕ ಮುಖಂಡರೂ ಆಗಿರುವ ಕಾಮ್ರೇಡ್ ಸವರಿ ದಾಸ್‌ರವರು ಜನಿಸಿದ್ದು ತಮಿಳುನಾಡಿನ ವೆಲ್ಲೂರು ಜಿಲ್ಲೆಯಲ್ಲಿ. ಅಂದಿನ ಅವಿಭಜಿತ ಸಿಪಿಐ ಪಕ್ಷದಲ್ಲಿದ್ದ ಸವರಿ ದಾಸ್‌ರವರು ವಿಭಜನೆಯ ನಂತರ ಸಿಪಿಐ(ಎಂ) ಪಕ್ಷಕ್ಕೆ ಸೇರಿ ಪಕ್ಷದ ರಾಜ್ಯ ಸಮಿತಿ ಸದಸ್ಯರೂ ಆಗಿದ್ದರು.

ಜನಶಕ್ತಿ: ನೀವು ಕಮ್ಯುನಿಸ್ಟ್ ಪಕ್ಷಕ್ಕೆ



ಪ್ರಭಾವಿತರಾಗಿ ಸೇರಿದ್ದು ಯಾವಾಗ?

ಸವರಿ ದಾಸ್: ಕೆಜಿಎಫ್ ಕಾರ್ಮಿಕ ಸಂಘಟನೆಯ ಮೂಲಕ 1943ರಲ್ಲಿ ಸಿಪಿಐ ಪಕ್ಷಕ್ಕೆ ಸೇರಿದೆ. ಕಾಂ: ಪಿ.ರಾಮಮೂರ್ತಿಯವರ ಸಂಪರ್ಕದಲ್ಲಿ ನಾವಿದ್ದೆವು ಮತ್ತು ಅವರ ಭಾಷಣಗಳಿಂದ ನಾವು ಪ್ರಭಾವಿತರಾಗಿದ್ದೆವು. ನಂತರದಲ್ಲಿ ಕೆಜಿಎಫ್ ಗಣಿ ಆಸ್ಪತ್ರೆ ಕಾರ್ಮಿಕ ಸಂಘಟನೆಯ ಕಾರ್ಯದರ್ಶಿಯಾಗಿ ಆಯ್ಕೆಯಾದೆ.

ಜನಶಕ್ತಿ: ಕರ್ನಾಟಕದಲ್ಲಿ ಕಾರ್ಮಿಕ ಸಂಘಟನೆಯ ಬೆಳವಣಿಗೆ ಹೇಗಾಯ್ತು?

ಸ.ದಾ.: ಹಳೆ ಮೈಸೂರು ಪ್ರಾಂತ್ಯದಲ್ಲಿ ಯಾವುದೇ ಕಾರ್ಮಿಕ ಸಂಘಟನೆಗಳು ಅಸ್ತಿತ್ವದಲ್ಲಿರಲಿಲ್ಲ. ಕಾರ್ಮಿಕ ಸಂಘಟನೆಗಳನ್ನು ಕಾನೂನುಬಾಹಿರವೆಂದು ಘೋಷಿಸಲಾಗಿತ್ತು. ರಾಜ್ಯದಲ್ಲಿ ಅಸ್ತಿತ್ವಕ್ಕೆ ಬಂದ ಮೊಟ್ಟ ಮೊದಲ ಕಾರ್ಮಿಕ ಸಂಘಟನೆಯೆಂದರೆ 1941ರಲ್ಲಿ ಆರಂಭವಾದ ಕೆಜಿಎಫ್ ಕಾರ್ಮಿಕ ಸಂಘಟನೆ. ನಂತರದಲ್ಲಿ ಬಿನ್ನಿ ಗಿರಣಿ ಕಾರ್ಮಿಕರ ಸಂಘಟನೆ, ಹೆಚ್.ಎ.ಎಲ್. ಕಾರ್ಮಿಕ ಸಂಘಟನೆ, ರಾಜ ಗಿರಣಿ ಕಾರ್ಮಿಕ ಸಂಘಟನೆ, ಮತ್ತು ಮಿನರ್ವ ಗಿರಣಿ ಕಾರ್ಮಿಕ ಸಂಘಟನೆಗಳು ಅಸ್ತಿತ್ವಕ್ಕೆ ಬಂದವು.

ಜ.ಶ.: ರಾಜ್ಯದಲ್ಲಿ ಪಕ್ಷದ ಬೆಳವಣಿಗೆ ಹೇಗಾಯ್ತು?

ಸದಾ: 1939ರಲ್ಲಿ ಹಳೆ ಮೈಸೂರು ಪ್ರಾಂತ್ಯದಲ್ಲಿ ಪಕ್ಷವನ್ನು ಬೆಳೆಸಲು ಮುಂಬೈನಿಂದ ಕಾ: ಎನ್.ಎಲ್.ಉಪಾಧ್ಯಾಯರವರನ್ನು ಕರ್ನಾಟಕಕ್ಕೆ ಕಳುಹಿಸಿಲಾಗಿತ್ತು. ಅವರು ಸಾರ್ವಜನಿಕ ಸಭೆಗಳು ಮತ್ತು ರ್‍ಯಾಲಿಗಳನ್ನು ನಡೆಸುತ್ತಾ ಕಾರ್ಮಿಕರನ್ನು ಮತ್ತು ದುಡಿಯುವ ಜನತೆಯನ್ನು ಸಂಘಟಿಸುತ್ತಿದ್ದರು. 1943ರಲ್ಲಿ ಸ್ಥಾಪಿತವಾದ ಸಿಪಿಐ ಪಕ್ಷಕ್ಕೆ ಅವರು ಕೂಡಿದಂತೆ ಗೋವಿಂದನ್, ವಾಸನ್, ನರಸಿಂಹ, ವಜ್ರವೇಲ್ ಶೆಟ್ಟಿ ಯವರನ್ನು ಒಳಗೊಂಡ 32 ಮಂದಿ ಸದಸ್ಯರು ಸ್ಥಾಪಕ ಸದಸ್ಯರಾದರು.

ನಾವೆಲ್ಲ ಸ್ವಾತಂತ್ರ್ಯ ಚಳುವಳಿಯಲ್ಲೂ ಪಾಲ್ಗೊಳ್ಳುತ್ತಾ ಕಾರ್ಮಿಕರನ್ನು ಸಂಘಟಿಸುತ್ತಿದ್ದೆವು. ಮೈಸೂರು ಅರಸರ ಆಳ್ವಿಕೆಯನ್ನು ಕೊನೆಗೊಳಿಸಿ

ಪುಟ 15ಕ್ಕೆ

ದೇಶಕ್ಕೆ ಒಳ್ಳೇದಾಗ್ಲಿ ಅಂತಾ ದುಡೀತಾ ಇದೀರಿ....

ಶ್ರೀ ರಂಗನಾಥ (80 ವರ್ಷ), ಶ್ರೀರಾಂಪುರದಲ್ಲಿ ವಾಸ. ಪಕ್ಷದ ಬಾವುಟ ಹಿಡಿದು ನಿಧಿ ಸಂಗ್ರಹ ಮಾಡುತ್ತಿದ್ದ ಸಂಗಾತಿಗಳ ಬಳಿ ಬಂದು ಇದು ಉಗ್ರಪ್ಪನ ಪಾರ್ಟಿನಾ? ಎಂದು ಕೇಳಿ ಬಸ್ ಸ್ಟಾಪ್‌ನಲ್ಲಿ ಇದ್ದ ತನ್ನ ಇತರ ಸ್ನೇಹಿತರಿಂದ ರೂ.80 ಸಂಗ್ರಹಿಸಿಕೊಟ್ಟರು.

ಬೋಂಡಾದ ಬಂಡವಾಳ ಸಮ್ಮೇಳನ

ಪ್ರತಿ ದಿನ ರೂ.100 ಬಂಡವಾಳದಿಂದ ಬೋಂಡಾ/ವಡೆ ಮಾಡಿ ಮಾರಿ ಜೀವಿಸುವ ತಿಮ್ಮಕ್ಕ ನಾವು ಜಾತಿ, ಗೀತಿ ನೋಡಲ್ಲ' ಅಂತ ತಿಳ್ದಾಗ ರೂ.25 ಕೊಟ್ಟರು.

ಮನೆಗೆಲಸದವ್ರು ನಮ್ಮ ಜೊತೆ

ಜಿಆರ್‌ಎಸ್ ಫ್ಯಾಂಟಸಿ ಪಾರ್ಕ್‌ನಲ್ಲಿ ಕೆಲಸ ಮಾಡುವ ಮಗನಿಂದ ಸಮ್ಮೇಳನದ ಸುದ್ದಿ ಕೇಳಿದ ಮನೆ ಕೆಲಸ ಮಾಡುವ ಲಕ್ಷ್ಮಮ್ಮ ರೂ.25 ಕೊಟ್ಟರು.

ಹೆಸರಾಂತ ಸಿಲ್ಕ್ ಸೀರೆ ವ್ಯಾಪಾರಿಗಳು, ಭೋಜಯ್ಯ, ಬಿ.ಎ. ಅಂಡ್ ಸನ್ಸ್‌ನ ವಂಶಸ್ಥರು, ಇಬ್ಬರು ಮಹಿಳೆಯರು, ಅವರ ಅಂಗಡಿ ಅವಸಾನದ ಅಂಚಿನಲ್ಲಿದ್ದರೂ ವಂತಿಗೆ ನೀಡಿದ್ದರು.

ನ್ಯಾಯಯುತ ಕೆಲಸಕ್ಕೆ ನ್ಯಾಯಬೆಲೆ:

ಅಂಗಡಿಯವ ನಂಜು ಮಳಿಗೆಯ ನ್ಯಾಯಬೆಲೆ ಅಂಗಡಿಯ ಶಿವಣ್ಣ ಮಧ್ಯರಾತ್ರಿ ಬಂದು ಕದ ತಟ್ಟಿದ್ದರೂ ಇಂಥದಕ್ಕೆ ಸಹಾಯ ಮಾಡ್ತೀನಿ ಅಂತ ಹೇಳ್ತಾ 25 ಕೆ.ಜಿ. ಅಕ್ಕಿ ಕೊಟ್ಟರು ಬೇಸರಿಸಲಿಲ್ಲ.

ಅಶೋಕ ರಸ್ತೆಯ ಆರ್‌ಎಸ್‌ಎಸ್ ನವರು ಹೇಳಿದ್ದು ಇದು. (ನಮ್ಮ ಹಿರಿಯ ಸಂಗಾತಿಗಳು ಬಾವುಟ ಹಿಡಿದು ಹೋಗ್ತಾ ಇದ್ದದ್ದು ನೋಡಿ) "ಈ ಕಮ್ಯೂನಿಸ್ಟರು ನೋಡಿ, ಹೇಗೆ ಹಿರೀರೂ ಕಿರಿಯವರು ಅಂತ ಭೇದ ಭಾವ ಇಲ್ದೇ ಎಲ್ಲಾ ಒಂದಾಗಿ ಕೆಲ್ಸ ಮಾಡ್ತಿರೋದು" ಮೆಚ್ಚಿ ಕೊಂಡದ್ದಲ್ಲದೆ ವಂತಿಗೆ ನೀಡಿದರು.

ಟಿಂಕರ್ ಕೆಲ್ಸಾ ಮಾಡೋವ್ರು, ಚಿಲ್ಲರೆ ಅಂಗಡಿಯವ್ರು, ಗೂಡಂಗಡಿಯವರು, ಜಾಸ್ತಿ ದುಡ್ಡು ಕೊಡಕ್ಕಾಗಲ್ಲ ಅಂತ ಅಲವತ್ತಕೊಂಡು, ತಮ್ಮಲ್ಲಿದ್ದ ರೂ.10-20 ಕೊಡ್ತಾ ಇದ್ದದ್ದು ಮರೆಲಾಗದ ಅನುಭವ.

ತಳ್ಳೋ ಗಾಡೀಲಿ ಹಣ್ಣು ಮಾರ್‍ತಿದ್ದ ಬಷೀರ್ ತನ್ನ ಗಲ್ಲಾ ಪೆಟ್ಟಿಗೆಯಿಂದ ಹಿಡಿ ಚಿಲ್ಲರೆ ಎತ್ಕೊಟ್ಟು ಇಷ್ಟೇ ನನ್ನ ಕೈಲಾಗೋದು ಎಂದಿದ್ದು ಒಂದು ವಿಶಿಷ್ಟ ಅನುಭವವೇ.

ದೇಶ ಮಾರೋದಕ್ಕೆ ಅಡ್ಡ ಬಂದದ್ದು ನಿಮ್ಮ ಪಕ್ಷ ಮತ್ತು ನಿಮ್ಮ ನಾಯ್ಕರು, ಭೇಷ್ ಎಂದು ಮೆಚ್ಚಿ ರೂ.150 ಕೊಟ್ಟ ಕೆ.ಆರ್.ಸರ್ಕಲ್‌ನ ವ್ಯಾಪಾರಿಯನ್ನು ಮರೆಯುವುದು ಹೇಗೆ?

ತಾವು ಸ್ವಯಂ ಸೇವಕರಾದ್ರೂ (ಆರ್‌ಎಸ್‌ಎಸ್) ನಿಮ್ಮ ಪಕ್ಷ ದೇಶಕ್ಕೆ ಒಳ್ಳೇದಾಗ್ಲಿ ಅಂತ ದುಡೀತಾ ಇದೆ ಅಂತ ಹೇಳಿ ದೇಣಿಗೆ ನೀಡಿದ ಘಟನೆ ನಡೆದದ್ದು ಮಕ್ಕಾಜಿ ಚೌಕದಲ್ಲಿ.

ಚಿಲ್ಲರೆ ವ್ಯಾಪಾರದಲ್ಲಿ ವಿದೇಶೀಯರನ್ನು ತಡೆಯೋಕೆ ಪ್ರಯತ್ನ ಮಾಡ್ತಾ ಇದೀರ ಅಂತ ಬೆನ್ನು ತಟ್ಟಿ ಕಾಣಿಕೆ ನೀಡಿದ ಮಾರವಾಡಿಗಳು, ಬಟ್ಟೆ ಅಂಗಡಿಯವ್ರು ಮತ್ತು ಚಿಲ್ಲರೆ ವ್ಯಾಪಾರಿಗಳು

ಪ್ರತಿ ಅಂಗಡೀಲೂ ಕನಿಷ್ಠ ರೂ.10. ಮುಸ್ಲಿಂ ಬಾಂಧವರೇ ಹೆಚ್ಚಾಗಿರೋ ಮಂಡಿ ಮಾರ್ಕೆಟ್ ಪ್ರದೇಶ. ಅವತ್ತು 1.5 ಗಂಟೇಲಿ ಆದ ಸಂಗ್ರಹ ರೂ.1,500.

ಪಕ್ಷದವರ ಕೇಸನ್ನು ಮುಫತ್ತಾಗಿ ನಡೆಸಿಕೊಡ್ತೀನಿ ಅಂತ ಹೇಳಿ ಡೊನೇಷನ್ ನೀಡಿದರು ಒಬ್ಬ ವಕೀಲ್ರು!

ಕೆ.ಆರ್.ಸರ್ಕಲ್‌ನ ಗೀತಾ ಬುಕ್ ಹೌಸ್‌ನವರು ಪಕ್ಷದ ಬಾವುಟ ನೋಡ್ತಿದ್ದಂಗೆ, ರೂ.250 ನೀಡಿ, ಪಕ್ಷದ ಕೆಲ್ಸಾನ ಹೊಗಳಿದರು.

ಕೃಷ್ಣಯ್ಯ ಚೆಟ್ಟಿ ಮತ್ತು ಸನ್ಸ್, ಒಡವೆ ವ್ಯಾಪಾರಿಗಳು, ಅಂಗಡಿಗ್ರಾಹಕರನ್ನು ಬಿಟ್ಟು ಬಂದು, ನಮ್ಮೊತೆ ಮಾತಾಡಿ, ರೂ.500 ಕೊಟ್ಟಿದ್ದು, ಕಾಂ.ಯೆಚೂರಿಯವರ ಭಾಷಣ ಕೇಳಕ್ಕೆ ಬಂದೇ ಬರ್ತೀನಿ ಎಂದಿದ್ದು ಇನ್ನೊಂದು ಬಗೆಯ ಅನುಭವ.

ಹಲವಾರು ಮಂದಿ ಪಾರ್ಟಿ ನಿಧಿ ನಿಮ್ಮಲ್ಲೆ ಇರ್ಬೇಕಾದ್ರೆ, ನಿಮಗೆ ಯಾಕೆ ಹಣ ಕೊಡಬೇಕು ಅಂದಾಗ, ಅದಕ್ಕೆ ಸರಿಯಾಗಿ ಉತ್ತರ ಕೊಟ್ಟು ಹಣ ಸಂಗ್ರಹಿಸಿದ ಕಾರ್ಯಕರ್ತರು ಜನರ ನಡುವೆ ಏನೆಲ್ಲಾ ಭಾವನೆ ಹರಡಿವೆ ಎಂಬುದರ ಅನುಭವದ ಸಾಕ್ಷಾತ್ಕಾರವಾಯಿತು.

ನಂದೀ ಗ್ರಾಮದ ವಿಶ್ಯ, ಬೆಲೆಯೇರಿಕೆ ಆಗ್ತಿರೋದು, ಕೇಂದ್ರ ಸರ್ಕಾರಕ್ಕೆ ನಾವು ಕೊಟ್ಟಿರೋ ಬೆಂಬಲ, ಎಲ್ಲಾ ವಿಶ್ಯ ಬಂತು. ನಿಧಿ ಸಂಗ್ರಹಣೆ ಮಾಡೋದು ಅಂದ್ರೆ ಕೇವಲ ನಿಧಿ ಸಂಗ್ರಹಣೆ ಅಷ್ಟೇ ಅಲ್ಲ ಅದೊಂದು ರಾಜಕೀಯ ಕೆಲಸ ಅಂತಾ ಅರ್ಥವಾಯ್ತು.

ಸಂಜೆ ಹೊತ್ತು, ಮೈಸೂರಿನ ಸುಮಾರು ಅಂಗ್ಡಿ ಮಾಲೀಕರು, ಕಾರ್ಮಿಕರಿಗೆ ಅಂಗ್ಡೀನ ಒಪ್ಪಿಸಿ ಹೋಗಿರ್ತಾರೆ ಅಂತ ಗೊತ್ತಾಯ್ತು, ನಿಧಿ ಸಂಗ್ರಹಣೆ ಮಾಡ್ಬೇಕಾದ್ರೆ.

ಪುಟ 15ಕ್ಕೆ

ಜನಶಕ್ತಿ ಕನ್ನಡ ವಾರಪತ್ರಿಕೆ

ಸೋವಿಯತ್ ಯೂನಿಯನ್‌ನಲ್ಲಿ ಶಿಕ್ಷಣ ವಿಶ್ವದಲ್ಲೇ ಮಾದರಿಯಾಗಿದ್ದ ವ್ಯವಸ್ಥೆ

ಬಿ.ರಾಜಶೇಖರಮೂರ್ತಿ


ನಾಗರೀಕತೆಯ ವಿಕಾಸದಲ್ಲಿ 'ಮಾನವೀಯ' ವಾದ ಒಂದು ಹೊಸ ಘಟ್ಟದ ಆರಂಭ ಬಿಂದುವಾದ ಅಕ್ಟೋಬರ್ ಕ್ರಾಂತಿಗೆ 90 ವರ್ಷ ಸಂದಿರುವ ವರ್ಷಾಚರಣೆಯ ಸಂದರ್ಭದಲ್ಲಿ ಶಿಕ್ಷಣ ಕ್ಷೇತ್ರದಲ್ಲಿ ಸಾಧಿಸಿದ್ದ ಶಿಕ್ಷಣ ಕ್ರಾಂತಿ ಕುರಿತು, ಸಂದಿಗ್ಧಗೊಂಡಿರುವ ನಮ್ಮ ಶಿಕ್ಷಣ ಪರಿಸ್ಥಿತಿ ಕುರಿತು ತಿಳಿಯುವುದು ನಮ್ಮೆಲ್ಲರ ಜವಾಬ್ದಾರಿಯಾಗಿದೆ.

1917ರಲ್ಲಿ ಪ್ರಥಮ ಸಮಾಜವಾದಿ ನಾಡಲ್ಲಿ ಕ್ರಾಂತಿ ಕಂಡ ತಕ್ಷಣದಲ್ಲಿಯೇ ಉಚಿತ ಮತ್ತು ಕಡ್ಡಾಯ ಶಿಕ್ಷಣ ಪದ್ಧತಿ ಜಾರಿಗೆ ಬಂತು. 1918 ರಷ್ಯಾದಲ್ಲಿ ಖಾಸಗಿ ಮತ್ತು ಧಾರ್ಮಿಕ ಮಿಷನ್‌ಗಳು ನಡೆಸುತ್ತಿದ್ದ ಎಲ್ಲಾ ಶಾಲಾ-ಕಾಲೇಜುಗಳನ್ನು ರಾಷ್ಟ್ರೀಕರಣಗೊಳಿಸಲಾಯಿತು. ಖಾಸಗಿ ಮತ್ತು ಸರ್ಕಾರಿ ಶಿಕ್ಷಣ-ಉಪನ್ಯಾಸಕರ ಮಧ್ಯವಿದ್ದ ತಾರತಮ್ಯವನ್ನು ಹೋಗಲಾಡಿಸಿ ವ್ಯವಸ್ಥೆಯ ಎಲ್ಲರಿಗೂ ಸಮಾನ ವೇತನ ನೀಡಲಾರಂಭಿಸಲಾಯಿತು. ಯಾವುದೇ ರೀತಿಯ ಪ್ರವೇಶ ಪರೀಕ್ಷೆಗಳಿಲ್ಲದೆ ಎಲ್ಲರಿಗೂ ಸಮಾನ ಅವಕಾಶವನ್ನು, ವಿಶ್ವ ವಿದ್ಯಾಲಯಗಳಲ್ಲಿ ಉನ್ನತ ಶಿಕ್ಷಣಕ್ಕೆ ಆದ್ಯತೆಯನ್ನು ನೀಡಲಾಯಿತು. ಕಾಂ: ಲೆನಿನ್‌ರವರು ಹೇಳುವಂತೆ "ಯಾವುದೇ ಒಂದು ದೇಶ ಸರ್ವತೋಮುಖ ಅಭಿವೃದ್ಧಿ ಕಾಣಬೇಕಾದರೆ ಮೊದಲಿಗೆ ಎಲ್ಲಾ ಯುವಜನರಿಗೆ ಶಿಕ್ಷಣ ನೀಡಬೇಕು". ಇದು ಸಮಾಜವಾದಿ ಧೋರಣೆಯಿಂದ ಮಾತ್ರ ಸಾಧ್ಯ. ಹಿಂದೆಂದೂ ಕಂಡರಿಯದಿದ್ದ ಮಾದರಿಯಲ್ಲಿ ಸೋವಿಯತ್‌ನಲ್ಲಿ ಬೆಳವಣಿಗೆಯ ಪೂರಕವಾದ ಅಡಿಪಾಯ ಶಿಕ್ಷಣ ಜಾರಿಗೆ ತಂದಿದ್ದರು. ಹೀಗಾಗಿಯೇ ಸಮಾಜವಾದಿ ರಾಷ್ಟ್ರದ ಸರ್ಕಾರದಲ್ಲಿ ಶಿಕ್ಷಣ ಕ್ಷೇತ್ರಕ್ಕೆ ಆದ್ಯತೆ ನೀಡುವುದರ ಜೊತೆಗೆ ವ್ಯಾಪಕ ವಿಸ್ತರಣೆ ಕೂಡ ಮಾಡಲಾಗಿತ್ತು.

ತ್ವರಿತ ಪ್ರಗತಿ

1934ರ ಹೊತ್ತಿಗೆ ಸಾರ್ವತ್ರಿಕವಾಗಿ ಪ್ರಾಥಮಿಕ ನೀಡುವಲ್ಲಿ ಯಶಸ್ಸು ಕಂಡರೆ, 1975 ರಷ್ಟರಲ್ಲಿ ಪದವಿ ಪೂರ್ವ ಮಟ್ಟದ ಶಿಕ್ಷಣ ನೀಡುವಲ್ಲಿ ಸಾರ್ವತ್ರಿಕವಾಗಿ ಯಶಸ್ಸನ್ನು ಕಂಡಿತ್ತು. 1970ರಷ್ಟರಲ್ಲಿ ಸಂಪೂರ್ಣವಾಗಿ ಅನಕ್ಷರಸ್ಥರೇ ಇಲ್ಲದಂತಹ ರಾಷ್ಟ್ರವಾಗಿ ಸೋವಿಯತ್ ರಷ್ಯಾ ಘೋಷಿಸಲ್ಪಟ್ಟಿತು. ಇಡೀ ವಿಶ್ವದಲ್ಲಿ 1975ರಷ್ಟರಲ್ಲಿ ಸೋವಿಯತ್ ಜನತೆ ಶೇ.72 ರಷ್ಟು ಪ್ರೌಢಶಿಕ್ಷಣದ ಹಂತ ತಲುಪಿದ್ದರು. ಇಂತಹ ಮಹತ್ತರ ಸಾಧನೆಯ ಬಗ್ಗೆ ಇದೇ ಸಂದರ್ಭದಲ್ಲಿ ಬಂಡವಾಳಶಾಹಿ ವ್ಯವಸ್ಥೆಯಲ್ಲಿ ಮುಂಚೂಣಿಯಲ್ಲಿದ್ದ ರಾಷ್ಟ್ರಗಳಲ್ಲಿ ಶಿಕ್ಷಣದ ಪರಿಸ್ಥಿತಿಯನ್ನು ಅವಲೋಕಿಸಿದಾಗ ವಾಸ್ತವತೆ ಅರ್ಥವಾಗುತ್ತದೆ. ಯುನೆಸ್ಕೋ ದ ಅಂಕಿ ಅಂಶಗಳ ಪ್ರಕಾರ ನೋಡಿದಾಗಲೇ ಅಮೇರಿಕಾದಲ್ಲಿ 1970 ರಷ್ಟರಲ್ಲಿ ಅನಕ್ಷರಸ್ಥರು ಶೇ.25 ಮತ್ತು ಫ್ರಾನ್ಸ್‌ನಲ್ಲಿ ಶೇ.3.6 ಇದ್ದರು. ಅಮೇರಿಕಾ ದೇಶದಲ್ಲಿ ಪ್ರಾಥಮಿಕ ಶಿಕ್ಷಣ ಕಡ್ಡಾಯಗೊಳಿಸಲು ತೀರ್ಮಾನಿಸಿದ್ದು 1900, ಮತ್ತು ಬ್ರಿಟನ್‌ನಲ್ಲಿ 1880 ಹಾಗೂ ಫ್ರಾನ್ಸ್‌ನಲ್ಲಿ 1882. ಇದೇ ತೋರಿಸುತ್ತದೆ ಬಂಡವಾಳಶಾಹಿ ವ್ಯವಸ್ಥೆಯಲ್ಲಿರುವ ರಾಷ್ಟ್ರಗಳಲ್ಲಿ 100 ವರ್ಷಗಳ ಹತ್ತಿರ ಸಂದಿದ್ದರೂ ಸಂಪೂರ್ಣ ವಾಗಿ ಕನಿಷ್ಠ ಪ್ರಾಥಮಿಕ ಶಿಕ್ಷಣವನ್ನು ಕಡ್ಡಾಯವಾಗಿ ಜಾರಿ ಮಾಡಲು ಆಗಲಿಲ್ಲ. ಆದರೆ ಯುಎಸ್‌ಎಸ್‌ಆರ್ ನಲ್ಲಿ ಕೇವಲ 50 ವರ್ಷಗಳಲ್ಲಿ ಅನಕ್ಷರತೆ ನಿರ್ಮೂಲ ಮಾಡಿ ಸಾಧಿಸಿ ತೋರಿಸಲಾಯಿತು. ಶಿಕ್ಷಣ ಕ್ಷೇತ್ರದಲ್ಲಿ ನಮ್ಮ ದೇಶವಂತೂ ಹೀನಾಯ ಸ್ಥಿತಿಯಲ್ಲಿದೆ. 'ಶಿಕ್ಷಣ ಹಕ್ಕು ಕಾಯಿದೆ' ಸ್ವಾತಂತ್ರ್ಯಗಳಿಸಿ 60 ವರ್ಷ ಕಳೆದರೂ ಪಾರ್ಲಿಮೆಂಟ್‌ನಿಂದ ಹೊರಬಂದಿಲ್ಲ.

ಇನ್ನೊಂದು ಪ್ರಮುಖ ಅಂಶವೆಂದರೆ ಯುಎಸ್‌ಎಸ್‌ಆರ್‌ನಲ್ಲಿ ಇಡೀ ಸಮಾಜದ ಒಟ್ಟು ಅಭಿವೃದ್ಧಿಗೆ ಪೂರಕವಾದ ಶಿಕ್ಷಣ ವ್ಯವಸ್ಥೆಯನ್ನು ಜಾರಿಗೆ ತಂದರೆ, ಬಂಡವಾಳಶಾಹಿ ರಾಷ್ಟ್ರಗಳಲ್ಲಿ ಕೇವಲ ಬಂಡವಾಳಶಾಹಿ ಕಂಪನಿಗಳಿಗೆ ಲಾಭ ತರಲು ಕೂಲಿಯಾಳು ಗಳಲ್ಲಿ (ಮಾನವ ಯಂತ್ರಗಳು) ಉತ್ಪಾದನಾ ಸಾಮರ್ಥ್ಯವನ್ನು ಮಾತ್ರ ಹೆಚ್ಚಿಸಿಕೊಳ್ಳುವ ಶಿಕ್ಷಣ ವ್ಯವಸ್ಥೆಯನ್ನು ಜಾರಿಗೆ ತರಲಾಗುತ್ತಿತ್ತು. ಇಂದಿಗೂ ನಮ್ಮ ದೇಶದ ಶಿಕ್ಷಣ ಪರಿಸ್ಥಿತಿಯೂ ಹೀಗೆ ಇದೆ. ಶಿಕ್ಷಣ ಎಂಬುದು ಮಾನವನ ಸಮಸ್ಯೆಗಳ ಪರಿಹಾರದ ಒಂದು ಸಾಧನವಾಗಲು ಸಾಧ್ಯ. ಇದನ್ನು ಮಾನವ ಅಭಿವೃದ್ಧಿಗೆ ಬಳಸಿದ ಸೋವಿಯತ್ ರಾಷ್ಟ್ರದ ಸರ್ಕಾರ ತನ್ನ ಒಟ್ಟು ಬಜೆಟ್‌ನಲ್ಲಿ ಏಳನೇ ಒಂದು ಭಾಗದಷ್ಟು ಹಣವನ್ನು ಸಾಮಾನ್ಯ ಶಿಕ್ಷಣಕ್ಕೆ ಬಳಸುತ್ತಿದ್ದರು. ಸೋವಿಯತ್ ರಾಷ್ಟ್ರದ ರಾಷ್ಟ್ರೀಯ ಉತ್ಪನ್ನದಲ್ಲಿ ಶೇ.7 ರಷ್ಟನ್ನು ಶಿಕ್ಷಣಕ್ಕೆ ಮೀಸಲಿಡಲಾಗಿತ್ತು. ಪಾಶ್ಚಿಮಾತ್ಯ ರಾಷ್ಟ್ರಗಳಲ್ಲೂ ಕೂಡ ಕೇವಲ ಶೇ.3 ರಿಂದ ಶೇ.5 ರಷ್ಟು ಮಾತ್ರ ಶಿಕ್ಷಣಕ್ಕೆ ವಿನಿಯೋಗಿಸಲಾಗಿತ್ತು. 1970ರಲ್ಲಿ ನಮ್ಮ ದೇಶದಲ್ಲಿ ಜಿಡಿಪಿಯಲ್ಲಿ ಶೇ2.11 ರಷ್ಟು ವಿನಿಯೋಗಿಸಲಾಗುತ್ತಿತ್ತು. ಈಗ ಕೇವಲ ಜಿಡಿಪಿಯ ಶೇ.3.68 ಮಾತ್ರ ವಿನಿಯೋಗಿಸಲಾಗುತ್ತಿದೆ.



ಸಾರ್ವತ್ರಿಕ ಶಿಕ್ಷಣ ಯುಎಸ್‌ಎಸ್‌ಆರ್ ನಲ್ಲಿ ಜನತೆಯ ಜೀವನದ ಭಾಗವಾಗಿತ್ತು. ಜೊತೆಗೆ ಜೀವನಸ್ಥಿತಿಗೆ ಪೂರಕವಾಗಿತ್ತು. ಶಿಕ್ಷಣ ಕ್ಷೇತ್ರವೂ ಬೋಲ್ಷವಿಕರ ಆದ್ಯತೆಯಾಗಿತ್ತು. ಕಾಂ: ಲೆನಿನ್ 'ಜನತೆಯ ಜೀವನ' ಸ್ಥಿತಿಗತಿಯನ್ನು ರಾಜಕೀಯ ನಿರ್ಧರಿಸುವುದರಿಂದ ಶಿಕ್ಷಣದಲ್ಲಿ ರಾಜಕೀಯ ರಹಿತ ಶಿಕ್ಷಣ ಬಂಡವಾಳಶಾಹಿ ವ್ಯವಸ್ಥೆಗೆ ನಾಂದಿಯಾಗುತ್ತದೆಯೇ ಹೊರತು ಜನತೆಯ ಬಿಡುಗಡೆಗಲ್ಲ, ಆದ್ದರಿಂದ ಶಿಕ್ಷಣದಲ್ಲಿ ರಾಜಕೀಯ ಶಿಕ್ಷಣ ಕಲಿಯುವುದು ಅತ್ಯಗತ್ಯ' ಎಂದು ಹೇಳಿದ್ದರು. ಈ ಮಾತು ನಮ್ಮ ಸಂದರ್ಭಕ್ಕೂ ಅನ್ವಯವಾಗುತ್ತದೆ.

ಯುಎಸ್‌ಎಸ್‌ಆರ್‌ನಲ್ಲಿ ವಿದ್ಯಾರ್ಥಿ ಗಳನ್ನು ಶಾಲೆಗಳಿಗೆ ಸೆಳೆಯಲು ಪ್ರಾಥಮಿಕ ಶಿಕ್ಷಣದಿಂದ ಉನ್ನತ ಶಿಕ್ಷಣದವರೆಗೂ ಸಂಪೂರ್ಣವಾಗಿ ಉಚಿತವಾಗಿ ನೀಡಲಾಗುತ್ತಿತ್ತು. ಜೊತೆಗೆ ಪೌಷ್ಠಿಕ ಆಹಾರ ಒದಗಿಸುವುದು. ಉಚಿತವಾಗಿ ಹಾಸ್ಟೆಲ್ ವ್ಯವಸ್ಥೆ ಜೊತೆಗೆ ಉಚಿತವಾಗಿ ಸಾರಿಗೆ ವ್ಯವಸ್ಥೆ ನೀಡುವ ಜೊತೆಗೆ ಹೆಚ್ಚು ಕಡಿಮೆ ಶೇ.70 ರಷ್ಟು ವಿದ್ಯಾರ್ಥಿಗಳು ವಿದ್ಯಾರ್ಥಿ ವೇತನ ಪಡೆಯುತ್ತಿದ್ದರು.

> ಬಂಡವಾಳಶಾಹಿ ವ್ಯವಸ್ಥೆಯಲ್ಲಿ ಎಲ್ಲರಿಗೂ ಶಿಕ್ಷಣ ಎಂಬ ಮಾತುಗಳು ಆಗೀಗ ಕೇಳಿ ಬಂದರೂ ಸಹ ಅದು ನೈಜ ಕಾಳಜಿ ಎಂಬುದಕ್ಕೆ ಇತಿಹಾಸದಲ್ಲಿ ಸಾಕ್ಷ್ಯಾಧಾರಗಳಿಲ್ಲ. 'ಎಲ್ಲರೂ ಕುದುರೆ ಸವಾರಿ ಮಾಡುವವರಾದರೆ ಲದ್ದಿ ಎತ್ತುವವರು ಯಾರು?' ಎಂಬ ಧೋರಣೆಯು ಬಂಡವಾಳಶಾಹಿ ವ್ಯವಸ್ಥೆಯಲ್ಲಿ ಅಂತರ್ಗತವಾಗಿರುತ್ತದೆ. ಸಮಾಜವಾದಿ ಸಿದ್ಧಾಂತ, ವ್ಯವಸ್ಥೆಯು ಇದಕ್ಕೆ ಸಂಪೂರ್ಣ ತದ್ವಿರುದ್ಧವಾದದ್ದು.

ಮಾತೃಭಾಷೆಯಲ್ಲಿ...

ವೈಜ್ಞಾನಿಕ-ಪ್ರಗತಿಪರ-ವೃತ್ತಿಪರ-ಶಿಕ್ಷಣ ವ್ಯವಸ್ಥೆಯಲ್ಲಿ ಉನ್ನತ ಶಿಕ್ಷಣದವರೆಗೂ ಮಾತೃಭಾಷೆಯಲ್ಲಿ ಉಪನ್ಯಾಸ ನೀಡಲಾಗುತ್ತಿತ್ತು. (ಸೋವಿಯತ್‌ನಲ್ಲಿ ಉನ್ನತ ಶಿಕ್ಷಣವನ್ನು ಸುಮಾರು 70 ಭಾಷೆಗಳಲ್ಲಿ ನೀಡಲಾಗುತ್ತಿತ್ತು). ಜೊತೆಗೆ ಎಲ್ಲಾ ಸಮಾನ ಗುಣಮಟ್ಟದ ಶಿಕ್ಷಣ ನೀಡುವ ಜೊತೆಗೆ ಅಗತ್ಯಬಿದ್ದರೆ ವಿದ್ಯಾರ್ಥಿಗಳ ಮನೆ-ಮನೆಗಳಲ್ಲಿಯೇ ಶಿಕ್ಷಣ ನೀಡುವ ವ್ಯವಸ್ಥೆಗೆ ಆದ್ಯತೆ ನೀಡಲಾಗಿತ್ತು.

ನಮ್ಮ ದೇಶದ ಶಿಕ್ಷಣದ ಪರಿಸ್ಥಿತಿಗೆ ಹೋಲಿಸಿದಾಗ ಕೇವಲ ಶ್ರೀಮಂತ ವರ್ಗದ ವಿದ್ಯಾರ್ಥಿಗಳಿಗೆ ಮಾತ್ರ 'ಗುಣಮಟ್ಟ' ದ ಶಿಕ್ಷಣ ಇಂದಿಗೂ ದೊರೆಯುತ್ತಿರುವುದು. ಇಂದಿಗೂ ಪರಿಶಿಷ್ಟ ಜಾತಿ ಮತ್ತು ಪಂಗಡ ಹಾಗೂ ಹಿಂದುಳಿದ ವರ್ಗದ ವಿದ್ಯಾರ್ಥಿ ಸಮುದಾಯ ತಾರತಮ್ಯಕ್ಕೆ ಒಳಗಾಗಿದೆ. ಸಮರ್ಪಕವಾಗಿ ಶಿಕ್ಷಕ-ಉಪನ್ಯಾಸಕರಿಲ್ಲ, ಕನಿಷ್ಠ ಶೈಕ್ಷಣಿಕ ಸೌಲಭ್ಯಗಳಿಲ್ಲ ಇಂತಹ ಪರಿಸ್ಥಿತಿಯಲ್ಲಿಯೇ ಹಿಂದುಳಿದಿರುವ ವಿದ್ಯಾರ್ಥಿ ಸಮುದಾಯ ಶಿಕ್ಷಣ ಪಡೆಯದಂತಹ ಪರಿಸ್ಥಿತಿಗೆ ದಬ್ಬಲ್ಪಟ್ಟಿದ್ದಾರೆ. ಈ ಕಾರಣದಿಂದಲೇ ದೇಶದ ಅಪಾರ ಮಾನವ ಸಂಪನ್ಮೂಲ ವ್ಯರ್ಥವಾಗಿ ಹೋಗುತ್ತಿರುವುದು ಯುಎಸ್‌ಎಸ್‌ಆರ್ ನಲ್ಲಿ ವಿಜ್ಞಾನ, ತಂತ್ರಜ್ಞಾನ, ಕರಕುಶಲತೆ, ಸಾಂಸ್ಕೃತಿಕ, ಜನಪದ ಮುಂತಾದ ಎಲ್ಲಾ ವಿಚಾರಗಳಿಗೆ ಆದ್ಯತೆ ನೀಡಿ ಜನಾಭಿವೃದ್ಧಿಗೆ ಪೂರಕ ಶಿಕ್ಷಣ ನೀಡಿದ್ದರೆ ನಮ್ಮ ದೇಶದಲ್ಲಿ ಜೈಲುಗಳಲ್ಲಿ ಬಂಧಿಸುವ ಹಾಗೆ ಮಕ್ಕಳನ್ನು ಶಾಲಾ-ಕಾಲೇಜುಗಳಲ್ಲಿ ಬಂಧಿಸುವುದು", ಶಿಕ್ಷೆ ನೀಡುವುದು, ಹೋಮ್ ವರ್ಕ್‌ಗಳಲ್ಲಿ ಮುಳುಗಿಸುವುದು. ಪರೀಕ್ಷೆ ಎಂಬ ಭೂತಗಳಿಂದ ಹೆದರಿ ವಿದ್ಯಾರ್ಥಿಗಳು ಆತ್ಮಹತ್ಯೆ ಮಾಡಿಕೊಳ್ಳುವಂತೆ ಮಾಡುವುದು ಒಟ್ಟಾರೆ ಅವಮಾನವೀಯ ವ್ಯವಸ್ಥೆಗೆ ಪೂರಕವಾದ ಶಿಕ್ಷಣ ಪದ್ಧತಿ ನಮ್ಮದಾಗಿದೆ.

ವೈಜ್ಞಾನಿಕ ಶಿಕ್ಷಣ ಪದ್ಧತಿ

ಸೋವಿಯತ್ ಸಮಾಜವಾದಿ ರಾಷ್ಟ್ರದಲ್ಲಿ ಕಡ್ಡಾಯವಾಗಿ ಹೋಮ್ ವರ್ಕ್‌ನ್ನು ನಿಷೇಧಿಸಲಾಗಿತ್ತು ಹಾಗೂ ಸಮವಸ್ತ್ರ ಮತ್ತು ಪರೀಕ್ಷೆಗಳನ್ನು ನಿಷೇಧಿಸಲಾಗಿತ್ತು. ಪ್ರತಿ ದಿವಸ 15-20 ನಿಮಿಷ ದಿನಪತ್ರಿಕೆಗಳನ್ನು ಓದಿಸಲಾಗುತ್ತಿತ್ತು. ಪ್ರಸಕ್ತ ದೇಶದ ವಿಶ್ವದ ವಿದ್ಯಾಮಾನಗಳ ಬಗ್ಗೆ ಚರ್ಚಿಸಲಾಗುತ್ತಿತ್ತು. ಶಾಲೆಗಳನ್ನು ಶಾಲೆಯ ಆಡಳಿತ ಮಂಡಳಿಗಳು ನಡೆಸುತ್ತಿರಲಿಲ್ಲ, ಬದಲಾಗಿ ಶಾಲೆಯ ಶಿಕ್ಷಕರು-ಬೋಧಕೇತರ ಸಿಬ್ಬಂದಿ, ವಿದ್ಯಾರ್ಥಿ ಮುಖಂಡರು-ಪೋಷಕರೆಲ್ಲಾ ಒಟ್ಟಾಗಿ ಪ್ರಜಾಸತ್ತಾತ್ಮಕವಾಗಿ ತೀರ್ಮಾನಿಸುತ್ತಿದ್ದರು.

"ಸ್ಟೂಡೆಂಟ್ ಆಫ್ ಸೋವಿಯತ್ ಯೂನಿಯನ್" ಉನ್ನತ ಶಿಕ್ಷಣದ ಆಡಳಿತ ವ್ಯವಸ್ಥೆಯಲ್ಲಿ ಭಾಗಿಯಾಗಿರು ತ್ತಿತ್ತು. ವಿದ್ಯಾರ್ಥಿ ಪ್ರತಿನಿಧಿಗಳು ಉನ್ನತ ಶಿಕ್ಷಣ ಶೈಕ್ಷಣಿಕ ಮಂಡಳಿಗಳಲ್ಲಿ ಭಾಗ ವಾಗಿರುತ್ತಿದ್ದರು. ಅದೇ ರೀತಿಯಲ್ಲಿ ವಿದ್ಯಾರ್ಥಿಗಳ ಶೈಕ್ಷಣಿಕ ಆಯೋಗದಿಂದ ವಿದ್ಯಾರ್ಥಿಗಳಿಗೆ ವಿದ್ಯಾರ್ಥಿ ವೇತನ ಇನ್ನಿತರ ಶೈಕ್ಷಣಿಕ ಸಮಸ್ಯೆಗಳ ಪರಿಹಾರಕ್ಕಾಗಿ ಶಿಫಾರಸ್ಸುಗಳನ್ನು ಮಾಡಿಸಲಾಗುತ್ತಿತ್ತು. ಇದರಿಂದಾಗಿಯೇ ವೈಜ್ಞಾನಿಕ ಮತ್ತು ಪ್ರಜಾಸತ್ತಾತ್ಮಕವಾದ ಉನ್ನತ ಶಿಕ್ಷಣ ಹೆಸರುವಾಸಿಯಾಗಿ ವಿಶ್ವದಲ್ಲೇ ಖ್ಯಾತವಾಗಿತ್ತು.

ಇಂತಹ ಶಿಕ್ಷಣ ವ್ಯವಸ್ಥೆಗೆ ನಾಂದಿ ಹಾಡಿ ಸೋವಿಯತ್ ನಾಡಿನ ಜನಕ್ಕೆಲ್ಲಾ ನೆಮ್ಮದಿಯ ದಿನಗಳನ್ನು ಕಾಣಿಸಿದ್ದ ವಿಶ್ವದಲ್ಲೇ ಶಿಕ್ಷಣ-ವಿಜ್ಞಾನ-ಕೃಷಿ-ಕೈಗಾರಿಕೆಯಲ್ಲಿ ಕ್ರಾಂತಿ ಕಂಡು 'ಸ್ವರ್ಗ' ಬೇರೆಲ್ಲೂ ಇಲ್ಲ ಭೂಮಿಯ ಮೇಲೆಯೇ ಸೃಷ್ಟಿಸಬೇಕು, ಸೃಷ್ಟಿಸಬಹುದೆಂಬುದನ್ನು ಸಾಧಿಸಿದ್ದ ಸೋವಿಯತ್ ಸಮಾಜವಾದಿ ರಾಷ್ಟ್ರದ ಅಕ್ಟೋಬರ್ ಕ್ರಾಂತಿಯ ಬಗ್ಗೆ ಇತಿಹಾಸದ ಪುಟಗಳನ್ನು ಓದಬೇಕಿದೆ. ಅದರಿಂದ ಪಾಠ ಕಲಿಯಬೇಕಿದೆ ಮತ್ತು ಸ್ಫೂರ್ತಿ ಪಡೆಯಬೇಕಾಗಿದೆ.

(ಆಧಾರ: ಪೀಪಲ್ಸ್ ಡೆಮಾಕ್ರಸಿ)

ಸೌಹಾರ್ದತೆ ಸಾರುವ ಮೊಹರಂ

ಪುಟ 5 ರಿಂದ

ಸಮಾಗಮಗೊಳ್ಳುತ್ತವೆ. ಇಲ್ಲಿ ಹಿಂದೂ-ಮುಸ್ಲಿಂ ಬೇಧಭಾವವಿಲ್ಲದೇ, ದೇವರನ್ನು ಹೊತ್ತ ಎಲ್ಲರೂ ಪರಸ್ಪರ ಒಬ್ಬರನ್ನೊಬ್ಬರು ಅಭಿನಂದಿಸುತ್ತಾರೆ. ಈ ಸೌಹಾರ್ದದ ದೃಶ್ಯವನ್ನು ನೋಡಲು ಸಾವಿರಾರು ಜನರು ಸುತ್ತಲೂ ನೆರೆದಿರುತ್ತಾರೆ.

ಇಲ್ಲಿ ಇನ್ನೊಂದು ವಿಶೇಷವೆಂದರೆ, ಲಂಬಾಣಿ,ಗೊಲ್ಲ ಜನಾಂಗದ ಯುವಕರು ತಮ್ಮ ಕೋಲಾಟವನ್ನು ಪ್ರದರ್ಶಿಸುತ್ತಾರೆ. ಎರಡೂ ಗುಂಪಿನ ನಡುವೆ ಆರೋಗ್ಯಕರ ಪೈಪೋಟಿ ನಡೆದಿರುತ್ತದೆ. ತಮ್ಮ-ತಮ್ಮ ಕೋಲಾಟದ ಕಲೆಯನ್ನು ನೆರೆದ ಹಿಂದೂ-ಮುಸ್ಲಿಂ ಬಾಂಧವರ ಮುಂದೆ ಪ್ರದರ್ಶನ ಮಾಡುತ್ತಾರೆ.

ಈ ಒಂದು ಮಹತ್ವದ ಪರಸ್ಪರ ಭೇಟಿ ರಾಜವಾಡೆಯ ಅಂಗಳದಲ್ಲಿ ಮುಗಿದ ಮೇಲೆ ತಮ್ಮ-ತಮ್ಮ ಮಸೀದಿಗಳಿಗೆ ದೇವರನ್ನು ತೆಗೆದುಕೊಂಡು ಹೋಗುತ್ತಾರೆ.

ಸಾಯಂಕಾಲ ನಗರದ ಮುಖ್ಯ ಬೀದಿಗಳಲ್ಲಿ ಮೆರವಣಿಗೆ ಮಾಡುವ ಮೂಲಕ ಮತ್ತು ಚೋಂಗೆಯ(ಗೋಧಿ ಹಿಟ್ಟಿನಿಂದ ತಯಾರಿಸಿದ ಸಿಹಿ ತಿನಿಸು) ರುಚಿಯನ್ನು ಸವಿಯುವ ಮೂಲಕ ಮುಕ್ತಾಯಗೊಳಿಸುತ್ತಾರೆ.

ಹಿಂದೂ-ಮುಸ್ಲಿಂ ಭಾವೈಕತೆಯನ್ನು ಸಾರುವ ಈ ಮೊಹರಂ ಹಬ್ಬ ಜನರ ಸೌಹಾರ್ದ ಪರಂಪರೆಗೆ ಸಾಕ್ಷಿಯಾಗಿ ನಿಲ್ಲುತ್ತದೆ.

ಜಗದಗಲ


ಶರತ್‌ಚಂದ್ರ

ಗ್ವಾಟೆಮಾಲಾದಲ್ಲಿ ಗರೀಬಿ ಹಟಾವ್ರೋಗೆ ಕ್ರಮಗಳು


ಗ್ವಾಟೆಮಾಲಾ ಸಹ ಲ್ಯಾಟಿನ್ ಅಮೆರಿಕದಲ್ಲಿ ಬೀಸುತ್ತಿರುವ 'ಕೆಂಪು ಅಲೆ'ಯ ತೆಕ್ಕೆಗೆ ಬಿದ್ದಿದೆ. ಎಡ ಮತ್ತು ಮಧ್ಯಮ ಪಂಥೀಯ ಪಕ್ಷಗಳ ಅಭ್ಯರ್ಥಿ ಅಲ್ವಾರೊ ಕೊಲೊಮ್ ನವಂಬರ್ ನಲ್ಲಿ ಅಧ್ಯಕ್ಷ ಚುನಾವಣೆ ಗೆದ್ದಿದ್ದು, ಇತ್ತೀಚೆಗೆ ಅಧಿಕಾರ ವಹಿಸಿಕೊಂಡರು. ಕಳೆದ ಕೆಲವು ವರ್ಷಗಳಿಂದ ಲ್ಯಾಟಿನ್ ಅಮೆರಿಕದಲ್ಲಿ ಒಂದಾದ ಮೇಲೆ ಒಂದು ದೇಶದಲ್ಲಿ ಅಧ್ಯಕ್ಷೀಯ ಚುನಾವಣೆಗಳಲ್ಲಿ, ಎಡ ಒಲವು ಇರುವ ಅಭ್ಯರ್ಥಿಗಳು ಗೆಲ್ಲುತ್ತಿದ್ದಾರೆ. ಅಮೆರಿಕ ಹೇರಿಸುತ್ತಿರುವ ಸಾಮ್ರಾಜ್ಯಶಾಹಿ -ಜಾಗತೀಕರಣದ ನೀತಿಗಳನ್ನು ವಿರೋಧಿಸುವ, ಅದಕ್ಕೆ ದಿಟ್ಟ ಬದಲಿ ನೀತಿಗಳನ್ನು ಪ್ರತಿಪಾದಿಸುತ್ತಿದ್ದಾರೆ. ಅಮೆರಿಕ-ಪರ ಬಲಪಂಥೀಯ ಅಭ್ಯರ್ಥಿಗಳು ಸತತವಾಗಿ ಸೋಲುತ್ತಿದ್ದಾರೆ. ಅಮೆರಿಕದ ಬೆದರಿಕೆ ಮತ್ತು ಒತ್ತಾಸೆಗಳಿಗೆ ಮತದಾರರು ಸೊಪ್ಪು ಹಾಕುತ್ತಿಲ್ಲ. ಅಧ್ಯಕ್ಷರಾಗಿ ಅಧಿಕಾರಕ್ಕೆ ಬಂದ ಮೇಲೂ ಬದಲಿ ನೀತಿಗಳ ಪ್ರಾಮಾಣಿಕ ಜಾರಿಗೆ ಪ್ರಯತ್ನಿಸುತ್ತಿದ್ದಾರೆ. ಇದಕ್ಕೆ 'ಕೆಂಪು ಅಲೆ' ಎನ್ನಲಾಗುತ್ತಿದೆ.

ಅಧ್ಯಕ್ಷ ಅಲ್ವಾರೊ ಕೊಲೊಮ್ ಅಧಿಕಾರ ವಹಿಸಿಕೊಂಡು ಗ್ವಾಟೆಮಾಲಾದ ಶೆ.50 ಕ್ಕೂ ಹೆಚ್ಚಿರುವ ಬಡ ಜನರ ಬಡತನ ನಿವಾರಣೆಗೆ ಆದ್ಯತೆ ಕೊಡುವುದಾಗಿ ಹೇಳಿದ್ದಾರೆ. 'ಮಾಯನ್ ಮುಖ'ವುಳ್ಳ, ಸಮಾನತೆ-ಸಾಂಸ್ಕೃತಿಕ ವೈವಿಧ್ಯತೆ-ಸಹಿಷ್ಣುತೆ ಇರುವ ಸರಕಾರ ಕೊಡುವ ಭರವಸೆ ಇತ್ತಿದ್ದಾರೆ. ದೇಶದ ಶೆ.43ಕ್ಕೂ ಹೆಚ್ಚು ಇರುವ ಮೂಲನಿವಾಸಿ 'ಮಾಯನ್ನರು' ದೇಶದಲ್ಲಿ ಮೊದಲ ಬಾರಿಗೆ ಅವರ ಬಗ್ಗೆ ಕಾಳಜಿ ವಹಿಸುವ ಸರ್ಕಾರವೊಂದು ಬಂದಿದೆ. ಕೊಲೊಮ್ ಕನಿಷ್ಟ ಕೂಲಿ ಹೆಚ್ಚಿಸುವ, ಕಾರ್ಮಿಕ ಯೂನಿಯನ್ ಗಳನ್ನು ಬಲಪಡಿಸುವ, ಶ್ರೀಮಂತರ ತೆರಿಗೆ ವಿನಾಯಿತಿಗಳನ್ನು ಕಿತ್ತು ಹಾಕುವ, ತೆರಿಗೆ-ಕಳ್ಳರ ಮೇಲೆ ದಾಳಿ - ಮುಂತಾದ ಕ್ರಮ ಆಗಲೇ ಕೈಗೊಳ್ಳಲು ಆರಂಭಿಸಿದ್ದಾರೆ. ಏಳು ಲಕ್ಷ ಹೊಸ ಉದ್ಯೋಗಗಳು, ಎರಡು ಲಕ್ಷ ಮನೆಗಳು ಮತ್ತು ಶೇ.6 ರಷ್ಟು ಬೆಳವಣಿಗೆ ಸಾಧಿಸುವುದಾಗಿ ಹೇಳಿದ್ದಾರೆ. ಆ ಮೂಲಕ 4 ವರ್ಷಗಳ ಅವಧಿಯಲ್ಲಿ ಬಡತನದಲ್ಲಿ ಶೇ.20 ರಷ್ಟು ಕಡಿತ ಮಾಡುವ ಯೋಜನೆ ಈಡೇರುವ ಭರವಸೆ ಮೂಡಿಸಿದ್ದಾರೆ.

ಗ್ವಾಟೆಮಾಲಾ, 1954 ರಲ್ಲಿ ಕೊನೆಯ ಎಡಪಂಥೀಯ ಅಧ್ಯಕ್ಷರನ್ನು ಸಿ.ಐ.ಎ. ಕ್ಷಿಪ್ರಕ್ರಾಂತಿಯ ಮೂಲಕ ಉರುಳಿಸಿದ ಮೇಲೆ ಅಮೆರಿಕ-ಪರ ಬಲಪಂಥೀಯ ಅಧ್ಯಕ್ಷರ ಹಿಡಿತದಲ್ಲಿ ಐದು ದಶಕಗಳ ಕಾಲ ನರಳಿತ್ತು. ಈ ಅವಧಿಯಲ್ಲಿ 35 ವರ್ಷಗಳ ಕಾಲ ಎಡಪಂಥೀಯ ಗೆರಿಲ್ಲಾಗಳು ಮತ್ತು ಸರ್ಕಾರದ ನಡುವೆ ಯುದ್ಧ ನಡೆದಿದ್ದು ಭಾರೀ ಸಾವು ನೋವುಗಳಾಗಿವೆ. ಈಗಷ್ಟೇ ಆ ಯುದ್ಧದ ದುಷ್ಪರಿಣಾಮಗಳಿಂದ ಚೇತರಿಸಿಕೊಳ್ಳುತ್ತಿದೆ. ಕೊಲೊಮ್ ಅಧಿಕಾರ ಸ್ವೀಕಾರ ಲ್ಯಾಟಿನ್ ಅಮೆರಿಕಕ್ಕೆ ಮಾತ್ರವಲ್ಲ ಇಡೀ ಜಗತ್ತಿಗೆ ದೊಡ್ಡ ಹಬ್ಬ ಆಗಿತ್ತು. ಆ ಸಮಾರಂಭಕ್ಕೆ 70 ದೇಶಗಳಿಂದ 1700 ಪ್ರತಿನಿಧಿಗಳು ಬಂದಿದ್ದರು. ಬ್ರೆಝಿಲ್, ಮೆಕ್ಸಿಕೊ, ಎಲ್ ಸಾಲ್ವಡೋರ್, ನಿಕರಾಗುವ, ಪನಾಮಾ ದೇಶಗಳ ಅಧ್ಯಕ್ಷರುಗಳು ಆಗಮಿಸಿದ್ದರು. ತೈವಾನ್ ಅಧ್ಯಕ್ಷರು ಮತ್ತು ಸ್ಪೈನಿನ ರಾಜಕುಮಾರ ಸಹ ಸಮಾರಂಭದಲ್ಲಿ ಭಾಗವಹಿಸಿದ್ದರು.



ಇಂಡೋನೇಶಿಯಾದ 'ಕಟುಕ' ಸುಹಾರ್ತೋ ನಿಧನ



ಇಂಡೋನೇಶಿಯಾವನ್ನು ಮೂರು ದಶಕಗಳ ಕಾಲ ಮಿಲಿಟರಿ ಸರ್ವಾಧಿಕಾರಿಯಾಗಿ ಆಳಿದ, 'ಕಟುಕ' ಎಂಬ ಕುಖ್ಯಾತಿ ಹೊಂದಿದ್ದ ಜನರಲ್ ಸುಹಾರ್ತೋ ನಿಧನ ಹೊಂದಿದರು. ಅಧ್ಯಕ್ಷನಾಗಿ ರಾಜೀನಾಮೆ ನೀಡಿದ ಹತ್ತು ವರ್ಷಗಳ ನಂತರ ನಿಧನ ಹೊಂದಿದ ಸುಹಾರ್ತೋ ಅಧಿಕಾರದ ಅವಧಿಯ 'ತಪ್ಪುಗಳನ್ನು' ಕ್ಷಮಿಸಬೇಕೆಂದು, ಆತನ ಮಗಳು ಜನತೆಗೆ ಭಾವಪೂರಿತ ಮನವಿ ಮಾಡಬೇಕಾಯಿತು. ಇಂತಹ ಕುಖ್ಯಾತಿ ಮಿಲಿಟರಿ ಸರ್ವಾಧಿಕಾರಿಗಳ ನಡುವೆಯೂ ದೊಡ್ಡ ರೆಕಾರ್ಡ ಇರಬೇಕು! ಆಗಿನ ಅಧ್ಯಕ್ಷ ಸುಕಾರ್ಣೋರನ್ನು ಮಿಲಿಟರಿ ಕ್ಷಿಪ್ರಕ್ರಾಂತಿಯಲ್ಲಿ ಅಧಿಕಾರದಿಂದ ಉರುಳಿಸಿ 1966 ರಲ್ಲಿ ಅಧಿಕಾರಕ್ಕೆ ಬಂದ ಸುಹಾರ್ತೋ, 1998 ರಲ್ಲಿ ಭಾರಿ ಪ್ರತಿಭಟನಾ ಚಳುವಳಿಗಳನ್ನು ಎದುರಿಸಲಾಗದೆ ರಾಜೀನಾಮೆ ಕೊಡಬೇಕಾಯಿತು. ಆಗಿನಿಂದ ಆತನ ಆಡಳಿತದ ಭಾರೀ ಮಾನವ ಹಕ್ಕುಗಳ ಉಲ್ಲಂಘನೆ-ಅಪರಾಧಗಳು, ಸ್ವಜನ ಪಕ್ಷಪಾತ ಮತ್ತು ಭೀಕರ ಭ್ರಷ್ಟಾಚಾರ ಆಪಾದನೆಗಳ ಬಗ್ಗೆ ವಿಚಾರಣೆಗೆ ದೊಡ್ಡ ಒತ್ತಾಯ ಬಂದಿತ್ತು. ಆದರೆ ಆ ಮೇಲಿನ ಸರ್ಕಾರಗಳು ಆತನ ವಯಸ್ಸು ಮತ್ತು ಅನಾರೋಗ್ಯದ ನೆಪ ಒಡ್ಡಿ, ಆತನಿಗೆ ಶಿಕ್ಷೆಯಾಗುವುದನ್ನು ತಪ್ಪಿಸಿದರು.

ಅರವತ್ತರ ದಶಕದಲ್ಲಿ ದಕ್ಷಿಣ-ಪೂರ್ವ ಏಶ್ಯಾದಲ್ಲಿ 'ಕಮ್ಯುನಿಸ್ಟ್ ಅಪಾಯ'ದ ನೆಪದಲ್ಲಿ, ಪ್ರಜಾಪ್ರಭುತ್ವ ನಾಶ ಮಾಡಿ ಅಮೆರಿಕದ ಸಿ.ಐ.ಎ. ಸ್ಥಾಪಿಸಿದ ಅವರ ಬಾಲಬಡುಕ ಮಿಲಿಟರಿ ಸರ್ವಾಧಿಕಾರಿಗಳಲ್ಲಿ ಸುಹಾರ್ತೋ ಪ್ರಮುಖರು. ಅಧ್ಯಕ್ಷ ಸುಕಾರ್ಣೋ ಜತೆ ಸಮ್ಮಿಶ್ರ ಸರ್ಕಾರ ನಡೆಸುತ್ತಿದ್ದ ಕಮ್ಯುನಿಸ್ಟ್ ಪಕ್ಷದ ಪ್ರಭಾವ ನಿರ್ನಾಮ ಮಾಡಲು, ಸಿ.ಐ.ಎ. ಆಗ ಮಿಲಿಟರಿ ಮುಖ್ಯಸ್ಥರಾಗಿದ್ದ ಸುಹಾರ್ತೋ ಮತ್ತು ಆತನ ನಿಕಟ ಸಹಚರರನ್ನು ಬಳಸಿತು. ಅಧ್ಯಕ್ಷ ಸುಕಾರ್ಣೋ ನೆಹರೂ-ಟಿಟೋ-ನಾಸೆರ್ ಜತೆ 'ಅಲಿಪ್ತ ಚಳುವಳಿ'ಯ ಪ್ರಮುಖ ನಾಯಕರಲ್ಲಿ ಒಬ್ಬರಾಗಿದ್ದರು. ಸುಹಾರ್ತೋ ನಾಯಕತ್ವದಲ್ಲಿ 'ಮಿಲಿಟರಿ ದಂಗೆ'ಯಾಗಿ ಅಧಿಕಾರ ಕಸಿದುಕೊಂಡಿತು. ನಂತರ ಕೆಲವೇ ವಾರಗಳಲ್ಲಿ ಹತ್ತು ಲಕ್ಷಕ್ಕೂ ಹೆಚ್ಚು ಕಮ್ಯುನಿಸ್ಟ ಪಕ್ಷದ ಸದಸ್ಯರನ್ನು (ಉನ್ನತ ಮತ್ತು ಎಲ್ಲಾ ಹಂತದ ನಾಯಕತ್ವ ಸೇರಿದಂತೆ) ಮತ್ತು ಅವರ ಕುಟುಂಬದವರನ್ನು ದೇಶದ ಆದ್ಯಂತ ಬೇಟೆಯಾಡಿ ಕೊಲ್ಲಲಾಯಿತು. ಇದು ಜಗತ್ತಿನ ಅತ್ಯಂತ ಕುಖ್ಯಾತ 'ನರಮೇಧ'ಗಳಲ್ಲಿ ಒಂದು. ಈ ನರಮೇಧಧ ವಿವರವಾದ ಯೋಜನೆ ಮತ್ತು ಕಮ್ಯುನಿಸ್ಟ್ ಪಕ್ಷದ ಸದಸ್ಯರ ಪಟ್ಟಿಯನ್ನು ಸುಹಾರ್ತೋಗೆ ಸಿ.ಐ.ಎ. ಒದಗಿಸಿತ್ತು ಎಂದು ಆ ಮೇಲೆ ಬಯಲಾಗಿತ್ತು. ಅರವತ್ತರ ದಶಕದಲ್ಲಿ ವಿರೋಧ ಪಕ್ಷವಾಗಿರುವ ಜಗತ್ತಿನ ಕಮ್ಯುನಿಸ್ಟ್ ಪಕ್ಷಗಳಲ್ಲೇ (ಇಟಲಿ ಬಿಟ್ಟರೆ) ಇಂಡೋನೇಶ್ಯಾದ ಕಮ್ಯುನಿಸ್ಟ್ ಪಕ್ಷ ಎರಡನೇ ಅತಿ ದೊಡ್ಡ ಪಕ್ಷವಾಗಿತ್ತು. ಶಾಂತಿಯುತ ವಾಗಿ ಸಮಾನತೆ, ಪ್ರಜಾಪ್ರಭುತ್ವ, ಸ್ವಾತಂತ್ರ್ಯ ಮತ್ತು ಪ್ರಗತಿ ಸಾಧಿಸಲು ಇಂಡೋನೇಶ್ಯಾದ ಜನತೆ ನಡೆಸಿದ್ದ ಈ ಪ್ರಯೋಗವನ್ನು ಹೊಸಕಿ ಹಾಕಿದ 'ಸಾಧನೆ' ಸುಹಾರ್ತೋ ಅವರದು.

ಮುಂದಿನ ಮೂವತ್ತಕ್ಕೂ ಹೆಚ್ಚು ವರ್ಷಗಳ ಕಾಲ ಅತ್ಯಂತ ಕ್ರೂರ ಮಿಲಿಟರಿ ಸರ್ವಾಧಿಕಾರಿ ಆಡಳಿತವನ್ನು ಸುಹಾರ್ತೋ ಸ್ಥಾಪಿಸಿದರು. ಇಷ್ಟು ಧೀರ್ಘಕಾಲ ಮಿಲಿಟರಿ ಸರ್ವಾಧಿಕಾರ ನಡೆಸಿದ ಸುಹಾರ್ತೋ ರೆಕಾರ್ಡ್ ಮೀರಿದವರೆಂದರೆ ಪೋರ್ಚುಗಲ್ ಫ್ಯಾಸಿಸ್ಟ್ ನಾಯಕ ಸಾಲ್ಜಾರ್. ಮಿಲಿಟರಿ ಅಧಿಕಾರಿಗಳು ದೇಶದ ಎಲ್ಲಾ ಕ್ಷೇತ್ರಗಳಲ್ಲಿ ಆವರಿಸಿದ್ದು, ಯಾವುದೇ ರೀತಿಯ ರಾಜಕೀಯ ಚಟುವಟಿಕೆಗೆ ಅವಕಾಶ ಇರಲಿಲ್ಲ. ಪಾಶ್ಚಿಮಾತ್ಯ ಬಹುರಾಷ್ಟ್ರೀಯ ಕಂಪನಿಗಳಿಗೆ ಇಂಡೋನೇಶ್ಯಾದ ಕಾರ್ಮಿಕರು ಮತ್ತು ಜನತೆಯನ್ನು ಸುಲಿಗೆ ಮಾಡಲು ಮುಕ್ತ ಅವಕಾಶ. ಅತ್ಯಂತ ವ್ಯಾಪಕವಾದ ಸ್ವಜನ ಪಕ್ಷಪಾತ ಮತ್ತು ಭ್ರಷ್ಟಾಚಾರ ಸುಹಾರ್ತೋ ಅಧಿಕಾರ ಅವಧಿಯಲ್ಲಿ ಅದು ಅಧಿಕೃತ ನೀತಿಯೋ ಎಂಬ ರೀತಿಯಲ್ಲಿ ತಾಂಡವವಾಡಿತು. ಕೊನೆಯ ವರ್ಷಗಳಲ್ಲಿ 'ನಿರ್ದೇಶಿತ ಪ್ರಜಾಪ್ರಭುತ್ವ' ಎಂಬ ವಿಚಿತ್ರ ಪ್ರಜಾಪ್ರಭುತ್ವ ವ್ಯವಸ್ಥೆ ಸ್ಥಾಪನೆಯಾಯಿತು. ಎಲ್ಲಾ ಮಿಲಿಟರಿ ಸಿಬ್ಬಂದಿ ಮತ್ತು ಎಲ್ಲಾ ಸರ್ಕಾರಿ ನೌಕರರು ಸುಹಾರ್ತೋ ಆಳುವ ಪಕ್ಷಕ್ಕೆ ಮತ ನೀಡಬೇಕು. ಎರಡು-ಮೂರು 'ರಾಜಕೀಯ ಪಕ್ಷ'ಗಳ ರಾಜಕೀಯ ಚಟುವಟಿಕೆ ಮತ್ತು ಚುನಾವಣೆಯ ಪ್ರಚಾರ ಮಾಡಲು ಚುನಾವಣೆಯ ಮೊದಲು ಒಂದು ದಿನ ಮಾತ್ರ ಅವಕಾಶ ಇರುತ್ತದೆ - ಈ ವ್ಯವಸ್ಥೆಯ ವಿಚಿತ್ರ ನಿಯಮಗಳು. ಇಂಡೋನೇಶ್ಯಾದ ಮತ್ತು ಜಗತ್ತಿನ ದುಡಿಯುವ ಜನತೆಯ ಸಮಾನತೆ, ಪ್ರಜಾಪ್ರಭುತ್ವದ ಸಾಧನೆಯ ಹೋರಾಟದ ಹಾದಿಯಲ್ಲಿ ಸುಹಾರ್ತೋ ಅವಧಿ ಒಂದು ಕರಾಳ ಅಧ್ಯಾಯ.

ಐದನೇ ಇರಾಕ್ ಯುದ್ಧ ವಾರ್ಷಿಕಕ್ಕೆ ಯುದ್ಧ-ವಿರೋಧಿ ಚಳುವಳಿ ಭರದ ಸಿದ್ಧತೆ

ಈ ಮಾರ್ಚ 19ಕ್ಕೆ ಇರಾಕ್ ಯುದ್ಧ-ಅತಿಕ್ರಮಣಕ್ಕೆ ಐದು ವರ್ಷ ತುಂಬುತ್ತದೆ. ಇದು ಜಗತ್ತಿನ ಚರಿತ್ರೆಯಲ್ಲೇ ಅತಿ ದೊಡ್ಡ ಪ್ರಮಾದ ಮತ್ತು ದುರಂತ ಅಂತ ಬುಶ್ ಗ್ಯಾಂಗ್ ಬಿಟ್ಟರೆ ಎಲ್ಲರೂ ಒಪ್ಪುತ್ತಾರೆ. ಅತಿಕ್ರಮಣ ಐದು ವರ್ಷಗಳ ನಂತರ ಇರಾಕ್ ನಲ್ಲಿ ಶಾಂತಿ, ಭದ್ರತೆ, ಕಾನೂನು, ಸುವ್ಯವಸ್ಥೆ ಯಾವುದೂ ನೆಲೆಯಾಗಿಲ್ಲ. ಪ್ರತಿದಿನವೂ ಭಾರಿ ಸಂಖ್ಯೆಯ ಸಾವು-ನೋವು ಸಾಮಾನ್ಯ ವಾಗಿದೆ. ಯುದ್ಧದ ವಿಶಿಷ್ಟ ಕಸಿವಿಸಿ- ಮಾನಸಿಕ ಒತ್ತಡ ತಡೆಯಲಾಗದೆ ಅಮೆರಿಕದ ಸೈನಿಕರು ದೊಡ್ಡ ಸಂಖ್ಯೆಯಲ್ಲಿ ಆತ್ಮಹತ್ಯೆ ಮಾಡಿಕೊಳ್ಳುತ್ತಿದ್ದಾರೆ. ಅಮೆರಿಕದ ಜನತೆ ಸೈನಿಕರನ್ನು ವಾಪಸು ಕರೆಸಿ ಎಂದು ಒತ್ತಾಯಿಸುತ್ತಿದ್ದಾರೆ. ಆದರೂ ಬುಶ್ ಸರ್ಕಾರ ಶತಕೋಟ್ಯಾಂತರ ಡಾಲರುಗಳ ವೆಚ್ಚ ಮಂಜೂರು ಮಾಡಿಸಿಕೊಳ್ಳುತ್ತಲೇ ಇದೆ. ಅಮೆರಿಕದ ಶಾಂತಿ ಚಳುವಳಿ ಯುದ್ಧ ನಿಲ್ಲಿಸಿ ಸೈನ್ಯ ವಾಪಸು ಕರೆಸಿಕೊಳ್ಳುವ ತನ್ನ ಒತ್ತಡ ಸತತವಾಗಿ ಇಟ್ಟಿದ್ದರೂ, ಮಧ್ಯೆ ಜನತೆಯ ಸ್ಪಂದನ ಅಷ್ಟಾಗಿರಲಿಲ್ಲ. ಆದರೆ ಇತ್ತೀಚೆಗೆ ಮನಃ ಶಾಂತಿ ಚಳುವಳಿಗೆ ಉತ್ತಮ ಸ್ಪಂದನ ದೊರೆಯುತ್ತಿದೆ. ಅಮೆರಿಕದ ಅತಿ ದೊಡ್ಡ ಶಾಂತಿ ಚಳುವಳಿ ಜಾಲ (1400 ಶಾಂತಿ ಗುಂಪುಗಳನ್ನು ಹೊಂದಿದೆ) 'ಯುನೈಟೆಡ್ ಫಾರ್ ಪೀಸ್ ಅಂಡ್ ಜಸ್ಟೀಸ್' ಇರಾಕ್ ಯುದ್ಧದ ಐದನೇ ವಾರ್ಷಿಕದ ಸಂದರ್ಭದಲ್ಲಿ ಬುಶ್ ಸರ್ಕಾರದ ಮೇಲೆ ಒತ್ತಡ ಹೆಚ್ಚಿಸುವ ಕಾರ್ಯಕ್ರಮಗಳ ಸರಣಿ ಹಾಕಿಕೊಂಡಿದೆ. ಬುಶ್ ಗ್ಯಾಂಗ್, ಬಾಲಬಡುಕ ಮಾಧ್ಯಮಗಳು, ಎರಡು ಪ್ರಮುಖ ಪಕ್ಷಗಳು ಮತ್ತು ಕಾಂಗ್ರೆಸ್ ಎಲ್ಲಾ ಸೇರಿ 'ಇರಾಕ್ ಯುದ್ಧ' ಅಧ್ಯಕೀಯ ಚುನಾವಣೆ ವರೆಗೆ ಸಾರ್ವಜನಿಕರ ಅಜೆಂಡಾದಲ್ಲಿ ಇಲ್ಲದಂತೆ ಪಿತೂರಿ ನಡೆಸಿವೆ. 'ನಾವು ಅದನ್ನು ಅಜೆಂಡಾದಲ್ಲಿ ತರುವ ಪಣ ತೊಟ್ಟಿದ್ದೇವೆ' ಎಂದು ಈ ಸಂಘಟನೆಯ ವಕ್ತಾರರು ಹೇಳಿದ್ದಾರೆ.

ಮಾರ್ಚ್ 13ರಿಂದ 19 ರವರೆಗೆ 'ಇರಾಕ್ ಯುದ್ಧ-ವಿರೋಧಿ ಸೈನಿಕರು' ಎಂಬ ಅಂಗ ಸಂಘಟನೆ ಇರಾಕ್- ಅಫ್ಘಾನಿಸ್ತಾನದಲ್ಲಿ ಭಾಗವಹಿಸಿದ ಸೈನಿಕರ ತಮ್ಮ ದಾರುಣ ಪ್ರತ್ಯಕ್ಷದರ್ಶಿ ಅನುಭವದ ಮೂಲಕ ಅಲ್ಲಿನ ಜನತೆ ಮೇಲೆ ಯುದ್ಧದ ಪರಿಣಾಮ, ಯುದ್ಧದ ಸ್ವರೂಪದ ಮೇಲೆ ಬೆಳಕು ಚೆಲ್ಲಲಿದ್ದಾರೆ. ಇದನ್ನು ಸಾಧ್ಯವಾದ ಎಲ್ಲಾ (ಮುಖ್ಯವಾಗಿ ಇಂಟರನೆಟ್) ಮಾಧ್ಯಮಗಳ ಮೂಲಕ ದೇಶ- ಜಗತ್ತಿನಾದ್ಯಂತ ಬಿತ್ತರಿಸುವ ವ್ಯವಸ್ಥೆ ಮಾಡಲಾಗಿದೆ. ಮಾರ್ಚ್ 19 ರಂದು ವಾಶಿಂಗ್ ಟನ್ ನಲ್ಲಿ ಅತಿ ದೊಡ್ಡ ಯುದ್ಧ-ವಿರೋಧಿ ರ್‍ಯಾಲಿ ಆಯೋಜಿಸ ಲಾಗಿದೆ. ಅದೇ ದಿನ ಎಲ್ಲಾ ರಾಜ್ಯಗಳ ಪ್ರಮುಖ ನಗರಗಳಲ್ಲಿ ಸ್ಥಳೀಯ ರ್‍ಯಾಲಿಗಳೂ ನಡೆಯುತ್ತವೆ.

ಜನಶಕ್ತಿ ಕನ್ನಡ ವಾರಪತ್ರಿಕೆ

ಇದು ನಮ್ಮ ಬೆಂಗಳೂರು.......

ಪುಟ 9ರಿಂದ

ಪ್ರಧಾನವಾಗುತ್ತಿದೆ. ಜಾತೀಯ, ಪ್ರಾದೇಶಿಕ ಅಸ್ತಿತ್ವಗಳ (ಐಡೆಂಟಿಟಿ) ಪ್ರಶ್ನೆಗಳು ಆಗಾಗ ಮುಂಚೂಣಿಗೆ ಬರುತ್ತವೆ. ಅಂತೆಯೇ ವಲಸೆ ಕಾರ್ಮಿಕರಿಗೆ ಎದುರಾಗಿ ಸ್ಥಳೀಯ ಭಾಷಾ ಅಸ್ತಿತ್ವಗಳು ಮುಂಚೂಣಿಗೆ ಬರುವ ಪ್ರವೃತ್ತಿಗಳು ಹೆಚ್ಚುತ್ತಿವೆ. ಇದು ಜಾತಿವಾದ, ಪ್ರಾದೇಶಿಕವಾದ, ಭಾಷಾಂಧತೆಗೆ ಕಾರಣವಾಗುತ್ತಿದ್ದು ಕಾರ್ಮಿಕ ವರ್ಗದ ವಿಶಾಲ ಐಕ್ಯತೆಗೆ ಸವಾಲೊಡ್ಡುತ್ತಿದ್ದು ತೀವ್ರಗೊಳ್ಳುವ ಅಪಾಯವಿದೆ.

ಪಡಿತರ ಆರೋಗ್ಯ ಸಾಮಾನ್ಯ ಜನಕ್ಕೆ ಕೈಗೆಟುಕದಂತಾಗಿದ್ದು ಆರೋಗ್ಯದ ವ್ಯಾಪಾರೀಕರಣವು ಜನಸಾಮಾನ್ಯರ ಮೇಲಿನ ಹೊರೆಯನ್ನು ಮತ್ತಷ್ಟು ಹೆಚ್ಚಿಸಿದೆ. ಶಿಕ್ಷಣದ ವ್ಯಾಪಾರೀಕರಣವು ತೀವ್ರಗೊಂಡಿದೆ. ಮಕ್ಕಳ ಶಿಕ್ಷಣಕ್ಕಾಗಿ ಹಪಹಪಿಸುವ ಪರಿಸ್ಥಿತಿ ವ್ಯಾಪಕವಾಗುತ್ತಿದೆ.



ನೂತನ ಜಿಲ್ಲಾ ಸಮಿತಿ ಸದಸ್ಯರೊಂದಿಗೆ ರಾಜ್ಯ ಮುಖಂಡರು

ಭ್ರಮೆಗಳ ನಡುವೆಯೂ ಬದುಕಿನ ಸೆಲೆ:

ರಾಜ್ಯದ ರಾಜಕೀಯದಲ್ಲಾದ ಬೆಳವಣಿಗೆಗಳಲ್ಲೇ ಜಿಲ್ಲೆಯ ರಾಜಕೀಯದ ಬೆಳವಣಿಗೆಗಳೂ ನಡೆದಿವೆ. ಜಿಲ್ಲೆಗೆ ಹರಿದು ಬರುತ್ತಿರುವ ಬಹುರಾಷ್ಟ್ರೀಯ ಬಂಡವಾಳ ಭೂಮಾಫಿಯಾ, ಶೈಕ್ಷಣಿಕ ಲಾಭಿ ಹಾಗೂ ದೇಶೀಯ ಬಂಡವಾಳಗಾರರ ಹಿತಾಸಕ್ತಿಗನುಗುಣವಾಗಿ ಜಿಲ್ಲೆಯ ರಾಜಕೀಯವೂ ರೂಪಿತವಾಗುತ್ತಿದೆ. ಜಾತಿ ಸಮೀಕರಣಗಳು ನಡೆದಿರುವಾಗಲೆ ಹಿಂದೂ ಸಮಾಜೋತ್ಸವ, ಭಯೋತ್ಪಾದಕ ದಾಳಿ, ಭಯೋತ್ಪಾದಕರ ಅಡಗುತಾಣದ ನೆಲೆ ಎಂಬ ವರದಿಗಳು ಜನರಲ್ಲಿ ಕೋಮುವಾದ ವನ್ನು ಬಲಗೊಳಿಸುವ ಯತ್ನಗಳು ತೀವ್ರಗೊಂಡಿವೆ. ಆರ್‌ಎಸ್‌ಎಸ್ ಹಿಡಿತವು ಹೆಚ್ಚೆಚ್ಚು ವ್ಯಾಪಕವಾಗುತ್ತಿದೆ. ಬಾಷೆ ನಾಡುನುಡಿ ಹೆಸರಿನ ಚಟುವಟಿಕೆಗಳು ಹೋರಾಟಗಳು ಹೆಚ್ಚೆಚ್ಚು ಪ್ರಕಟಗೊಂಡಿವೆ. ವಸತಿ ನಿವೇಶನ ಕಾರ್ಮಿಕಹಕ್ಕು ಅಕ್ರಮ ಸಕ್ರಮ ವಿರೋಧಿ ಹೋರಾಟಗಳು ನಾಗರೀಕ ಸೌಲಭ್ಯಗಳಿಗಾಗಿನ ಪ್ರತಿಭಟನೆಗಳು ಹೆಚ್ಚಾಗುತ್ತಿವೆ.

ರಾಜ್ಯ ರಾಜಕೀಯದಲ್ಲಿನ ಬೆಳವಣಿಗೆಗಳು

ಬಿಜೆಪಿಯು ಅಧಿಕಾರ ಹಿಡಿದ ಅಂಶಗಳು ಜನತೆಯು ನಡುವಿನ ಅವರ ಪ್ರಭಾವವನ್ನು ಹೆಚ್ಚಿಸಿಕೊಳ್ಳಲು ಅನುಗೊಳಿಸಿವೆ. ಕಳೆದ ವಿಧಾನಸಭಾ ಚುನಾವಣೆ ನಂತರ ಜಿಲ್ಲೆಯಲ್ಲಿ ನಡೆದ ಚಾಮರಾಜ ಪೇಟೆ ವಿಧಾನಸಭಾ ಮರು ಚುನಾವಣೆ, ಜಿಲ್ಲಾ ಪಂಚಾಯತ್, ತಾಲ್ಲೂಕು ಪಂಚಾಯತ್ ಚುನಾವಣೆಗಳು ಹಾಗೂ ಮುನ್ಸಿಪಲ್ ಚುನಾವಣೆಯಲ್ಲೂ ಜಿಲ್ಲೆಯ ಜನತೆ ಬಿಜೆಪಿಯನ್ನು ಸೋಲಿಸಿದ್ದಾರೆ. ಜಾತ್ಯಾತೀತ ಶಕ್ತಿಗಳ ಪರ ಮತ ನೀಡಿದ್ದಾರೆ. ಆದರೆ ಅದೇ ಸಮಯದಲ್ಲಿ ಕಾಂಗ್ರೆಸ್‌ನ ದಿವಾಳಿಕೋರ ನೀತಿಯಿಂದಾಗಿ, ಅದರ ಬೇಜವಾಬ್ದಾರಿತನಕ್ಕೆ ಪಾಠ ಕಲಿಸುವಂತೆ ಅದರ ಮೇಲೂ ಪೂರ್ಣ ವಿಶ್ವಾಸವಿಡಲು ಸಾಧ್ಯವಿಲ್ಲವೆಂಬ ಸಂದೇಶ ನೀಡಿದ್ದಾರೆ.



ಹಣಬಲ, ಭೂ ಮಾಫಿಯಾ ಕೋಮುವಾದಿ ಸೈದ್ಧಾಂತಿಕತೆಯ ಸಮೀಕರಣದ ಕಮಟಂತೂ ವ್ಯಾಪಿಸುತ್ತಿವೆ.

ತೀವ್ರ ದಾಳಿ ದಬ್ಬಾಳಿಕೆಗಳನ್ನೆದುರಿಸಿದ ಕಾರ್ಮಿಕ ಚಳುವಳಿಗಳು ನಡೆದ ಹೊಸಕೋಟೆ ಹಾಗೂ ನೆಲಮಂಗಲದಲ್ಲಿ ಜೆಡಿಎಸ್‌ಗೆ ಪಾಠ ಕಲಿಸುವ ಮೂಲಕ ಇಡೀ ಗ್ರಾಮಾಂತರ ಜಿಲ್ಲೆಯಲ್ಲಿದ್ದ ಜೆಡಿಎಸ್ ಪರ ಭ್ರಮೆಯ ಅಲೆಯ ನಡುವೆಯೆ ಬದುಕಿನ ಸೆಲೆಯನ್ನು ಇತ್ತೀಚಿನ ಮುನ್ಸಿಪಲ್ ಚುನಾವಣೆಗಳಲ್ಲಿ ಜನತೆ ತೋರಿದ್ದಾರೆ.

ಬೆಂಗಳೂರು ಸಿಪಿಐ(ಎಂ)
ಜಿಲ್ಲಾ ಸಮ್ಮೇಳನ

ಸಿಪಿಐ(ಎಂ) ಬೆಂಗಳೂರು ಜಿಲ್ಲಾ 18ನೇ ಸಮ್ಮೇಳನ ಡಿಸೆಂಬರ್ 23ರಿಂದ 25, 2007ರವರೆಗೆ ದೊಡ್ಡಬಳ್ಳಾಪುರದಲ್ಲಿ ಅತ್ಯಂತ ಯಶಸ್ವಿಯಾಗಿ ಜರುಗಿತು. ಈ ಸಮ್ಮೇಳನವು ಈ ಮೇಲ್ಕಂಡ ವಿವಿಧ ವಿಚಾರಗಳ ಕುರಿತು ಆಳವಾಗಿ ಚರ್ಚಿಸಿತು. ಸನ್ನಿವೇಶದ ಸಂದರ್ಭಕ್ಕೆ ತಕ್ಕಂತೆ ಸರಿಯಾದ ನಿಲುವು ತಳೆಯಲು, ಚಳುವಳಿಯನ್ನು ಬಲಪಡಿಸುವುದಕ್ಕೆ ಪೂರಕವಾಗಿ ಸಂಘಟನೆಯನ್ನು ಸಜ್ಜುಗೊಳಿಸಲು ಸಮ್ಮೇಳನವು ತೀರ್ಮಾನಿಸಿತು. ಸಮ್ಮೇಳನದ ಅಂಗವಾಗಿ ಏರ್ಪಡಿಸಿದ್ದ ಬಹಿರಂಗ ಸಭೆಯನ್ನುದ್ದೇಶಿಸಿ ಮಾತನಾಡಿದ ಆಂಧ್ರಪ್ರದೇಶದ ಸಿಪಿಐ(ಎಂ) ರಾಜ್ಯ ಕಾರ್ಯದರ್ಶಿಮಂಡಳಿ ಸದಸ್ಯರಾದ ಮರಿಯ ವೆಂಕಟೇಶ್ವರಲು, ಕೇಂದ್ರದ ಯುಪಿಎ ಸರ್ಕಾರದ ಜನ ವಿರೋಧಿ ನೀತಿಗಳನ್ನು ಎಳೆ ಎಳೆಯಾಗಿ ಬಿಡಿಸಿಟ್ಟರು. ಕೇಂದ್ರ ಸರ್ಕಾರ ಜನಸಾಮಾನ್ಯರ ಹಿತವನ್ನು ಕಡೆಗಣಿಸುವುದಲ್ಲದೆ ಈ ಜನರ ಬದುಕು ದಿನೇ ದಿನೇ ದುರ್ಬಲವಾಗುತ್ತಿದೆ. ಈ ನೀತಿಗಳ ವಿರುದ್ಧ ಜನತೆ ಸಮರಧೀರ ಚಳುವಳಿಗೆ ಮುಂದಾಗುವ ಅಗತ್ಯವಿದೆ ಎಂದ ಅವರು ಆಂಧ್ರದಲ್ಲಿ ನಡೆಯುತ್ತಿರುವ ಧೀರೋದ್ದಾತ ಭೂ ಹೋರಾಟ ನಡೆದು ಬಂದ ದಾರಿ ಕುರಿತು ಮಾತನಾಡಿದರು. ರಾಜ್ಯ ಕಾರ್ಯದರ್ಶಿ ಮಂಡಳಿ ಸದಸ್ಯರಾದ ಜಿ.ಸಿ.ಬಯ್ಯಾರೆಡ್ಡಿ ಮಾತನಾಡಿ ದೇಶದ ಕೃಷಿ ಬಿಕ್ಕಟ್ಟು ಉಲ್ಬಣಗೊಳ್ಳುತ್ತಿದ್ದು ಕೃಷಿ ಅವಲಂಬಿತರು ಆತ್ಮಹತ್ಯೆ ದಾರಿ ತುಳಿದಿದ್ದಾರೆ. ಈ ಬಗ್ಗೆ ಕೇಂದ್ರ ರಾಜ್ಯ ಸರ್ಕಾರಗಳು ನಿರ್ಲಕ್ಷ್ಯವಹಿಸಿವೆ ಎಂದು ಟೀಕಿಸಿದರು. ವೇದಿಕೆಯಲ್ಲಿ ರಾಜ್ಯ ಕಾರ್ಯದರ್ಶಿ ಮಂಡಳಿ ಸದಸ್ಯರಾದ ವಿ.ಜಿ.ಕೆ.ನಾಯರ್, ಎಸ್.ಪ್ರಸನ್ನ ಕುಮಾರ್, ಜಿಲ್ಲಾ ಕಾರ್ಯದರ್ಶಿ ಕೆ.ಪ್ರಕಾಶ್ ಉಪಸ್ಥಿತರಿದ್ದರು. ದೊಡ್ಡಬಳ್ಳಾಪುರ ತಾಲ್ಲೂಕು ಕಾರ್ಯದರ್ಶಿ ಚಂದ್ರು ತೇಜಸ್ವಿ ಅಧ್ಯಕ್ಷತೆ ವಹಿಸಿದ್ದರು. ಇದಕ್ಕೂ ಮುನ್ನ ಸಾವಿರಾರು ಜನರ ಕೆಂಬಾವುಟಗಳ ಮೆರವಣಿಗೆ ಪಟ್ಟಣದ ಪ್ರಮುಖ ರಸ್ತೆಗಳಲ್ಲಿ ಹಾದು ಬಹಿರಂಗಸಭೆ ಸೇರಿತು. ಸಭೆಗೂ ಮುನ್ನ ಖ್ಯಾತ ಗಾಯಕ ಪಿಚ್ಚಳ್ಳಿ ಶ್ರೀನಿವಾಸ ತಂಡದವರಿಂದ ಕ್ರಾಂತಿಗೀತೆಗಳ ಕಾರ್ಯಕ್ರಮವನ್ನು ಆಯೋಜಿಸಲಾಗಿತ್ತು.

ಜಿಲ್ಲಾ ಸಮಿತಿ: 13 ಜನರ ಜಿಲ್ಲಾ ಸಮಿತಿ ಸರ್ವಾನುಮತದಿಂದ ಆಯ್ಕೆಯಾಯಿತು. ಜಿಲ್ಲಾ ಕಾರ್ಯದರ್ಶಿಯಾಗಿ ಕೆ.ಪ್ರಕಾಶ್ ಮರು ಆಯ್ಕೆಗೊಂಡರು. ಕಾರ್ಯದರ್ಶಿ ಮಂಡಳಿ ಸದಸ್ಯರಾಗಿ ಗೋಪಾಲಕೃಷ್ಣ, ಕೆ.ಎನ್.ಉಮೇಶ್, ಗೌರಮ್ಮ, ಚಂದ್ರುತೇಜಸ್ವಿ, ಮೀನಾಕ್ಷಿ ಸುಂದರಂ ಅವರು ಜಿಲ್ಲಾ ಕಾರ್ಯದರ್ಶಿ ಮಂಡಳಿಗೆ ಆಯ್ಕೆಯಾಗಿದ್ದಾರೆ.

ಹಿರಿಯ ಚೇತನಗಳಿಗೆ ಸನ್ಮಾನ.... ಹೃದಯಸ್ಪರ್ಶಿ ಕಾರ್ಯಕ್ರಮ : ಹಲವು ವರ್ಷಗಳಿಂದ ಪಕ್ಷಕ್ಕಾಗಿ ದುಡಿದ ಜಿಲ್ಲೆಯ ಹಿರಿಯ ಚೇತನಗಳಾದ ಕಾಂ: ಮುಗುವಾಳಪ್ಪ, ಕಾಂ: ಪಿ.ಕೆ.ಸುಬ್ರಮಣಿ, ಕಾಂ: ಕೋದಂಡರಾಮನ್ ಅವರುಗಳನ್ನು ಸಮ್ಮೇಳನದಲ್ಲಿ ಪಕ್ಷಕ್ಕಾಗಿನ ಅವರ ತ್ಯಾಗ, ಪರಿಶ್ರಮ, ಅಚಲವಾದ ಬದ್ಧತೆ, ಇಳಿವಯಸ್ಸಿನಲ್ಲಿಯೂ ಕುಗ್ಗಿದ ಉತ್ಸಾಹವನ್ನು ಸ್ಮರಿಸಿ ಸನ್ಮಾನಿಸಲಾಯಿತು.

○

ಕಾಂ. ಸವರಿದಾಸ್

ಪುಟ 12 ರಿಂದ

ಪ್ರಜಾಪ್ರಭುತ್ವಕ್ಕೆ ಅಧಿಕಾರ ಹಸ್ತಾಂತರ ನಡೆಸಬೇಕೆಂಬ ಬೇಡಿಕೆ ಇಟ್ಟುಕೊಂಡು 18 ದಿನಗಳ ಕಾಲ ಕೆಜಿಎಫ್ ಕಾರ್ಮಿಕ ಸಂಘಟನೆ ವತಿಯಿಂದ ನಿರಂತರ ಮುಷ್ಕರ ನಡೆಸಿದೆವು. 1947ರ ಅಕ್ಟೋಬರ್ 6ರಂದು ವಿಜಯಯೊಂದಿಗೆ ಮುಷ್ಕರ ಕೊನೆಗೊಂಡಿತು.

ಆಗ ನಡೆದ ದ್ವಿತೀಯ ಸಾರ್ವಜನಿಕ ಚುನಾವಣೆಯಲ್ಲಿ ಕಾಂಗ್ರೆಸ್ ವಿರುದ್ಧ ನಮ್ಮ ಪಕ್ಷದ ಬೆಂಬಲಿತ ಯುನೈಟೆಡ್ ಫ್ರಂಟ್ ಒಟ್ಟು 11 ಸ್ಥಾನಗಳಲ್ಲಿ 9 ಸ್ಥಾನಗಳಲ್ಲಿ ಜಯಗಳಿಸಿತು.

ಜ.ಶ.: ಪಕ್ಷ ವಿಭಜನೆಯ ಸಂದರ್ಭದಲ್ಲಿ ನಡೆದದ್ದೇನು?

ಸ.ದಾ.: ನಮ್ಮ ಸಂಪೂರ್ಣ ಕೆಜಿಎಫ್ ಕಾರ್ಮಿಕ ಸಂಘಟನೆಯು ಸಿಪಿಐ(ಎಂ) ಆಯಿತು. ಈ ಭಾಗದಿಂದ ಯಾರೊಬ್ಬರೂ ಸಿಪಿಐ ನಲ್ಲಿ ಮುಂದುವರಿಯಲಿಲ್ಲ.

ಜ.ಶ.: ರಾಜ್ಯದಲ್ಲಿ ಇಂದಿನ ಚಳುವಳಿಯಲ್ಲಿ ನಮ್ಮ ಮುಂದಿರುವ ಸವಾಲುಗಳೇನು?

ಸ.ದಾ.: ಜನಸಮೂಹ-ಕೇಂದ್ರಿತ ಚಳುವಳಿಗಳು ಸರಣಿಯೋಪಾದಿಯಲ್ಲಿ ರಾಜ್ಯದಲ್ಲೆಡೆ ಮೂಡಿಬರಬೇಕು. 'ಸಾಲ್ಕಿಯಾ ಪ್ಲೀನಮ್' ನಿರ್ಣಯದ ಆಧಾರದ ಮೇಲೆ ನಮ್ಮ ಪಕ್ಷವನ್ನು ವಿಸ್ತರಿಸಿ ಬೆಳೆಸಬೇಕು.

ಸಂದರ್ಶನ: ಯಶವಂತ್ ಮತ್ತು ಜಯ

ದೇಶಕ್ಕೆ ಒಳ್ಳೇದಾಗ್ಲಿ ಅಂತಾ...

ಪುಟ 12 ರಿಂದ

ರಾತ್ರಿ 1.00 ಕ್ಕೆ, ಬೆಳಿಗ್ಗೆ 5.30ಕ್ಕೆ ಮೆಸೇಜ್ (ಎಸ್‌ಎಂಎಸ್) ಕಳ್ಸಿ, ನಮ್ಮ ಸಂಗಾತಿಗಳ ನಿದ್ದೆ, ನೆಮ್ದಿ ಕೆಡ್ಸಿ, ನಿಧಿ ಸಂಗ್ರಹಕ್ಕೆ ಇಳ್ಸಿದ್ದು ಸಾರ್ಥಕ ಅಂತ ಅನಿಸಿದ್ದು ಸಮ್ಮೇಳನ ಯಶಸ್ವಿ ಆದಾಗ.

ಬಸವೇಶ್ವರ ರಸ್ತೆಯ ಬಸವರಾಜು, ಟೀ ಅಂಗಡಿ ಮಾಲೀಕ, ಟೀನೂ ಕೊಟ್ಟು ಸಮ್ಮೇಳನಕ್ಕೆ ದುಡ್ಡು ಕೊಟ್ಟಿದ್ದು ಇಂಥಾದ್ದೆಲ್ಲಾ ಅನುಭವ ಇದೆ. ಬೇರೆ ಕೆಲವು ಪಕ್ಷಗಳಿಗೆ ಆಗಿದಿದ್ದರೆ ಟೀ ಅಂಗಡೀಲಿ ನಮಗೆ ಆದ ಅನುಭವ ವೈನ್ ಸ್ಟೋರ್‌ನಲ್ಲಿ ಆಗ್ತಿತ್ತೇನೋ?

ಅನುಭಾವಿಗಳು

ನಂಜುಂಡಸ್ವಾಮಿ, ಬಲರಾಮ್.ಎಸ್.ಆರ್, ಸುಬ್ರಮಣ್ಯ.ಆರ್, ಲ.ಜಗನ್ನಾಥ

ಶರಣ ಮೇಳದ ನಡುವೆ...



'ಉಳ್ಳವರು ಶಿವಾಲಯ ಮಾಡುವರು ನಾನೇನ ಮಾಡಲಿ ಬಡವನಯ್ಯ...' ಎಂದ ಬಸವಣ್ಣನ ಪ್ರತಿಮೆಯಲ್ಲಿ ತಲೆಗೆ ಕಿರೀಟ, ಮೈಮೇಲೆ ಒಡವೆ!! ಏನಾಗಿವೆ ವಚನ ಚಳುವಳಿಯ ಆಶಯಗಳು?

ಕೂಡಲ ಸಂಗಮದೊಳಗೊಂದು
ಶರಣ ಮೇಳ
ಶರಣ ಸಂಸ್ಕೃತಿಯ
ಸ್ಮರಣೆಯ ಶುಭಘಳಿಗೆಯ ನಡುವೆ
ಯಾವುದೋ
ಅಪಶಕುನದ ಹಕ್ಕಿಯ
ಕರ್ಕಶ ಧ್ವನಿ
ಕೋಗಿಲೆಯ ಕೊರಳಲ್ಲಿ
ಹದ್ದು, ಕಾಗೆಗಳ ಸದ್ದು
ಅಣ್ಣನ ಬೆನ್ನ ಹಿಂದೆ
ಯಾವುದೋ ಕರಿನೆರಳು
ಗೋಡ್ಸೆಯ ವಾರಸುದಾರರ
ವಿಕೃತ ನಗೆ
ರಕ್ತಸಿಕ್ತ ಕೈಗಳ ಕಂಡು
ಅಣ್ಣ ಬಸವಣ್ಣ
ಬೆಚ್ಚಿಬಿದ್ದ
ಅಕ್ಕ, ಗಳಗಳ ಅತ್ತಳು
ಕೂಡಲ ಸಂಗಮದೇವ
ಕೂಗಿ ಹೇಳಿದ
ಹದ್ದು, ಕಾಗೆಗಳ ಓಡಿಸಿ
ಎಂದು.

– ಹುಲಿಕಟ್ಟಿ ಚನ್ನಬಸಪ್ಪ

ಸೂತ್ರವಿಲ್ಲದ 'ಗಾಳಿಪಟ'



'ಮುಂಗಾರುಮಳೆ'ಯ ಬಹುದೊಡ್ಡ ಯಶಸ್ಸಿನ ನಂತರ ಯೋಗರಾಜ ಭಟ್ ಮತ್ತು ಗಣೇಶ್ ಜೋಡಿಯ 'ಗಾಳಿಪಟ' ಭಾರೀ ನಿರೀಕ್ಷೆ ಮೂಡಿಸಿದ್ದ ಚಿತ್ರ.

ಭಟ್ಟರ ಅತಿಯಾದ ಆತ್ಮವಿಶ್ವಾಸಕ್ಕೆ ಸ್ವಲ್ಪಮಟ್ಟಿನ ಗರ್ವಭಂಗವಾಗಿದೆ. 'ಮುಂಗಾರುಮಳೆ'ಯಲ್ಲಿರುವ ಮನಮಿಡಿಯುವಂತಹ ಕಥೆಯ ಸ್ಪರ್ಶ ಈ 'ಗಾಳಿಪಟ'ಕ್ಕಿಲ್ಲದಿರುವುದೇ ಚಿತ್ರದ ದೊಡ್ಡ ಕೊರತೆ. ಉಪ್ಪಿನಕಾಯಿ, ಪಲ್ಯಗಳು ಊಟದ ಜೊತೆಗೆ ಮಾತ್ರವೇ ಹೊರತು ಅದೇ ಊಟವಾಗಲಾರದು ಎಂಬುದು ಭಟ್ಟರ ಅರಿವಿಗೆ ಬಾರದೇಹೋದದ್ದು ವಿಪರ್ಯಾಸ.

'ಗಾಳಿಪಟ'ದಲ್ಲಿ ಯಾವುದೇ ಸಂದೇಶ ಇರುವುದಿಲ್ಲ - ಕೇವಲ ಮನರಂಜನೆಯಷ್ಟೇ ಎಂಬುದನ್ನು ಭಟ್ಟರು ಮೊದಲೇ ಘೋಷಿಸಿ ಬಿಟ್ಟಿದ್ದಾರೆ. ಹಾಗಾಗಿ ಸಂದೇಶದ ಗೊಡವೆಯಿಲ್ಲದ್ದರಿಂದ ಕಥೆಯ ಅಗತ್ಯವೂ ಇಲ್ಲ ಎಂದು ಭಾವಿಸಿದ್ದಂತಿದೆ ಭಟ್ಟರು.

ಅನುಕೂಲಸ್ಥ ಮನೆತನದ ಮೂರು ಜನ ಯುವಕರು ಬೆಂಗಳೂರಿನ ಬಾರ್-ಪಬ್ ಎಲ್ಲಾ ಬೋರಾಗಿ ಬೇಸರ ಕಳೆಯಲು ಮಲೆನಾಡು ಮಡಿಲಿಗೆ ಹೋಗುತ್ತಾರೆ. ಅಲ್ಲಿ ಅವರ ಆಟ-ತುಂಟಾಟ-ಪ್ರೇಮದಾಟಗಳ ರಸಾಯನವೇ 'ಗಾಳಿಪಟ'.

ಗಣೇಶ್, ದಿಗಂತ್ ಮತ್ತು ರಾಜೇಶ್ ಆ ಮೂವರು ಹುಡುಗರು. ದಿಗಂತನ ತಾತನ ಮಲೆನಾಡಿನ ಮನೆಗೆ ಬರುತ್ತಾರೆ ಅವರು. ಅಲ್ಲಿ ತಾತನ ಸ್ನೇಹಿತ ಬೇಟೆಗಾರ(ಅನಂತನಾಗ್)ನ ಮನೆಯಲ್ಲಿ ವಾಸ್ತವ್ಯ ಹೂಡುತ್ತಾರೆ. ಆತನಿಗೆ ಇಬ್ಬರು ಹೆಣ್ಣಮಕ್ಕಳು(ನೀತು, ಭಾವನಾರಾವ್) ಮತ್ತು ವಿಧವೆ ಸೊಸೆ (ಡೈಸಿ ಬೋಪಣ್ಣ). ಭಾವನ ರಾವ್ ರಾಜೇಶ್‌ಕೃಷ್ಣನ್‌ಗೆ ಗಂಟುಬಿದ್ದರೆ, ಗಣೇಶ್ ಡೈಸಿಗೆ ಮತ್ತು ದಿಂಗತ್ ನೀತು ರ ಬೆನ್ನುಬೀಳುತ್ತಾರೆ.

ರಾಜೇಶ್ ಮತ್ತು ದಿಗಂತರ ಪ್ರೀತಿಯ ಗೆಲುವಿಗೆ ಗಣೇಶ್ ಶ್ರಮಿಸಿ-ಯಶಸ್ವಿ ಮಾಡುತ್ತಾನೆ ಆದರೆ ಆತನ ಪ್ರೇಮ ದುರಂತ ಅಂತ್ಯ ಕಾಣುವ ಸಂದರ್ಭದಲ್ಲೇ ಏನೇನೋ ಚಮತ್ಕಾರ ನಡೆದು ಅವರೂ ಒಂದಾಗಿ ಒಟ್ಟಿನಲ್ಲಿ ಚಿತ್ರ ಸುಖಾಂತ್ಯ ಕಾಣುತ್ತದೆ.

ಈ ಚಕ್ಕಂದಗಳ ಮಧ್ಯೆ ಹಂದಿ ಬೇಟೆಯ ಪ್ರಹಸನದ ಒಂದು ಕಥೆಯೂ ಹಾದುಹೋಗುತ್ತದೆ. ಭಟ್ಟರು ಲೇಖಕ ಪೂರ್ಣಚಂದ್ರ ತೇಜಸ್ವಿಯ ಬರಹಗಳ ಪ್ರಭಾವಕ್ಕೆ ಒಳಗಾಗಿರುವುದು ನಿಜ. ತೇಜಸ್ವಿಯರ ಕಾದಂಬರಿಗಳಂತೆ ಉತ್ಸಾಹ, ಚೈತನ್ಯ ಮತ್ತು ಹಾಸ್ಯಗಳ ವಿಡಂಬನಾತ್ಮಕ ಅಪೂರ್ವ ಶೈಲಿಯನ್ನು ಚಲನ ಚಿತ್ರಕ್ಕೆ ಅಳವಡಿಸಲು ಯತ್ನಿಸಿದ್ದಾರೆ. ಅದರಲ್ಲಿ ಬಹುಮಟ್ಟಿಗೆ ಯಶಸ್ವಿಯೂ ಆಗಿದ್ದಾರೆ.

ಯೋಗರಾಜ್ ಭಟ್ಟರ ಅತಿಯಾದ ಆತ್ಮವಿಶ್ವಾಸಕ್ಕೆ ಸ್ವಲ್ಪಮಟ್ಟಿನ ಗರ್ವಭಂಗವಾಗಿದೆ. 'ಮುಂಗಾರುಮಳೆ'ಲ್ಲಿರುವ ಮನಮಿಡಿಯುವಂತಹ ಕಥೆಯ ಸ್ಪರ್ಶ ಈ 'ಗಾಳಿಪಟ'ಕ್ಕಿಲ್ಲದಿರುವುದೇ ಚಿತ್ರದ ದೊಡ್ಡ ಕೊರತೆ. ಉಪ್ಪಿನಕಾಯಿ, ಪಲ್ಯಗಳು ಊಟದ ಜೊತೆಗೆ ಮಾತ್ರವೇ ಹೊರತು ಅದೇ ಊಟವಾಗಲಾರದು ಎಂಬುದು ಭಟ್ಟರ ಅರಿವಿಗೆ ಬಾರದೇಹೋದದ್ದು ವಿಪರ್ಯಾಸ.



ಆದರೆ ತೇಜಸ್ವಿಯವರ ಕಾದಂಬರಿಗಳಲ್ಲಿ ಇವೆಲ್ಲವೂ ಕಥೆಗೆ ಪೂರಕವಾಗಿದ್ದರೆ ಭಟ್ಟರ ಚಿತ್ರದಲ್ಲಿ ಇಂತಹ ಘಟನಾವಳಿಗಳು ಕಥೆಗೆ ಪೂರಕವಾಗಿ ನಿಲ್ಲದೆ ಚಿತ್ರದಿಂದ ಹೊರಗೆ ನಿಲ್ಲುತ್ತವೆ. ನೋಡುವಾಗ ಖುಷಿಯಾದರೂ ನಂತರ ಚಿತ್ರಕ್ಕೂ ಈ ಸನ್ನಿವೇಶಕ್ಕೂ ಸಂಬಂಧವೇನು ಎಂಬ ಪ್ರಶ್ನೆ ಉದ್ಭವಿಸದೇ ಇರದು. ಇಂತದ್ದೇ ಘಟನಾವಳಿಗಳ ಮೇಲೋಗರವೇ 'ಗಾಳಿಪಟ'. ಹಾಗಾಗಿ ಚಿತ್ರ ಎಲ್ಲೂ ಬೋರು ಹೊಡೆಸುವುದಿಲ್ಲ.

ಎಂದಿನಂತೆ ಗಣೇಶರ ಉತ್ಸಾಹಪೂರ್ಣ ಅಭಿನಯ - ಇದಕ್ಕೆ ಪೂರಕವಾದ ಭಟ್ಟರ ವಿಶಿಷ್ಟ ಸಂಭಾಷಣೆಯ ಮೆರುಗು. ಉಳಿದಂತೆ ದಿಗಂತ್, ರಾಜೇಶ್, ಡೈಸಿ, ಭಾವನಾ ಮತ್ತು ಅನಂತನಾಗ್‌ರ ಚೊಕ್ಕ ಅಭಿನಯ ಗಮನ ಸೆಳೆಯುತ್ತದೆ. ಹರಿಕೃಷ್ಣರ ಸಂಗೀತ 'ಮುಂಗಾರುಮಳೆ'ಯ ಮಟ್ಟಕ್ಕೆ ಇಲ್ಲದಿದ್ದರೂ ಪರವಾಗಿಲ್ಲ. ಆದರೆ ಛಾಯಾಗ್ರಾಹಕ ರತ್ನವೇಲು ಮಲೆನಾಡ ಸಿರಿ ಮತ್ತು ಶಿವನಸಮುದ್ರ ರುದ್ರ ರಮಣೀಯ ಸೌಂದಯವನ್ನು ಅದ್ಭುತವಾಗಿ ಸೆರೆ ಹಿಡಿದಿದ್ದಾರೆ.

'ಗಾಳಿಪಟ' ವರ್ಣಮಯವಾಗಿ ಸುಂದರವಾಗಿದೆ. ಪ್ರೇಕ್ಷಕನಿಗೆ ಮುಗಿಲಲ್ಲಿ ಹಾರುವ ಗಾಳಿಪಟದ ಸೌಂದರ್ಯ ನೋಡುವ ಸೌಭಾಗ್ಯವಿಲ್ಲ - ಸೂತ್ರವಿಲ್ಲದ ಕಾರಣ ಗಾಳಿ ಬಂದತ್ತ ತೂರುವುದನ್ನು ನೋಡುವುದಷ್ಟೇ ಭಾಗ್ಯ! ○

'ಮಂಗಳದಲ್ಲಿ ನೀರೆ' ಎಂಬ ಪುಕಾರು


'ಸ್ಪಿರಿಟ್' ಸೆರೆಹಿಡಿದ ಮಹಿಳೆಯ ಛಾಯಾಚಿತ್ರ?




ಮಂಗಳ ಗ್ರಹದಲ್ಲಿ ಮಹಿಳೆಯರಿದ್ದಾರೆಂದು ನಮ್ಮ ಮಾಧ್ಯಮಗಳೆಲ್ಲ ಕಳೆದ ವಾರ ಒಂದು ಭಾರಿ ಒಡ್ಡೋಲಗವನ್ನೇ ನಡೆಸಿಬಿಟ್ಟವು. ಮಂಗಳ ಗ್ರಹದಲ್ಲಿದ್ದ ನಗ್ನ ಮಹಿಳೆಯ ಫೋಟೋವನ್ನು 'ಸ್ಪಿರಿಟ್' ಎಂಬ ಅನ್ವೇಷಕ ನೌಕೆಯು ಸೆರೆಹಿಡಿದಿದೆ ಎಂದು ಡೈಲಿ ಮೇಲ್ ಎಂಬ ಪತ್ರಿಕೆಯು ವರದಿ ಮಾಡಿತ್ತು. ಇದು ವಿಶ್ವದಾದ್ಯಂತ ಕುತೂಹಲ ಕೆರಳಿಸಿತ್ತು. ಅಮೇರಿಕಾದ ಬಾಹ್ಯಾಕಾಶ ಸಂಸ್ಥೆಯಾದ 'ನಾಸಾ'ವು 'ಸ್ಪಿರಿಟ್' ನ್ನು ನಾಲ್ಕು ವರ್ಷಗಳ ಹಿಂದೆಯಷ್ಟೆ ಕಳುಹಿಸಿತ್ತು. ಆಗಸದಲ್ಲಿ ಚದುರಿದ ಧೂಳು, ಅರೆಬೆಳಕು ಕತ್ತಲಿನಲ್ಲಿ ಕಾಣುವ ವಸ್ತುವಿನ ಅಸ್ಪಷ್ಟ ರೂಪಗಳು, ಇತ್ಯಾದಿ ಕೂಡ ಮನುಷ್ಯ, ಪ್ರಾಣಿ ಅಥವಾ ರಾಕ್ಷಸ ಆಕೃತಿಗಳಂತೆಯೇ ಗೋಚರಿಸುತ್ತವೆ. ಇಷ್ಟರಿಂದಲೇ ಮಂಗಳದಲ್ಲಿ ಮಹಿಳೆಯರಿದ್ದಾರೆಂಬ ಅಭಿಪ್ರಾಯಕ್ಕೆ ಬರುವುದು ಸರಿಯಲ್ಲವೆಂದು 'ನಾಸಾ' ಹೇಳಿಕೆ ನೀಡಿತು.

ಮಂಗಳದ ಪರಿಸರ ಮತ್ತು ಜೀವಿಯ ಅಸ್ತಿತ್ವ:

ಮಂಗಳದಲ್ಲಿ ಜೀವಿಗಳಿರುವ ಬಗ್ಗೆ ಬಹಳ ಕಾಲದಿಂದಲೂ ಜಿಜ್ಞಾಸೆ ನಡೆದಿದೆ. ಸೂರ್ಯನ ಪರಿವಾರದಲ್ಲಿರುವ ಗ್ರಹಗಳಲ್ಲಿ 'ಭೂಮಿ' ಮಾತ್ರವೇ ಜೀವಿಗಳು ರೂಪುಗೊಂಡು ಬದುಕುಳಿಯುವಂತಹ ವಾತಾವರಣ ಮತ್ತು ಪರಿಸರ ವ್ಯವಸ್ಥೆಯನ್ನು ಹೊಂದಿದೆ ಎಂಬುದು ಪ್ರಬಲ ಪ್ರತಿಪಾದನೆ. ಒಂದರ್ಥದಲ್ಲಿ ಮಂಗಳ ಗ್ರಹವು ಉಳಿದೆಲ್ಲ ಗ್ರಹಗಳಿಗಿಂತ ಭೂಮಿಯನ್ನು ಹೆಚ್ಚು ಹೋಲುತ್ತದೆ. ಆದರೆ, 'ಭೂಮಿ'ಗಿರುವಂತೆ ಮಂಗಳದಲ್ಲಿ ಉತ್ತಮ ಶಾಖವರ್ಗಾವಣೆ ವ್ಯವಸ್ಥೆಯಿಲ್ಲ, ಸೂರ್ಯನಿಂದ ಹೊರಹೊಮ್ಮುವ ಶಾಖಭರಿತ ಗಾಳಿಯನ್ನು ತಡೆಯಬಲ್ಲ ಕವಚವಿಲ್ಲ, ನೀರನ್ನು ದ್ರವರೂಪದಲ್ಲಿಡುವ ವಾತಾವರಣದ ಒತ್ತಡವಿಲ್ಲದ ಕಾರಣ ಅದು ಅನಿಲರೂಪದಲ್ಲಿರುತ್ತದೆ. ಮಂಗಳ ಗ್ರಹದ ಎರಡೂ ಧ್ರುವಗಳಲ್ಲಿ ಅಗಾಧ ಮಂಜುಗಡ್ಡೆಯಿದೆ. ಹೀಗೆ,



ಜೀವಿಯೊಂದು ಬದುಕಲು ಅತ್ಯವಶ್ಯವಿರುವ ವಾತಾವರಣದ ಕೊರತೆಯಿಂದಾಗಿ ಅಲ್ಲಿ ಜೀವಿಗಳಿಲ್ಲವೆಂದೇ ಪರಿಗಣಿಸಲಾಗಿದೆ. ಮಂಗಳ



ಗ್ರಹದಲ್ಲಿ ಶೀತಾಂಶವು-120 ಡಿಗ್ರಿಯಿಂದ ಆರಂಭವಾಗಿ ಉಷ್ಣಾಂಶವು + 20 ಡಿಗ್ರಿವರೆಗೆ ಇರುತ್ತದೆ.

ಮಂಗಳದ ಅನ್ವೇಷಣೆ:

ಮಂಗಳ ಗ್ರಹದಲ್ಲಿ ಜೀವಿಗಳಿರುವ ಕುರಿತು ಆಳವಾದ ಅಧ್ಯಯನ ನಡೆಸುವ ಸಲುವಾಗಿ ಆ ಗ್ರಹದ ಮೇಲ್ಮೈಚರ್ಯೆಗಳನ್ನು ಹತ್ತಿರದಿಂದ ಛಾಯಾಚಿತ್ರಗಳಿಂದ ಸೆರೆಹಿಡಿಯಲು 1970ರ ದಶಕದಲ್ಲಿ ವೈಕಿಂಗ್ ಕಾರ್ಯಕ್ರಮದಡಿಯಲ್ಲಿ ವೈಕಿಂಗ್ 1 ಮತ್ತು ವೈಕಿಂಗ್ 2 ಎಂಬ ಗಗನ ನೌಕೆಗಳನ್ನು 'ನಾಸಾ' ಕಳುಹಿಸಿತ್ತು. ಅಲ್ಲಿ ಸೂಕ್ಷ್ಮಜೀವಿಗಳು ಇರುವ ಕುರಿತು ಅಲ್ಲಿನ ಮಣ್ಣಿನ ಮಾದರಿಗಳನ್ನು ಕಲೆಹಾಕಿ ವಿಶ್ಲೇಷಿಸಲಾಯಿತು. ಈ ಅನ್ವೇಷಕ ನೌಕೆಗಳು ಕಳುಹಿಸಿದ ಛಾಯಾಚಿತ್ರಗಳನ್ನೇ 1980 ಮತ್ತು 1990ರ ದಶಕದವರೆಗೂ ಉಪಯೋಗಿಸಿಕೊಳ್ಳಲಾಯಿತು. ಆದರೆ, 'ಎಕ್ಸ್‌ಟ್ರೀಮೋಫೈಲ್ಸ್'(Extremopiles) ಜೀವಿಗಳ ಕುರಿತಂತೆ ಇಂದು ಅಭಿವೃದ್ಧಿ ಹೊಂದಿರುವ ಆಧುನಿಕ ಜ್ಞಾನದ ಹಿನ್ನೆಲೆಯಲ್ಲಿ ವೈಕಿಂಗ್ ಕಾರ್ಯಕ್ರಮದ ಅನ್ವೇಷಣೆಗಳು ಕೊರತೆಯಿಂದ ಕೂಡಿದ್ದವು ಎಂದು ಅಭಿಪ್ರಾಯ ಪಡಲಾಯಿತು. (ಅತಿ ತೀವ್ರತರದ ಶೀತಾಂಶದಲ್ಲೂ ಮತ್ತು ಅತಿ ತೀವ್ರತರದ ಉಷ್ಣ ಪರಿಸರದಲ್ಲೂ ವಾಸಮಾಡಬಲ್ಲ ಸೂಕ್ಷ್ಮ ಜೀವಿಗಳಿಗೆ 'ಎಕ್ಸ್‌ಟ್ರೀಮೋಫೈಲ್ಸ್' ಎನ್ನುತ್ತಾರೆ).

ಗಗನ ನೌಕೆಗಳು:

ಮಂಗಳ ಗ್ರಹದ ಅಧ್ಯಯನಕ್ಕಾಗಿ ಇದುವರೆಗೂ ಡಜನ್‌ಗಟ್ಟಲೆ ಆರ್ಬಿಟರ್ಸ್ (ಗ್ರಹದ ಮೇಲಿಳಿಯದೆ ಅದರ ಸುತ್ತಲೂ ಸುತ್ತುವ ಗಗನನೌಕೆ), ಲ್ಯಾಂಡರ್ಸ್ (ಗ್ರಹದ ಮೇಲೆ ಇಳಿಯುವ ನೌಕೆ), ಮತ್ತು ರೋವರ್ಸ್ (ಗ್ರಹದ ಮೇಲಿಳಿದು ಸುತ್ತಾಡಿ ಬರುವ ಮತ್ತು ಮನುಷ್ಯರನ್ನೂ ಸಹ ಹೊತ್ತೊಯ್ಯುವ ನೌಕೆ) ಗಗನನೌಕೆಗಳನ್ನು ಕಳುಹಿಸಿಲಾಗಿದೆ. ಹೀಗೆ ಕಳುಹಿಸಲಾದ ಗಗನನೌಕೆಗಳಲ್ಲಿ ಮೂರನೇ ಎರಡರಷ್ಟು ನೌಕೆಗಳು ವಿಫಲಗೊಂಡಿವೆ. ಅಮೇರಿಕಾದ ನಾಸಾ ಸಂಸ್ಥೆಯು ವೈಕಿಂಗ್ ನೌಕೆಗಳನ್ನು ಉಡಾಯಿಸುವ ಮೊದಲೇ ಸೋವಿಯತ್ ಒಕ್ಕೂಟವು 1964ರಲ್ಲಿ 'ಮೇರೀನರ್ 4' ನ್ನು ಕಳುಹಿಸಿಕೊಟ್ಟಿತ್ತು. ನಂತರ 1971ರಲ್ಲಿ 'ಮಾರ್ಸ್ 2 ಮತ್ತು ಮಾರ್ಸ್ 3' ನೌಕೆಗಳನ್ನು ಅದು ಕಳುಹಿಸಿತ್ತಾದರೂ, ಅವು ಮಂಗಳ ಗ್ರಹದಲ್ಲಿಳಿದ ಕೂಡಲೇ ಭೂಮಿಯಿಂದ ನಿಯಂತ್ರಣ ಕಳೆದುಕೊಂಡವು. 1996ರಲ್ಲಿ ನಾಸಾವು 'ಮಾರ್ಸ್ ಗ್ಲೋಬಲ್ ಸರ್ವೇಯರ್' ಮತ್ತು 'ಮಾರ್ಸ್ ಪಾತ್‌ಫೈಂಡರ್' ಗಳನ್ನು ಕಳುಹಿಸಿತ್ತು. ಇವು ಮಂಗಳ ಗ್ರಹದ ಹತ್ತುಹಲವು ಆಕರ್ಷಕ ಫೋಟೋಗಳನ್ನು ನಮಗೆ ನೀಡಿವೆ.

2037ರ ಹೊತ್ತಿಗೆ ನಾಸಾವು ಮನುಷ್ಯನನ್ನು ಮಂಗಳ ಗ್ರಹಕ್ಕೆ ಕಳುಹಿಸಲು ಯೋಜಿಸಿದೆ. ○

JANASHAKTHI KANNADA VARA PATRIKE : Printed by G.N.NAGARAJ, No 12. 18th Cross, S.R.Nagar, BANGALORE-560027 Published by: G.N.NAGARAJ, No 12. 18th Cross, S.R.Nagar, BANGALORE-560027, Karnataka on behalf of / owned by COMMUNIST PARTY OF INDIA (MARXIST) and Printed at : Kriya Prakashana, 12. 18th Cross, S.R.Nagar, BANGALORE - 560 027 Karnataka (State) and Published at BANGALORE No 12. 18th Cross, S.R.Nagar, BANGALORE-560027 Editor S.Y.GURURSHANTH, No12. 18th Cross, S.R.Nagar, BANGALORE - 560027 Editor : S.Y.GURUSHANTH